


ಪುಸ್ತಕ ಪ್ರಪಂಚ

ವಿಷಯ ಸೂಚಿ

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

(ವಿಶೇಷ ಸಂಚಿಕೆ)

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೩೮ ನವೆಂಬರ್ ೧೯೮೩ ಸಂಚಿಕೆ ೪

ಪಕ್ಷಿಗಳ ಮೃಗಯಾವಿಹಾರ

ಮೈಸೂರು ನಗರ ಅಕ್ಕಪಕ್ಕದ ಪ್ರೇಕ್ಷಣೀಯ ಸ್ಥಳಗಳಿಂದ ಕೂಡಿ ಪ್ರವಾಸಿಗಳಿಗೆ ಐತಿಹಾಸಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಅಭಿರುಚಿಗಳನ್ನು ಪೂರೈಸುವಂತೆಯೇ ಪ್ರಾಣಿ ಜೀವನದಲ್ಲಿ ಆಸಕ್ತಿ ತಾಳುವವರಿಗೂ ಅನುಕೂಲವನ್ನು ಒದಗಿಸುತ್ತದೆ. ಅಂಕಿಯು ಸಂಕೋಲೆಯೊಳಗಿರುವ ಸಾನ್‌ಬಂಗಲೆಯು ಖಗಮೃಗಗಳು ಸನಿಹದಿಂದ ಅವುಗಳನ್ನು ನೋಡುವ ಅವಕಾಶ ಒದಗಿಸಿದರೆ, ಮೈಸೂರಿನಿಂದ ಕೇವಲ ೧೫ ಕಿ.ಮೀ. ದೂರದಲ್ಲಿರುವ ರಂಗನತಿಟ್ಟು ಪಕ್ಷಿಧಾಮ ಮುಕ್ತಜೀವನ ನಡೆಸುವ ಪಕ್ಷಿಗಳನ್ನು ಅವುಗಳ ನೈಜ ಪರಿಸರದಲ್ಲಿ ವೀಕ್ಷಿಸುಸದವಕಾಶವನ್ನು ಒದಗಿಸುತ್ತದೆ. ಗಂಭೀರವಾಗಿ ಹರಿದು ಬರುವ ಕಾವೇರಿ ಹತ್ತಿರದಲ್ಲಿಯೇ ಎರಡು ಸಾರಿ ಬಾಗಿ ನಡುವೆ ನೀರು ನಿಂತಂತೆ ಕಾಣುವ ಮನೋಹರ ಸರೋವರವೊಂದನ್ನು ಕಲ್ಪಿಸಿದೆ. ಸುತ್ತಲ ಪ್ರಕೃತಿಯ ಸಹಜ ಸೌಂದರ್ಯ ಇದನ್ನು ಸುಂದರ ತಾಣವನ್ನಾಗಿ ನಿರ್ಮಿಸಿದೆ. ಕೆಲವು ಅಪೂರ್ವ ಜಾತಿಯ ನೀರು ಹಕ್ಕಿಗಳು ಇದನ್ನು ತಮ್ಮ ಚಳಿಗಾಲದ ತಂಗುದಾಣವನ್ನಾಗಿ ಆರಿಸಿಕೊಂಡು ಪಕ್ಷಿಕಾಶಿಯನ್ನು ಸೃಷ್ಟಿಸಿವೆ. ಹಾರುವ ಗಾರುಡಿಗ ವಿದ್ಯೆಯನ್ನು ಮೈಗೂಡಿಸಿಕೊಂಡು ಆಕಾಶ ಜೀವನಕ್ಕೆ ಹೊಂದಿಕೊಂಡ ಈ ಸರ್ವಾಂಗೀಣ ಸುಂದರ ಪ್ರಾಣಿಗಳು ತಮ್ಮ ತವರುನೆಲೆ ಉತ್ತರದ ಹಿಮಾಲಯದ ತಪ್ಪಲಿನಲ್ಲಿ ಚಳಿಗಾಲ ಆರಂಭವಾದಾಗ ಇಲ್ಲಿಗೆ ಬಂದು ಚಳಿಗಾಲವನ್ನು ಆರಾಮವಾಗಿ ಕಳೆದು, ತಮ್ಮ ತವರಿನಲ್ಲಿ ಪುನಃ ಬೇಸಗೆ ಆರಂಭವಾದಾಗ ಹಿಂದಿರುಗುವ ಶ್ರೀಮಂತ ಸಂಪ್ರದಾಯವನ್ನು ಆಚರಿಸುತ್ತವೆ.

ಪಕ್ಷಿಗಳೂ ಸೇರಿದಂತೆ ಪ್ರಾಣಿಗಳು ತಾವು ವಾಸಿಸುವ ಪರಿಸರದೊಂದಿಗೆ ಸಾಮರಸ್ಯ ಸಾಧಿಸಲು ಪ್ರಯತ್ನಿಸುತ್ತವೆ. ಇದು ಎಲ್ಲ ಜೀವಿಗಳ ಪ್ರಧಾನ ಲಕ್ಷಣ. ತನ್ನ ಪರಿಸರದಲ್ಲಿನ ಪರಿಸ್ಥಿತಿಗಳು ಪ್ರಕೃತಿಯ ವಿಕೋಪದಿಂದ ಪ್ರತಿಕೂಲ ವಾಗಿ ಪರಿಣಮಿಸಿದಾಗ ಇದನ್ನು ಬಗೆಹರಿಸಿಕೊಳ್ಳಲು ಅನೇಕ ವಿಧಾನಗಳನ್ನು ಅನುಸರಿಸುತ್ತವೆ. ಪಕ್ಷಿಗಳು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಗಮನಾರ್ಹ ವಾದ ಮತ್ತು ಕ್ರಿಯಾತ್ಮಕವಾದ ವಿಧಾನದಲ್ಲಿ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುವ ಕ್ರಮವನ್ನು ರೂಢಿಸಿಕೊಂಡಿವೆ. ತಮ್ಮ ವಸತಿ ಪ್ರದೇಶದ ಹವಾಮಾನ ಸನ್ನಿವೇಶಗಳು ಬದುಕಿಗೆ ಬಾಧಕವಾಗುವಂತೆ ಬದಲಾದಾಗ ಅನುಕೂಲ ಪರಿಸ್ಥಿತಿಗಳಿರುವ ಪ್ರದೇಶಗಳಿಗೆ ಪಯಣಿಸುತ್ತವೆ. ಕೆಲಕಾಲ ಅಲ್ಲಿ ಉಳಿದಿದ್ದು ತವರಿನ ಪರಿಸ್ಥಿತಿ ಅನುಕೂಲವಾಗಿ ಬದಲಾದಾಗ ಪುನಃ ಹಿಂದಿರುಗಿ ಬರುತ್ತವೆ. ಇದು ಪ್ರತಿ ವರ್ಷವೂ ನಡೆಯುವ ಕಾರ್ಯಕ್ರಮ. ಇದನ್ನು ವಲಸೆ ಎಂದು ಕರೆಯುತ್ತಾರೆ. ವಲಸೆ ಎಂದರೆ ಒಂದು ಸ್ಥಳದಿಂದ ಇನ್ನೊಂದಕ್ಕೆ ತಮ್ಮ ವಾಸ್ತವ್ಯವನ್ನು ಬದಲಾಯಿಸುವುದು ಎಂದು ಅರ್ಥ. ಆದರೆ ಪಕ್ಷಿಗಳಿಗೆ ಸಂಬಂಧಿ ಸಿದಂತೆ ಈ ಪದಕ್ಕೆ ಮತ್ತೊಂದು ವಿಶಿಷ್ಟಾರ್ಥವಿದೆ. ಅವು ಸ್ಥಳ ಬದಲಾಯಿಸು ವುದೇ ಅಲ್ಲದೆ ತಮ್ಮ ಸ್ವಸ್ಥಳಕ್ಕೆ ಹಿಂದಿರುಗಿ ಬರುತ್ತವೆ ಕೂಡ. ಪಕ್ಷಿಗಳ ಜೀವನವು ಉಯ್ಯಾಲೆಯ ತೂಗುವಿಕೆಯಂತೆ ಎರಡು ವಸತಿಗಳ ನಡುವೆ ಪರ್ಯಾಯವಾಗಿ ನಡೆಯುತ್ತದೆ. ಒಂದು ವಸತಿಯನ್ನು ಸಂತಾನೋತ್ಪತ್ತಿಗೂ ಮತ್ತೊಂದನ್ನು ಆಹಾರ ಗಳಿಕೆಗೂ ಬಳಸಿಕೊಳ್ಳುತ್ತವೆ.

ಭೂಮಿಯ ವಾತಾವರಣ ವಿಶಿಷ್ಟ ರೀತಿಯಲ್ಲಿ ದ್ವಿಧ್ರುವ ಬದಲಾವಣೆ ಯನ್ನು ತೋರುತ್ತದೆ. ಭೂಮಧ್ಯ ರೇಖೆಯಿಂದ ಉತ್ತರಕ್ಕೆ ಉತ್ತರ ಗೋಳಾರ್ಧ. ದಕ್ಷಿಣಕ್ಕೆ, ದಕ್ಷಿಣ ಗೋಳಾರ್ಧ ಉತ್ತರದಲ್ಲಿ ಬೇಸಗೆ ಇರುವಾಗ, ದಕ್ಷಿಣದಲ್ಲಿ ಚಳಿಗಾಲ ಮತ್ತು ಉತ್ತರದಲ್ಲಿ ಚಳಿಗಾಲವಿದ್ದಾಗ, ದಕ್ಷಿಣದಲ್ಲಿ ಬೇಸಗೆ. ಪರ್ಯಾಯವಾಗಿ ಬದಲಾಗುವ ಋತುಗಳ ಈ ಸೌಕರ್ಯವನ್ನು ಪಕ್ಷಿ ಗಳು ತಮ್ಮ ಅನುಕೂಲಕ್ಕೆ ಬಳಸಿಕೊಂಡಿವೆ. ಹಾರುವ ಸ್ವಭಾವ ಇದಕ್ಕೆ ಇಂಬು ಕೊಟ್ಟಿದೆ.

ಒಂದು ನಿಗದಿತ ಪ್ರದೇಶದಲ್ಲಿ ಒಂದು ಋತುವಿನಲ್ಲಿ ಸಾಮಾನ್ಯವಾಗಿ ವಸಂತ ಮತ್ತು ಗ್ರೀಷ್ಮ ಋತುಗಳಲ್ಲಿ ಪಕ್ಷಿಗಳು ಸಮೃದ್ಧವಾಗಿರುತ್ತವೆ ಮತ್ತು ಶರದೃತುವಿನಲ್ಲಿ ವಿರಳವಾಗಿರುತ್ತವೆ. ಈ ಘಟನೆ ಪ್ರಾಚೀನ ಕಾಲದಿಂದಲೂ

ವಿಚಾರವಂತರ ಗಮನವನ್ನು ಸೆಳೆದಿದೆ, ಕುತೂಹಲವನ್ನು ಕೆರಳಿಸಿದೆ, ಆಸಕ್ತಿಯನ್ನು ಅರಳಿಸಿದೆ. ಅಂದಿಗೆ ಈ ಘಟನೆಯ ವಿವರಣೆ ಸುಲಭವಾಗಿರಲಿಲ್ಲ. ವಿಜ್ಞಾನದ ಪ್ರಪಿತಾಮಹನೆಂದು ಪ್ರಸಿದ್ಧನಾದ ಅರಿಸ್ಟಾಟಲ್‌ಗೆ ಕೂಡ ಈ ವಿಷಯ ತಿಳಿದಿತ್ತು. ಆದರೆ ಆತ ನೀಡಿದ ವಿವರಣೆ ಅಸಂಬದ್ಧವಾಗಿತ್ತು. ಪರ್ಯಾಯವಾಗಿ ಬದಲಾಗುವ ಹವೆಯ ಪರಿಸ್ಥಿತಿಗಳಿಗೂ ಪಕ್ಷಿಗಳ ವಲಸೆ ವರ್ತನೆಗೂ ತಾಳ ಹಾಕುವ ಪ್ರಯತ್ನ ನಡೆದುದು ಕೇವಲ ಇತ್ತೀಚಿನ ವರ್ಷಗಳಲ್ಲಿಯಷ್ಟೆ. ಆದಿಯಲ್ಲಿ ಕಾಕತಾಳೀಯವೆಂದು ಕಡೆಗಾಣಿಸಿದರೂ ಘಟನೆಗಳನ್ನು ಪಟ್ಟಿಮಾಡಿ ತುಲನೆ ನಡೆಸಿದಾಗ ಇವುಗಳ ನಡುವೆ ಇರುವ ನಿಜವಾದ ಸಂಬಂಧದ ಸುಳಿವು ದೊರಕಿತು. ಬೇಸಗೆಯಲ್ಲಿ ದೀರ್ಘಾವಧಿ ಹಗಲು, ಬಿಸಿ ಹವೆ, ಮಳೆ ಬೆಳೆಗಳು ಹಾಗೂ ಕೀಟಗಳು ಸಮೃದ್ಧ. ಅದೇ ಚಳಿಗಾಲದಲ್ಲಿ ಹಗಲು ಕಡಿಮೆ, ತಂಪು ಹವೆ, ಅಥವಾ ಕೊರೆಯುವ ಚಳಿ. ಮಳೆ ಇಲ್ಲ. ಮರಗಿಡಗಳ ಎಲೆಗಳುದುರಿ ಬೋಳು ನೆಲದ ಮೇಲಿನ ಹೊದರು ಪೊದರುಗಳು ಮಂಜಿನಿಂದ ಮುಚ್ಚಿರುತ್ತವೆ. ಮೇಲಾಗಿ ಆಹಾರವಾಗುವ ಕೀಟಗಳು ವಿರಳವಾಗುತ್ತವೆ. ಅತ್ಯುತ್ತಮ ಎನ್ನಬಹುದಾದ ಜೀರ್ಣಶಕ್ತಿ, ಅನಂತ ಚಟುವಟಿಕೆ ಪಕ್ಷಿಗಳ ವಿಶೇಷ. ಆದ್ದರಿಂದ ಹೆಚ್ಚು ಆಹಾರ ಬೇಕು, ಹೆಚ್ಚು ಆಹಾರ ಹುಡುಕಲು ಹೆಚ್ಚು ಕಾಲಾವಕಾಶ ಬೇಕು. ಹೀಗಾಗಿ ಪಕ್ಷಿಗಳು ಬೇಸಗೆಯ ಪ್ರದೇಶಗಳನ್ನು ಆರಿಸಿಕೊಂಡು ಹೊರಡುವುದರಲ್ಲಿ ಅತಿಶಯವೇನಿಲ್ಲ. ಅಪ್ಪ ಹಾಕಿದ ಆಲದ ಮರದ ಬಳಿಯೇ ಉಳಿದು ಕಷ್ಟವಾದರೂ ಬಾಳಬೇಕೆಂಬ ಮೊಂಡು ಆದರ್ಶ ಪಕ್ಷಿಗಳಿಗಿಲ್ಲ. ಅವು ವಾಸ್ತವತಾವಾದಿಗಳು. ಭೂಮಿಯ ಎರಡೂ ಗೋಳಾರ್ಧಗಳ ಬೇಸಗೆಯ ಅನುಕೂಲವನ್ನು ಅನುಭೋಗಿಸುತ್ತವೆ. ಇದಕ್ಕೆಂದೆ ದೂರವಾದರೂ ಚಿಂತೆಯಿಲ್ಲ. ಅನುಕೂಲ ಪರಿಸ್ಥಿತಿಗಳಿರುವೆಡೆಗೆ ಕಷ್ಟವಾದರೂ ಲೆಕ್ಕಿಸದ ವಲಸೆ ಪಯಣ! ಉತ್ತರ ಕೆನಡಾದ ಕಡಲುದಂಡೆ ಪ್ರದೇಶದಲ್ಲಿ ವಾಸಿಸುವ ಗೋಲ್ಡನ್ ಪ್ಲವರ್ ಹಕ್ಕಿಗೆ ಅದರ ತವರಿನಲ್ಲಿ ಕಾಣಿಸಿಕೊಳ್ಳುವ ಆರ್ಕ್ಟಿಕ್ ಮಾದರಿ ಬೇಸಗೆಯಲ್ಲಿ ೩ ತಿಂಗಳುಗಳು ಸಾಕಷ್ಟು ಆಹಾರ ದೊರಕುತ್ತದಾದರೂ ಉಳಿದ ೮, ೯ ತಿಂಗಳು ಅಲ್ಲಿಯ ಕೊರೆಯುವ ಚಳಿಯಲ್ಲಿ ಯಾವ ಪ್ರಾಣಿಯೂ ಬದುಕುಳಿಯುವುದು ಕಷ್ಟ ಸಾಧ್ಯ. ಅದೇ ಕಾಲಕ್ಕೆ ೮೦೦೦ ಮೈಲಿ ದೂರಕ್ಕಿರುವ ದಕ್ಷಿಣ ಗೋಳಾರ್ಧದ ಅರ್ಜೆಂಟೈನಾ

ದೇಶದಲ್ಲಿ ಅದೇ ತೆರನಾದ ಆಹಾರ ಜೊತೆಗೆ ಬೆಚ್ಚಗಿನ ಹವೆ ಇರುತ್ತದೆ. ಅದ್ದರಿಂದ ತನ್ನ ತವರು ನೆಲೆಯಲ್ಲಿ ತಂಗಾಳಿ ಬೀಸಿ, ಚಳಿ ಹರಡುವ ಮುನ್ಸೂಚನೆ ದೊರಕುತ್ತಿದ್ದಂತೆಯೇ ವಲಸೆ ಹೊರಡುತ್ತದೆ. ಅರ್ಜೆಂಟೈನ ಪ್ರದೇಶಕ್ಕೆ ಬಂದು ನೆಮ್ಮದಿಯಿಂದ ಕಾಲ ಕಳೆಯುತ್ತದೆ. ತನ್ನ ತವರಿನಲ್ಲಿ ಶರದ್ ಕಳೆದು ಗ್ರೀಷ್ಮ ಆರಂಭವಾಗುತ್ತಿದ್ದಂತೆ ಹಿಂದಿರುಗುತ್ತದೆ. ಉತ್ತರ ಗೋಳಾರ್ಧದ ಕಠಿಣ ಚಳಿಯಿಂದಾಗಿಯೇ ಅವು ವಲಸೆ ಹೋಗುತ್ತವೆಂದು ಖಂಡಿತವಾಗಿ ಹೇಳುವುದು ಸಲ್ಲ. ಏಕೆಂದರೆ ಉತ್ತರ ಅಮೆರಿಕಾದ ಕೆಲವು ಹಕ್ಕಿಗಳು ಚಳಿಗಾಲದ ಚಳಿ ಆವರಿಸುವ ಮೊದಲೇ ಜುಲೈ ಆಗಸ್ಟ್ ತಿಂಗಳುಗಳಲ್ಲಿಯೇ ವಲಸೆ ಹೋಗುತ್ತವೆ. ಆದ್ದರಿಂದ ವಲಸೆಗೆ ಇಂತಹುವೇ ಕಾರಣ ಎಂದು ನಿರ್ದಿಷ್ಟವಾಗಿ ಹೇಳುವುದು ತಪ್ಪಾಗುತ್ತದೆ. ಪಕ್ಷಿವಲಸೆ ತಜ್ಞ ಮೊರಿಯಾನ್‌ರ ಪ್ರಕಾರ ವಲಸೆ ಪ್ರವೃತ್ತಿ ಅವುಗಳ ಹಾರುವ ನಡತೆಯುಷ್ಟೆ ಹಳೆಯದಿರಬಹುದು. ಪಕ್ಷಿಗಳು ಪ್ಲೈಸ್ಟೋಸೀನ್ ಅವಧಿಯಲ್ಲಿ ಉದ್ಭವಿಸಿದವು. ಆ ಅವಧಿ ವಾತಾವರಣದ ವೈಪರೀತ್ಯಗಳಿಂದ ಒಡಗೂಡಿತ್ತು. ಈ ಕಾರಣವೆ ಪಕ್ಷಿಗಳಲ್ಲಿ ವಲಸೆ ಕ್ರಮ ಬೆಳೆಯಲು ಪೂರಕವಾಗಿರಬಹುದು ಎಂಬುದು ಅವರ ಅಭಿಪ್ರಾಯ. ಉತ್ತರಾರ್ಧಗೋಳದಲ್ಲಿ ಉಳಿದು ಸಂತಾನೋತ್ಪತ್ತಿ ನಡೆಸುವ ಬಹುಪಾಲು ಹಕ್ಕಿಗಳು ಮೂಲತಃ ದಕ್ಷಿಣ ಗೋಳಾರ್ಧದ ನಿವಾಸಿಗಳಾಗಿದ್ದಿರಬಹುದು ಮತ್ತು ವಲಸೆ ಅವುಗಳ ವಾರ್ಷಿಕ ತವರು ಭೇಟಿಯನ್ನು ಸೂಚಿಸಬಹುದೆಂಬುದು ಇನ್ನೊಂದು ವಾದ.

ವಲಸೆ ಹೋಗದೆ ತವರು ನೆಲೆಯಲ್ಲಿಯೇ ಉಳಿದು ಚಳಿಗಾಲವನ್ನು ಕಳೆಯುವ ವಿಲೊಟಾರ್‌ಮಿಗನ್ ಎಂಬ ಉತ್ತರ ಧ್ರುವ ಪ್ರದೇಶದ ಗೌಜಲಹಕ್ಕಿಗಳಿವೆ. ಶರದೃತುವಿನಲ್ಲಿ ಮಂಜಿನಂತೆ ಬಿಳಿಯ ಬಣ್ಣ ತಾಳಿ ಮಂಜು ಕವಿದ, ನೀರು ಹೆಪ್ಪುಗಟ್ಟಿದ ಧ್ರುವಪ್ರದೇಶದಲ್ಲಿಯೇ ಉಳಿದು, ಬೇಸಗೆಯಲ್ಲಿ ಕೀಟಾಹಾರಿಯಾದರೂ ಚಳಿಗಾಲದಲ್ಲಿ ವಿಲೊಮರದ ಕಡ್ಡಿ–ಕಸಗಳನ್ನೆ ತಿಂದು ಬದುಕುತ್ತವೆ.

ಪಕ್ಷಿ ಜೀವನದ ಈ ಅದ್ಭುತ ಜಗತ್ತಿಗಷ್ಟೇ ಅಲ್ಲ. ಪ್ರಾಣಿ ವಿಜ್ಞಾನಿಗೂ ತಿಳಿದುಬಂದುದು ಪಕ್ಷಿ ವೀಕ್ಷಣಾ ಹವ್ಯಾಸಿಗರಿಂದ ಮತ್ತು ಇದರಲ್ಲಿ ಆಸಕ್ತಿ ವಹಿಸಿದ ಕಡಲ ದಂಡೆಯ ದೀವಟಿಗೆ ಗೋಪುರಗಳ ಕೆಲಸಗಾರರ ಸತತ ಶ್ರಮ

ದಿಂದ ಈಚೆಗಷ್ಟೆ ಪ್ರಾಣಿವಿಜ್ಞಾನಿ, ಪಕ್ಷಿತಜ್ಞರು, ತಮ್ಮ ಗಮನವನ್ನು ಇತ್ತ ಹರಿಸಿದ್ದಾರೆ.

ಉತ್ತರ ಗೋಳಾರ್ಧದ ಬಹುಪಾಲು ಹಕ್ಕಿಗಳು ತಮ್ಮ ನೆಲೆಯ ಶರದೃತುವನ್ನು ಕಳೆಯಲು ಆಫ್ರಿಕಾದ ದಕ್ಷಿಣ ಭಾಗ ಮತ್ತು ದಕ್ಷಿಣ ಅಮೆರಿಕೆಯ ದಕ್ಷಿಣ ತುದಿ ಪ್ರದೇಶಗಳಿಗೆ ವಲಸೆ ಬರುತ್ತವೆ. ಆದರೆ ದಕ್ಷಿಣಗೋಳಾರ್ಧದಿಂದ ಉತ್ತರ ಗೋಳಾರ್ಧದ ಕಡೆಗೆ ವಲಸೆ ಬರುವುದು ಅಪರೂಪ. ಕೆಲವು ಅಪವಾದ ಗಳೆಂದರೆ ಅಂಟಾರ್ಟಿಕಾದ ಅಂಚಿನಲ್ಲಿ ವಾಸಿಸುವ ಪೆಟ್ರೆಲ್ ಕೆನಡಾದ ನ್ಯೂಫೌಂಡ್‌ಲ್ಯಾಂಡ್‌ವರೆಗೆ ವಲಸೆ ಬರುತ್ತದೆ. ಅಂಟಾರ್ಟಿಕ ಸನಿಹದ ದ್ವೀಪ ವಾಸಿ ಶಿಯರ್‌ವಾಟರ್ ಪಕ್ಷಿ ಫೆಸಿಫಿಕ್ ಮಹಾಸಾಗರದ ಮೂಲಕ ಆಗ್ನೇಯ ಆಸ್ಟ್ರೇಲಿಯಾದ ಬಾಸ್ ಜಲಸಂಧಿಯನ್ನು ಹಾದು ಜಪಾನನ್ನು ದಾಟಿ ಬೇರಿಂಗ್ ಸಮುದ್ರ ಪ್ರದೇಶಕ್ಕೆ ವಲಸೆ ಬಂದು ಹಿಂದಿರುಗುತ್ತಾ ಉತ್ತರ ಅಮೆರಿಕಾ ಖಂಡದ ಪಶ್ಚಿಮ ಕರಾವಳಿಯ ಉದ್ದಕ್ಕೂ ಹಾರಿಬರುತ್ತದೆ.

ಪಕ್ಷಿ ಜೀವನದಲ್ಲಿ ವಲಸೆ ಕೇವಲ ಅದ್ಭುತವಾಗುವುದಾದರೆ ವಲಸೆ ಕಾಲ ದಲ್ಲಿ ಸಾಧಿಸುವ ಅನೇಕ ವಿಷಯುಗಳು ಪವಾಡಗಳಿದ್ದಂತೆ. ವಲಸೆ ಹೋದ ಅಸಂಖ್ಯಾತ ಆಸ್ಟ್ರೇಲಿಯಾ ಹಕ್ಕಿಗಳು ತವರ ಕಿರುದ್ವೀಪ ನೆಲೆಗಳಿಗೆ ಪ್ರತಿ ನವೆಂಬರ್ ತಿಂಗಳು ಒಂದೇ ಸಂಜೆ ಒಟ್ಟಾಗಿ ಹಿಂದಿರುಗುತ್ತವೆ. ವಲಸೆ ಪಯಣ ದಲ್ಲಿ ಸಾವಿರಾರು ಮೈಲಿಗಳ ದೂರ ಹೋಗಿಬರುತ್ತವೆ. ಕಡಲ ಮಟ್ಟದಿಂದ ೩೦೦೦ ದಿಂದ ೫೦೦೦ ಅಡಿ ಎತ್ತರದಲ್ಲಿ ಹಾರುತ್ತವೆ ಮತ್ತು ಗಂಟೆಗೆ ೪೦ ರಿಂದ ೬೦ ಮೈಲಿಯ ವೇಗದಲ್ಲಿ ಚಲಿಸುತ್ತವೆ. ಹಮ್ಮಿಂಗದಂತಹ ಜೀರುಂಡೆ ಗಾತ್ರದ ಪುಟ್ಟ ಹಕ್ಕಿ ೩೦೦ ಮೈಲಿ, ಯೂರೋಪಿನ ಗುಬ್ಬಚ್ಚಿಗಳು ೫೦೦ ಮೈಲಿ, ರಾಬಿನ್ ೧೦೦೦ ಮೈಲಿ, ಕಾಡುಕೋಳಿ ೨೫೦೦ ಮೈಲಿ, ಬಂಗಾರಫ್ಲವರ್ ೭೦೦೦ ಮೈಲಿಗಳು ದೂರ ವಲಸೆ ಹೋಗಿ ಪುನಃ ಅಷ್ಟೇ ದೂರ ಹಾರಿಬರುತ್ತವೆ. ಇದು ಪ್ರತಿ ವರ್ಷ ನಡೆಯುವ ಘಟನೆ. ಇದರಲ್ಲಿ ನಿಜವಾಗಿ ಮ್ಯಾರಥಾನ್ ಚಾಂಪಿಯನ್ ಎಂದರೆ ೧೧೦೦೦ ಮೈಲಿ ದೂರದ ವಲಸೆ ಪ್ರದೇಶಕ್ಕೆ ಹೋಗಿ ಪುನಃ ೧೧೦೦೦ ಮೈಲಿ ಹಾರಿ ಹಿಂದಿರುಗುವ ಧ್ರುವಪ್ರದೇಶದ ಟರ್ನ್‌ಹಕ್ಕಿ. ವಲಸೆ ಹೋಗುವ ಹಕ್ಕಿಗಳು ಪಯಣ ಕಾಲಕ್ಕೆ ೨ ರಿಂದ ೩ ಸಾವಿರ ಮೈಲಿ ಗಳನ್ನು ತಡೆರಹಿತವಾಗಿ ಹಾರುತ್ತವೆ, ಅಂದರೆ ವಿಶ್ರಾಂತಿಗಾಗಿ ದಾರಿಯಲ್ಲಿ

ಎಲ್ಲಿಯೂ ನಿಲ್ಲದೆ ೧೦ ರಿಂದ ೨೬ ಗಂಟೆಗಳವರೆಗೆ ಸತತವಾಗಿ ಹಾರುತ್ತವೆ. ಇದು ಈ ಹಕ್ಕಿಗಳ ಜೀವನದ ಅದ್ಭುತಗಳಲ್ಲಿ ಅದ್ಭುತ. ವಾರ್ಷಿಕ ವಲಸೆ ಪಯಣ ಎಷ್ಟು ಸುವ್ಯವಸ್ಥಿತವಾಗಿ ನಡೆಯುತ್ತದೆ ಎಂದರೆ ಪಕ್ಷಿಗಳು ತಮ್ಮ ವಲಸೆ ನಿವಾಸವನ್ನು ಪ್ರತಿವರ್ಷವೂ ಕರಾರುವಾಕ್ಕಾಗಿ ನಿರ್ಧರಿತ ತಿಂಗಳು ದಿನಗಳಲ್ಲಿ ತಲಪುತ್ತವೆ. ಇದನ್ನರಿತ ಅಮೆರಿಕೆಯ ಮೂಲನಿವಾಸಿಗಳಾದ ರೆಡ್ ಇಂಡಿಯನ್ನರು ತಮ್ಮ ಪಂಚಾಂಗದ ತಿಂಗಳುಗಳನ್ನು ವಲಸೆ ಹಕ್ಕಿಗಳ ಹೆಸರಿನಿಂದ ಕರೆಯುತ್ತಿದ್ದರು. ಇಂಡಿಯನ್ ಟೈಮ್ ಎಂದು ಅಪಹಾಸ್ಯಕ್ಕೆ ಗುರಿಯಾಗಿ ನಿರ್ಧರಿತ ವೇಳೆಯಲ್ಲಿ ಯಾವ ಕೆಲಸವನ್ನೂ ಆರಂಭಿಸದ ಮುಗಿಸದ ಭಾರತೀಯರಾದ ನಾವು ಹಕ್ಕಿಗಳ ಜೀವನದಿಂದ ಪಾಠ ಕಲಿಯಬೇಕಾಗಿದೆ. ನೂರಾರು ಮೈಲಿಗಳ ದೂರವನ್ನು ನಿಗದಿಯಾದ ವೇಳೆಯಲ್ಲಿ ತಲುಪದ ಬಸ್ಸು, ರೈಲು, ವಿಮಾನಯಾನಗಳ ಈ ದಿನಗಳಲ್ಲಿ ಈ ಹಕ್ಕಿಗಳು ಸಾವಿರಾರು ಮೈಲಿಗಳ ಆತಂಕ ತುಂಬಿದ ದಾರಿಯನ್ನು ಹಾರಿ ಕ್ಲುಪ್ತಕಾಲಕ್ಕೆ ಒಂದು ಗುರಿನೆಲೆಯನ್ನು ತಲುಪುತ್ತವೆ ಎಂಬುದು ನಿಜಕ್ಕೂ ಸೋಜಿಗದ ಸಂಗತಿ.

ಪಕ್ಷಿಜೀವನದಲ್ಲಿ ಈ ಪವಾಡಗಳು ಕಲ್ಪನಾತೀತ. ಪಕ್ಷಿಗಳು ಈ ಸಾಹಸಕ್ಕೆ ತೊಡಗುವುದಂತಿರಲಿ, ಇದನ್ನು ಹೇಗೆ ಸಾಧಿಸಿವೆ, ಹೇಗೆ ನಿರ್ವಹಿಸುತ್ತವೆ? ಇವು ನಿಜಕ್ಕೂ ಅತ್ಯಾಶ್ಚರ್ಯಕರವಾದ ನಿಗೂಢ ರಹಸ್ಯಗಳು. ಸಾಕಷ್ಟು ಸಂಶೋಧನೆಗಳು ನಡೆದಿದ್ದರೂ ಪೂರ್ಣ ಅರ್ಥವಾಗದಿರುವ, ಗ್ರಹಿಕೆಗೆ ಸಿಕ್ಕದೆ ಜಾರಿಹೋಗುತ್ತಿರುವ ವಿಷಯಗಳು.

ಅನತಿ ದೂರದ ಪಯಣಕ್ಕೆ ಪೂರ್ವಭಾವಿಯಾಗಿ ಕಂಡುಬರುವ ಅತ್ಯಂತ ಗಮನಾರ್ಹ ಬದಲಾವಣೆ ಎಂದರೆ ಚರ್ಮದಡಿ ಮತ್ತು ಅಂಗಸ ಕೋಶಿಗಳಲ್ಲಿ ಹೆಚ್ಚು ಮೊತ್ತದಲ್ಲಿ ಕೊಬ್ಬು ಸಂಗ್ರಹ, ವಲಸೆ ಪಯಣಕ್ಕೆ ಅಗತ್ಯವಾದ ಶಕ್ತಿಯನ್ನು ಒದಗಿಸುವುದು, ಈ ಕೊಬ್ಬು ಇಂಧನ. ಪಕ್ಷಿಯ ಮಾಂಸಖಂಡಗಳಿಗೆ ಈ ಇಂಧನವನ್ನು ಉರಿಸಿ ಮುಕ್ತ ರಾಸಾಯನಿಕ ಶಕ್ತಿಯನ್ನು ಉತ್ಪಾದಿಸಿ ಬಳಸಿಕೊಳ್ಳುವ ವ್ಯವಸ್ಥೆ ವ್ಯವಧಾನಗಳಿವೆ.

ವಲಸೆ ಪಯಣ ಅತ್ಯಂತ ಅಪಾಯಕಾರಿ ಹಾಗೂ ಆತಂಕಕಾರಿ ಸಂಗತಿ. ವಲಸೆ ಹೊರಡುವ ಕೋಟ್ಯಾಂತರ ಹಕ್ಕಿಗಳಲ್ಲಿ ಲಕ್ಷಾಂತರ ಹಕ್ಕಿಗಳು ತಮ್ಮ ಗುರಿಯ ನೆಲೆಯನ್ನು ತಲುಪುವುದಿಲ್ಲ. ಆದರೂ ಕೋಟ್ಯಂತರ ಹಕ್ಕಿಗಳು ಎಲ್ಲ

ಅಪಾಯಗಳನ್ನೂ ಗೆದ್ದು ತಮ್ಮ ಪಯಣವನ್ನು ಯಶಸ್ವಿಯಾಗಿ ಪೂರೈಸುತ್ತವೆ. ಅವುಗಳಲ್ಲಿ ಇಲ್ಲದ ಕೆಲವು ಶಕ್ತಿಗಳನ್ನು ಇವೆ ಎಂದು ಹೇಳುವುದುಂಟು ಹವಾಮಾನ ಬದಲಾವಣೆಗಳನ್ನು ಅವು ಮುಂದಾಗಿ ಅರಿತುಕೊಳ್ಳಬಲ್ಲವೆಂಬ ಒಂದು ಅಭಿಪ್ರಾಯವಿದೆ. ಋತುಗಳು ಬದಲಾಗುತ್ತಿರುವುದನ್ನು ಮಾತ್ರ ಗ್ರಹಿಸಬಲ್ಲವೆನ್ನಲು ಸಾಕ್ಷ್ಯಗಳಿವೆ. ವಲಸೆ ಪಯಣದಲ್ಲಿ ಎದುರಾಗಬಹುದಾದ ಮಳೆ, ಗಾಳಿ, ಚಂಡಮಾರುತ, ಸುಂಟರಗಾಳಿ ಅಥವಾ ಕಾವಳ ಕವಿಯುವಂತಹ ಆತಂಕಗಳನ್ನು ಮುಂದಾಗಿ ತಿಳಿದುಕೊಳ್ಳಲಾರವು.

ವಲಸೆ ರಹಸ್ಯವನ್ನು ಅರಿಯುವ ಪ್ರಯತ್ನದಲ್ಲಿ ಉಂಗುರಗಳನ್ನು ತೊಡಿಸುವ ಅಥವಾ ಇಡೀ ಹಕ್ಕಿಗೆ ಸುರಕ್ಷಿತ ಬಣ್ಣ ತೊಡೆಯುವ ವಿಧಾನಗಳನ್ನು ಅನುಸರಿಸಿ ಕೆಲವು ಮಾಹಿತಿಗಳ ಸಂಗ್ರಹವಾಗಿವೆ. ಪಾರದರ್ಶಕ ನವಿರು ನೈಲಾನ್ ಬಲೆಗಳ ಸಹಾಯದಿಂದ ಹಕ್ಕಿಗಳನ್ನು ಹಿಡಿದು ಅವುಗಳ ಕಾಲುಗಳಿಗೆ ಹಗುರಾದ ಉಂಗುರಗಳನ್ನು ತೊಡಿಸಿ ಬಿಡುತ್ತಾರೆ. ಈ ಉಂಗುರಗಳಲ್ಲಿ ಸಂಶೋಧಕನ ಹೆಸರು, ವಿಳಾಸ, ಹಕ್ಕಿಯನ್ನು ಹಿಡಿದ ಸ್ಥಳ, ತಾರೀಖು, ಗಂಟೆ, ಮುಂತಾದ ವಿವರಗಳಿರುತ್ತವೆ. ಬೇರೊಂದು ಕಡೆ ಈ ಹಕ್ಕಿಗಳು ಕಂಡಾಗ ಅದು ದೊರಕಿದ ಸ್ಥಳ, ದಿನಾಂಕ, ಗಂಟೆ ಮುಂತಾದ ವಿವರಗಳನ್ನು ಸಂಶೋಧಕನಿಗೆ ತಿಳಿಸುತ್ತಾರೆ. ಹೀಗೆ ಅನುಕ್ರಮವಾಗಿ ಸಂಗ್ರಹಿಸಿದ ಮಾಹಿತಿಗಳಿಂದ ಅವು ವಲಸೆ ಪಯಣಕ್ಕೆ ಬಳಸುವ ಮಾರ್ಗ ಮತ್ತು ಪಯಣದ ಅವಧಿಗಳನ್ನು ನಿರ್ಧರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಉದಾಹರಣೆಗೆ ಲ್ಯಾಬ್ರಡಾರ್‌ನ ಕರಾವಳಿಯ ಬಳಿ ಉಂಗುರ ತೊಡಿಸಿ ಬಿಟ್ಟ ಆರ್ಕ್ಟಿಕ್ ಟರ್ನ್ ಹಕ್ಕಿಯೊಂದು ೯೦ ದಿನಗಳ ನಂತರ ೯೦೦೦ ಮೈಲಿ ದೂರದ ಆಗ್ನೇಯ ಆಫ್ರಿಕಾದ ಬಳಿ ದೊರಕಿತು. ರಷ್ಯಾದ ಆರ್ಕ್ಟಿಕ್ ಕರಾವಳಿಯ ಬಳಿ ಉಂಗುರ ತೊಡಿಸಿಬಿಟ್ಟ ಈ ಜಾತಿಯ ಮತ್ತೊಂದು ಪ್ರಬೇಧದ ಹಕ್ಕಿ ೧೭೦೦೦ ಮೈಲಿಗೂ ಹೆಚ್ಚು ದೂರದಲ್ಲಿರುವ ಆಸ್ಟ್ರೇಲಿಯಾದಲ್ಲಿ ದೊರಕಿತು. ಈಗೀಗ ಪಕ್ಷಿ ವಲಸೆ ಅಭ್ಯಾಸಗಳಿಗೆ ರೇಡಾರ್‌ಗಳನ್ನು ಬಳಸುತ್ತಿದ್ದಾರೆ. ಇದರ ನೆರವಿನಿಂದ ರಾತ್ರಿ ಹಗಲೆನ್ನದೆ, ಗಾಳಿ, ಮಳೆ, ಕಾವಳಗಳ ಅಡ್ಡಿ ಇಲ್ಲದೆ ಪಕ್ಷಿ ವಲಸೆಯನ್ನು ಅನುಸರಿಸಬಹುದು.

ವಲಸೆ ಪಯಣದಲ್ಲಿ ಇನ್ನೊಂದು ಮೂಲ ಪ್ರಶ್ನೆಯುಂಟು. ವಲಸೆ ಹಕ್ಕಿಗಳು ಪ್ರತಿ ವರ್ಷವೂ ಒಂದೇ ನೆಲೆಗೆ ಹೋಗುತ್ತವೆ ಮತ್ತು ತಮ್ಮ ತವರು

ನೆಲೆಗೆ ಕರಾರುವಾಕ್ಕಾಗಿ ಬರುತ್ತವೆಂಬುದು ತಿಳಿದ ವಿಷಯ. ಹಾಗಾದರೆ ಇವು ದಾರಿಯನ್ನು ಗುರುತಿಸುವುದು ಹೇಗೆ? ಭೂಭಾಗದ ಮೇಲೆ. ಹಗಲಿನಲ್ಲಿ ಪಯಣಿಸುವ ಹಕ್ಕಿಗಳಾದರೆ, ನದಿಯ ಪಾತ್ರ, ಬೆಟ್ಟ-ಗುಡ್ಡ, ಕಣಿವೆ, ಬಯಲುಗಳಂತಹ ಭೂಸ್ವರೂಪ ಲಕ್ಷಣಗಳನ್ನು ಗುರುತಿಗಾಗಿ ಬಳಸಿಕೊಳ್ಳಬಹುದೆಂದು ಹೇಳಬಹುದಾದರೂ ಇದಾವುವೂ ಕಾಣದ ರಾತ್ರಿಯಲ್ಲಿ, ಈ ರೀತಿಯ ನೆಲೆಗಟ್ಟು ಗುರುತುಗಳು ಇಲ್ಲದ ಕಡಲ ಮೇಲೆ ಹಾರುವಾಗ ದಾರಿಯನ್ನು ಹೇಗೆ ಕಂಡುಕೊಳ್ಳುತ್ತವೆ? ಇದು ನಿಜಕ್ಕೂ ನಿಗೂಢ ರಹಸ್ಯ. ಈ ದಿಸೆಯಲ್ಲಿ ನಡೆದ ಅಭ್ಯಾಸಗಳು ಊಹಾ ಕಲ್ಪನೆಗಳಿಗೆ ಅವಕಾಶ ಇತ್ತಿವೆಯೇ ಹೊರತು ಇದು ಹೀಗೆ ಎಂದು ಖಂಡಿತವಾಗಿ ಹೇಳುವುದು ಸಾಧ್ಯವಾಗಿಲ್ಲ. ಭೂಭ್ರಮಣೆ, ಭೂಮಿಯ ಅಯಸ್ಕಾಂತ ಕ್ಷೇತ್ರ, ಆಕಾಶದಲ್ಲಿ ಸೂರ್ಯಪಥ, ಚಂದ್ರಪಥ ಮತ್ತು ನಕ್ಷತ್ರಗಳನ್ನು ತಮ್ಮ ಮಾರ್ಗದರ್ಶನಕ್ಕೆ ಬಳಸಿಕೊಳ್ಳುತ್ತವೆಂದು ಹೇಳಲು, ಊಹಿಸಲು ಸೂಚನೆಗಳು ದೊರಕಿವೆ. ಹಕ್ಕಿಗಳಲ್ಲಿ ಬೆಳಕಿನ ರೋಹಿತದ ಅತಿರಕ್ತ ಕಿರಣಗಳಿಗೆ ಸಂವೇದನಾಶಕ್ತಿ ಉಂಟು ಎಂದೂ ಕೆಲವರ ಅಭಿಪ್ರಾಯ. ಅದು ನಿಜವಾದರೆ ಕತ್ತಲು ಮತ್ತು ಕಾವಳ ಕವಿದ ಪರಿಸ್ಥಿತಿಯಲ್ಲಿಯೂ ಪಕ್ಷಿಗಳು ದಾರಿಯನ್ನು ಕಂಡುಕೊಳ್ಳಬಲ್ಲವೆಂದು ನಂಬಲು ಸೂಚನೆ ದೊರಕುತ್ತದೆ. ಆದರೂ ಇದು ಬಹುಮಟ್ಟಿಗೆ ನಿಸರ್ಗದ ನಿಗೂಢ ರಹಸ್ಯವಾಗಿಯೇ ಉಳಿದಿದೆ. ಮೃಗಯಾ ವಿಹಾರ ಹೊರಟ ಈ ಹಕ್ಕಿಗಳ ಜೀವನ ಒಂದು ಅಲೌಕಿಕ ಅನುಭವ. ಹಕ್ಕಿಗಳ ಈ ಹರಿತನದ ಎದುರಿನಲ್ಲಿ ಅವುಗಳ ಗುಣಗಾನವಾಗಬಹುದು. ಬಾಯಿಬಿಟ್ಟರೆ ಅಸಮರ್ಪಕ ಆಧಾರಗಳ ಮಾತು ಅರ್ಥಹೀನ ಎನ್ನಿಸಬಹುದು.

ಡಾ|| ಹಾ. ಬ. ದೇವರಾಜ ಸರ್ಕಾರ್

ನಿಜವಾಗಿಯೂ ತಿಳಿದುಕೊಳ್ಳಿ, ಯಾವನು ತನ್ನ ಬಡತನದ ಬಗ್ಗೆ ಅಸಂತೋಷಿಯಾಗಿದ್ದಾನೋ ಅವನು ನಿಜವಾಗಿಯೂ ದುಃಖಿಯಲ್ಲ. ಯಾವನು ಎರಡನೆಯವರ ವೈಭವವನ್ನು ಕಂಡು ಅಸಂತೋಷಪಡುತ್ತಾನೋ ಅವನೇ ನಿಜವಾದ ದುಃಖಿಯು.

—ಕಾರ್ನೆಗೀ

ಕವಿಗಳು ಕಂಡ ಕರ್ನಾಟಕ

—ಸೀತಾರಾಮ ಜಾಗೀರ್‌ದಾರ್

ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾ ಜಿನಾ
ನೆಲನಂ ಮುತ್ತಿನ ಮಾಸಿಸರ್ ಪೊಗಳತೇನಂ ಬಲ್ಲರೆಂಬೊಂದು ಬ
ಲ್ಲುಲಿಯಂ ನೆಟ್ಟನೆ ತಾಳ್ದು ಕನ್ನಡವೆನಿಪ್ಪಾ ನಾಡು ಚೆಲ್ವಾಯ್ತು ಮೆ
ಲ್ಲಲರಿಂ ಪೂತಕೊಳಂಗಳಿಂ ಕೆಱೆಗಳಿಂ ಕಾಲ್ವೊಗರ್ಗಳಿಂ ಕೆಯ್ಗಳಿಂ

—ಆಂಡಯ್ಯ

ಮಂದ ಮಂದವಾಗಿ ಬೀಸುವ ಮಲಯಾನಿಲ, ಕೊಳಗಳಲ್ಲಿ–ಕೆರೆಗಳಲ್ಲಿ ಅರಳಿ ನಿಂತ ತಾವರೆಯ ಹೂಗಳು, ತುಂಬಿ ಸೂಸಿ ಹರಿಯುವ ಕಾಲುವೆಗಳು, ಹಚ್ಚನೆಹಸಿರು ಸುರಿಯುವ ಹೊಲಗಳು - ಗದ್ದೆಗಳು–ನೋಡುವ ಕಣ್ಣಿಗೆ ಸಂತೋಷದ ಸಾಗರ, ಆನಂದದ ಆಗರ. ಆ ಸೌಂದರ್ಯವನ್ನು ವರ್ಣಿಸಲು ಸಹಸ್ರನಾಲಗೆಯ ಶೇಷನಿಗೂ ಸಾಧ್ಯವಿಲ್ಲ. ಇನ್ನು ಉಳಿದ ಮಾನವರ ಪಾಡೇನು? ಅವರ ನಾಲಗೆ ನಿಶ್ಶಕ್ತ! ಇದು ಕನ್ನಡನಾಡಿನ ಸೊಬಗನ್ನು ಕುರಿತ ಆಂಡಯ್ಯನ (ಸು. ಕ್ರಿ. ಶ. ೧೨೩೫) ಹೇಳಿಕೆ.

‘ಕನ್ನಡ’ ‘ಕರ್ನಾಟಕ’ ಇವು ದೇಶವನ್ನೂ ಭಾಷೆಯನ್ನೂ ಸೂಚಿಸುತ್ತವೆ. ಫಲವತ್ತಾದ ನೆಲವಿಲ್ಲದೆ ಜನಪದ ಕಾಲೂರಿ ನಿಲ್ಲಲು ಸಾಧ್ಯವಿಲ್ಲ. ಒಂದು ಜನಾಂಗವು ಒಂದೆಡೆ ನಿಂತು ತನ್ನ ಇರುವಿಕೆಯನ್ನು ಸ್ಥಾಪಿಸದಿದ್ದರೆ ಅದಕ್ಕೊಂದು ನಿಶ್ಚಿತ ನೆಲೆಯಿಲ್ಲದಂತಾಗಿ ಇಂತಹ ಭೂ ಭಾಗದಲ್ಲಿ ಈ ಸಂಸ್ಕೃತಿಯು ಇದ್ದಿತೆಂದು ಹೇಳಲು ಬರುವುದಿಲ್ಲ. ಇಂದು ನಾವು ಹೇಳುವ ಕರ್ನಾಟಕ ಸಂಸ್ಕೃತಿ–ಕನ್ನಡ ಭಾಷೆ–ಯಾವ ಯಾವ ಭೂಭಾಗದಲ್ಲಿ ಇದ್ದಿತೆಂದು ಬೆರಳಿಟ್ಟು ತೋರಿಸಲು ಪ್ರಾಗೈತಿಹಾಸಿಕ ಕಾಲದ ಇತಿಹಾಸವನ್ನು ಮನದಂದರೆ ಹೀಗೆಯೆಂದು ಹೇಳಲು ಕಠಿಣವಾಗುತ್ತದೆ. ಪ್ರಾಗೈತಿಹಾಸಿಕ ಕಾಲದ ಭಾಷೆಯ ಬಗ್ಗೆ ಕರ್ನಾಟಕದಲ್ಲಿ ಯಾವ ದಾಖಲೆಯೂ ಇದುವರೆಗೆ ದೊರೆತಿಲ್ಲ. ಶಿಲಾಯುಗದ ಜನರ ಸಂಸ್ಕೃತಿಯ

ಬಗ್ಗೆ ಬರೆಯುವಂತೆ ಅವರ ಭಾಷೆಗಳ ಬಗ್ಗೆ, ಅವರು ಹಾಡಿದ ಹಾಡಿನ ಬಗ್ಗೆ ಏನೂ ಹೇಳಲು ಬರುವಂತಿಲ್ಲ. ಶಿಲಾಯುಗದಲ್ಲಿ ಕಲೆ ಬೆಳೆದಿತ್ತೆನ್ನುವುದಕ್ಕೆ ಬೆಣಕಲ್ (ರಾಯಚೂರು ಜಿಲ್ಲೆ) ಮೊದಲಾದ ಸ್ಥಳಗಳಲ್ಲಿ ದೊರೆತಿರುವ ಚಿತ್ರಗಳು ಸಾಕ್ಷಿಯಾಗಿವೆ. ನೆಲ, ಜಲ, ಜನ–ಇದು ನನ್ನ ಕರ್ನಾಟಕದ ಒಂದು ಘಟಕ (Unit).

ಯಾವುದೇ ಒಂದು ಜನಾಂಗದ ಸಂಸ್ಕೃತಿಯ ಇತಿಹಾಸದಲ್ಲಿ ಜನಪದವು ಆ ಸಂಸ್ಕೃತಿಯ ಬೇರು, ಕವಿ ಅದರ ಕುಸುಮ, ಕಾವ್ಯ ಆ ಸಂಸ್ಕೃತಿಯ ರಸಭರಿತ ಫಲ. ಸಶಕ್ತ ಸಂಸ್ಕೃತಿಯು ಸುಕವಿಯನ್ನು ಸೃಷ್ಟಿಸುತ್ತದೆ; ಸುಕವಿ ಸತ್ಕಾವ್ಯವನ್ನು ರಚಿಸುತ್ತಾನೆ. ಕವಿಯ ದೃಷ್ಟಿಯಂತೆ ಕಾವ್ಯಸೃಷ್ಟಿಯಾಗುತ್ತದೆ. ಕನ್ನಡ ಸಂಸ್ಕೃತಿಯ ಬೇರುಗಳು ಬಹಳ ಬಹಳ ಆಳದಲ್ಲಿವೆ. ಅವನ್ನು ಬಿಡಿಸಿ ನೋಡಲು ಇನ್ನೂ ಸಾಧ್ಯವಾಗಿಲ್ಲ. ಕನ್ನಡನಾಡಿನ ಗಡಿಗೆರೆ ತಿಳಿಸಿಕೊಡುವ ಸಾಧನ ಸಾಮಗ್ರಿಯಲ್ಲಿ ಮೊದಲ ಗ್ರಂಥವೆಂದರೆ 'ಕವಿರಾಜಮಾರ್ಗ'. ಅದು ಕನ್ನಡ ನಾಡಿನ ಸೀಮೆಗಳನ್ನು ಸ್ಥೂಲವಾಗಿ ಹೀಗೆ ತಿಳಿಸಿದೆ: ಕಾವೇರೀನದಿಯ ತೀರದಿಂದ ಗೋದಾವರೀ ನದಿಯ ತೀರದ ಮಧ್ಯದ ಪ್ರದೇಶವೇ ಕನ್ನಡನಾಡು. ವಿಸ್ತಾರವಾದ ಆ ಪ್ರದೇಶದಲ್ಲಿ ಕಿಸುವೊಳಲು (ಬಿಜಾಪುರಜಿಲ್ಲೆಯ ಪಟ್ಟದ ಕಲ್ಲು) ಮಹಾಕೊಪಣ ನಗರ (ಗುಂತಕಲ್ – ಗದಗ ರೈಲ್ವೇಮಾರ್ಗದಲ್ಲಿ ರಾಯಚೂರು ಜಿಲ್ಲೆಯಲ್ಲಿರುವ ಜೈನಧರ್ಮದ ಕ್ಷೇತ್ರಸ್ಥಲವಾದ ಕೊಪ್ಪಳ) ಪುಲಿಗೆಱೆ (ಧಾರವಾಡ ಜಿಲ್ಲೆಯಲ್ಲಿರುವ ಲಕ್ಷ್ಮೇಶ್ವರ) ಮತ್ತು ಒಂಕುಂದ (ಬೆಳಗಾಂವ ಜಿಲ್ಲೆಯಲ್ಲಿರುವ ಒಕ್ಕುಂದ) ನಗರಗಳ ಮಧ್ಯದಲ್ಲಿದ್ದ ಜನರು ಆಡುವ ನುಡಿಯೆ 'ಕನ್ನಡದ ತಿರುಳ್', ಅರ್ಥಾತ್ ಸಾರವತ್ತಾದ ಕನ್ನಡ. ವಾಸ್ತವವಾಗಿ ಅದೊಂದು ಪ್ರಾದೇಶಿಕ ಭಾಷೆ, ಕವಿರಾಜ ಮಾರ್ಗಕಾರ ತಾನಿದ್ದ ಪ್ರದೇಶವನ್ನು ಕುರಿತು ಹೇಳಿದ ಪ್ರೇಮದ ನುಡಿ. ಒಳ್ಳೆಯ ಕನ್ನಡ, ಆತನು ಹೇಳಿದ ಪ್ರದೇಶದ ಆಚೆ ಈಚೆಗೂ ಇದ್ದಿತು. ನೃಪತುಂಗನ ರಾಜಧಾನಿಯಾದ ಮಳಖೇಡವೇ ತಿರುಳ್ಗನ್ನಡದ ಪ್ರದೇಶವಾಗಿಲ್ಲ! ಅಂದಿನ ಆ ಕರ್ನಾಟಕ ಸಾಮ್ರಾಜ್ಯದ ರಾಜಧಾನಿಯಲ್ಲೇ ಒಳ್ಳೆಯ ಕನ್ನಡವಿದ್ದಿಲ್ಲವೆಂಬ ಬಗೆತ, ಸಾಧುವಲ್ಲ; ಸತ್ಯಸಂಗತಿಯೂ ಅಲ್ಲ. ಅದರೂ ಕನ್ನಡನಾಡಿನ ವ್ಯಾಪ್ತಿಯ ಬಗ್ಗೆ

ಒಂದು ಸ್ಪಷ್ಟ ಕಲ್ಪನೆಯನ್ನು ಒದಗಿಸಿಕೊಡುವುದರಿಂದ ಆ ಪದ್ಯಗಳು ಮನನ ಯೋಗ್ಯವಾಗಿವೆ:

ಕಾವೇರಿಯಿಂದಮಾ ಗೋ
ದಾವರಿವರಮಿರ್ದ್ದ ನಾಡದಾ ಕನ್ನಡದೊಳ್ ।

ಭಾವಿಸಿದ ಜನಪದಂ ವಸು
ಧಾವಳಯ ವಿಲೀನ ವಿಶದ ವಿಷಯ ವಿಶೇಷಂ ॥

ಅದಱೊಳಗಂ ಕಿಸುವೊಳಲಾ
ವಿದಿತ ಮಹಾಕೊಪಣನಗರದಾ ಪುಲಿಗೆಱೆಯಾ ।

ಸದಭಿಸ್ತುತಮಪ್ಪೊಂಕುಂ
ದದ ನಡುವಣ ನಾಡೆನಾಡೆ ಕನ್ನಡದ ತಿರುಳ್ ॥ ೧. ೩೬, ೩೭

ಕವಿರಾಜಮಾರ್ಗಕಾರ–ಕನ್ನಡನಾಡಿನ ಜನ, ಕುರಿತೋದಯೂ ಕಾವ್ಯ ಪ್ರಯೋಗ ಪರಿಣತಮತಿಗಳು, ಸುಭಟರು, ಕವಿಗಳು, ಸುಪ್ರಭುಗಳು, ಚೆಲ್ವರು, ಶ್ರೀಮ್ಮರು, ಗುಣಿಗಳು, ಅಭಿಮಾನಿಗಳು, ಅತ್ಯುಗ್ರರು, ಗಂಭೀರಚಿತ್ತವೃತ್ತಿಯವರು, ವಿವೇಕಿಗಳು–ಎಂದು ಮುಂತಾಗಿ ಅವರನ್ನು ಹೃದ್ಯವಾಗಿ ವರ್ಣಿಸಿದ್ದಾನೆ:

ಸುಭಟರ್ಕಳ್ ಕವಿಗಳ್ ಸು
ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್ ।
ಅಭಿಮಾನಿಗಳತ್ಯುಗ್ರರ್
ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್ ॥ ೨–೨೮

‘ಕವಿರಾಜಮಾರ್ಗ’ ಗ್ರಂಥ ೯ನೆಯ ಶತಮಾನದ್ದು, ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನ (ಕ್ರಿ. ಶ. ೮೧೪–೮೮೦) ಆಳ್ವಿಕೆಯ ಕಾಲದ್ದು. ಆದರೆ ಈ ಕಾವೇರೀ ಗೋದಾವರೀ ತೀರಗಳ ಮಧ್ಯದ ಪ್ರದೇಶ ಕವಿರಾಜಮಾರ್ಗಕ್ಕಿಂತ ಮುಂಚೆ ಸಾವಿರಾರು ವರ್ಷಗಳಿಂದಲೂ ಅಸ್ತಿತ್ವದಲ್ಲಿದ್ದಿತು. ಆಗಲೂ ಇಲ್ಲಿ ಜನಜೀವನ-ಸಂಸ್ಕೃತಿ ಇದ್ದಿತು. ಈ ಕಾಲಮಾನದ ಸ್ವಲ್ಪ ವಿವರಗಳು, ಸಂಸ್ಕೃತ–ಪ್ರಾಕೃತ ಸಾಹಿತ್ಯಗಳಲ್ಲೂ ಶಾಸನಗಳಲ್ಲೂ ನಮಗೆ ಕಾಣದೊರೆಯುತ್ತವೆ. ಇಂದಿನ ಕರ್ನಾಟಕ ನೆಲ ಅಂದು ‘ಅಶ್ಮಕ’ ‘ವಿದರ್ಭ’ (ಬೀದರ್) ‘ಕುಂತಲ’

‘ಕರ್ನಾಟಕ’ ‘ಬನವಾಸಿ’ ಮತ್ತು ‘ಮಹಿಷಕ’ ಮುಂತಾಗಿ ಹಲವು ಮಂಡಲಗಳ ಮೂಲಕ ಗುರುತಿಸಲ್ಪಡುತ್ತಿತ್ತು. ಮಹಾಭಾರತ, ರಾಮಾಯಣ ಹಾಗೂ ಅಶೋಕನ ಶಾಸನಗಳಲ್ಲಿ ‘ಬನವಾಸಿ’ ‘ಮಹಿಷ’ ಮಂಡಲಗಳ ಉಲ್ಲೇಖ ಬಂದಿರುವುದು ಪ್ರಸಿದ್ಧ ಸಂಗತಿ. ಈ ಮಂಡಲಗಳ ವ್ಯಾಪ್ತಿ ಆರಂಭದಲ್ಲಿ ಕಿಂಚಿತ್ ಸೀಮಿತವಾಗಿತ್ತು. ಅಲ್ಲಲ್ಲಿ ಇರುವ ನದಿಗಳು, ನಮ್ಮ ಜನಜೀವನದಲ್ಲಿ, ಸಂಸ್ಕೃತಿಯಲ್ಲಿ, ಬಹಳ ಮುಖ್ಯ ಪಾತ್ರವನ್ನು ವಹಿಸಿವೆ. ದೇಶಗಳನ್ನು ಸಂಸ್ಕೃತಿಗಳನ್ನು ನದಿಗಳ ಮೂಲಕ (ಉದಾ : ಸಿಂಧೂ ಸಂಸ್ಕೃತಿ) ಗುರುತಿಸುವುದು ರೂಢಿ. ‘ಕರ್ನಾಟಕ’ ಅಥವಾ ‘ಕರ್ಣಾಟ’ ಇದರ ವ್ಯುತ್ಪತ್ತಿಯ ರೂಪ ‘ಕರ್ಣ್ಣ+ನಾಟ್’ (ಸಂಸ್ಕೃತ) ಕಣ್ಹ+ನಾಡ್ (ಪ್ರಾಕೃತ) ಅಥವಾ ಕಣ್ಣ+ನಾಡ್ (ಪ್ರಾ)>ಕಣ್ಣಾಡ್ (ಪ್ರಾ) ಕನ್ನಾಡ್ (*) ಕನ್ನಡ (ಕ) ಆಗಿರುತ್ತದೆ; ಇದು ಭಾಷಾಶಾಸ್ತ್ರದ ನಿಯಮದಲ್ಲಿ – ಅಧ್ಯಯನದಲ್ಲಿ – ಕಂಡುಬಂದ ಸಂಗತಿ. ಕರ್ಣ್ಣ > ಕಣ್ಹ ಕಣ್ಣ>ಕಣ್ನ>ಕನ್ನ+ನಾಡು—ಇದು ಕೃಷ್ಣಾನದಿಯ ಎಡಬಲದ ಪ್ರದೇಶವೆಂಬುದು ಕೃಷ್ಣಾನದಿಯ ‘ಕಣ್ಣ’ ಎಂಬ ಹೆಸರು ದೃಢಪಡಿಸುತ್ತದೆ. ರಾಷ್ಟ್ರಕೂಟ, ಕಳಚುರಿ, ಸೇಉಣರ ಕೃಷ್ಣರ ಹೆಸರುಗಳು ‘ಕನ್ನರ’ ಆದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಅರ್ಥಾತ್ ಕೃಷ್ಣ>ಕಣ್ಹ>ಕನ್ನ ಆಗಿರುವುದು ಗಮನಾರ್ಹವಾದ ಸಂಗತಿ. ಕವಿರಾಜಮಾರ್ಗಕಾರ ಕಾವೇರಿಯಿಂದ ಗೋದಾವರಿಯವರೆಗೆ ಕನ್ನಡ ಜನಪದ, ಭಾಷೆ, ಇತ್ಯಾದಿ ಹಬ್ಬಿತ್ತೆಂದು ಹೇಳಿರುವವನ್ನು ಜ್ಞಾಪಕಕ್ಕೆ ತಂದುಕೊಂಡರೆ ಈ ವಿಸ್ತಾರವಾದ ಪ್ರದೇಶದಲ್ಲಿ ಹರಿಯುವ ನದಿಗಳಲ್ಲಿ ಈಗ ನಮ್ಮ ಕರ್ನಾಟಕದಲ್ಲಿ ಉಳಿದಿರುವ ನದಿಗಳೆಂದರೆ: ಭೀಮಾ, ಕೃಷ್ಣಾ, ತುಂಗಾಭದ್ರಾ ಮತ್ತು ಕಾವೇರಿ. ಈ ಮುಖ್ಯನದಿಗಳೂ ಅವುಗಳಿಗೆ ಸೇರಿರುವ ಅನೇಕ ಉಪನದಿಗಳೂ ಅನಾದಿ ಕಾಲದಿಂದ ನಮ್ಮ ಈ ಕರ್ನಾಟಕ ಪ್ರದೇಶದಲ್ಲಿ ಹರಿಯುತ್ತಲೇ ಇವೆ. ನಮ್ಮ ನಾಡಿನ ಜನದ ಹಸಿವು-ನೀರಡಿಕೆಗಳನ್ನು ಅವು ತೀರಿಸುತ್ತಲಿವೆ, ಪೂರೈಸುತ್ತಲಿವೆ. ಅವುಗಳು ನಮ್ಮ ರಕ್ತದಲ್ಲಿ ರಸವಾಗಿ ಪ್ರವಹಿಸುತ್ತಲಿವೆಯೆಂದರೆ ತಪ್ಪಾಗದು. ಆ ಸಂಸ್ಕೃತಿಗೆ ಎರವಾಗದ ನಮ್ಮ ನಾಡಿನ ಜನ ಅವನ್ನು ಇಂದಿಗೂ ದೇವತೆಗಳೆಂದೇ ಪೂಜಿಸುತ್ತಾರೆ. ನೀರನ್ನು ಪೂಜಿಸದ ಒಂದಾದರೂ ಜನಾಂಗ ನಮ್ಮಲ್ಲಿ ಇಲ್ಲ. ನಮ್ಮ ನೆಲದ, ಜಲದ–ಉಲ್ಲೇಖಗಳು ‘ರಾಮಾಯಣ’ ‘ಮಹಾಭಾರತ’ ಗ್ರಂಥಗಳಲ್ಲಿ ಇದ್ದುದು

ಕಂಡುಬಂದಿದೆ. ರಾಮಾಯಣದ ಕಾಲದಲ್ಲಿ ಇಲ್ಲಿ ವಿಶೇಷ ಕಾಡು ಇದ್ದುದಾಗಿ ವರ್ಣನೆ ಬರುತ್ತದೆ:

ದಿಶಾಮಾಸ್ಥಾಯ ಕೈಕೇಯಿ ದಕ್ಷಿಣಮ್ ದಂಡಕಾನ್ ಪ್ರತಿ ।
ವೈಜಯನ್ತಮಿತಿ ಖ್ಯಾತಮ್ ಪುರಮ್ ಯತ್ರ ತಿಮಿಧ್ವಜಃ ॥

—ಅಯೋಧ್ಯಾ ಕಾಂಡ, ೯–೧೨

ಇಲ್ಲಿನ ವೈಜಯನ್ತ/ವೈಜಯಂತಿ–ಇದು ಇಂದಿನ ಬನವಾಸಿ. ಹೀಗೆಯೇ ಈ ಕೃತಿಯಲ್ಲಿ ಪಂಪಾಸರೋವರದ ಶುದ್ಧ ಸಲಿಲದ–ಅಲ್ಲಿನ ಪಂಕಜಗಳ–ವರ್ಣನೆ ಸುಂದರವಾಗಿ ಬಂದಿದೆ. ಮಹಾಭಾರತದ ‘ಸಭಾಪರ್ವ’ (೩೧–೧೧, ೭೮–೯೮) ‘ಉದ್ಯೋಗಪರ್ವ’ (೧೩೮–೨೫) ‘ಭೀಷ್ಮಪರ್ವ’ (೯–೫೮,೫೯; ೫೧-೧೨) ಇತ್ಯಾದಿಗಳಲ್ಲಿ ‘ಕುನ್ತಲ’ ‘ಕರ್ಣಾಟ’ ‘ಮಹಿಷಕ’ಗಳ ಉಲ್ಲೇಖವಿದೆ. ಛಾಯಾ ಭಗವತಿಯ ದೇವಸ್ಥಾನದ ಮುಂದಿರುವ ಕೃಷ್ಣಾನದಿಯಲ್ಲಿರುವ ‘ದೇವಹೃದಯ’ ಎಂಬ ತೀರ್ಥಸ್ಥಾನವನ್ನು ಹೀಗೆ ವರ್ಣಿಸಿದೆ:

ತತೋ ದೇವಹೃದೇ ರಮ್ಯೇ ಕೃಷ್ಣವೇಣಾ ಜಲೋದ್ಭವೇ

—ಮಹಾಭಾರತ, iii, 85-37

ಈ ಕೃಷ್ಣಾನದಿಯನ್ನು ನಾವು ಇಂದಿಗೂ

ನಮಾಮಿ ಸುಕೃತಶ್ರೇಣೀಂ ಕೃಷ್ಣವೇಣೀಂ ತರಂಗಿಣೀಂ
ಯದ್ವೀಕ್ಷಣಂ ಕೋಟಿಜನ್ಮಕೃತ ದುಷ್ಕರ್ಮಶಿಕ್ಷಣಂ ॥

ಎಂದು ಸ್ತುತಿಸುತ್ತೇವೆ. ಜಾನಪದ ಕವಯಿತ್ರಿಯೋರ್ವಳು ಭೀಮಾನದಿಯನ್ನು ತುಂಬು ಹೃದಯದಿಂದ ನೆನಸಿದ್ದಾಳೆ:

ಬ್ಯಾಸಗಿ ದಿವಸಕ್ಕಽ ಬೇವಿನಮರತಂಪ
ಭೀಮರಥಿಯೆಂಬ ಹೊಳಿತಂಪ ಹಡೆದವ್ವ
ನೀ ತಂಪ ನನ್ನ ತವರೀಗಿ ॥

ಈ ಭೀಮರಥಿಯನ್ನು ಸ್ವಯಂಭೂ ಎಂಬ ಕವಿಯು 'ಪಉಮಚರಿಉ' ಎಂಬ ಪ್ರಾಕೃತ ಗ್ರಂಥದಲ್ಲಿ 'ಸೇಉಣದೇಶದಲ್ಲಿ ಹರಿಯುತ್ತಿರುವ ಅಮೃತಧಾರೆ' ಎಂದು ವರ್ಣಿಸಿದ್ದಾನೆ:

ಪುಣುಸರಿ ಭೀಮರಹಿ ಜಲೋಹಫಾರ
ಜಾ ಸೇಉಣ'ದೇಸಹೊ ಅಮಿಯಧಾರ ||
—ಸಂಧಿ—೯೬, ಪದ್ಯ. ೫.೬

ಸ್ವಯಂಭೂ ಭಾರತದ ಕೆಲವೇ ಮಹಾಕವಿಗಳಲ್ಲಿ ಒಬ್ಬನೆಂದು ರಾಹುಲ ಸಾಂಕ್ರತ್ಯಾಯನ ಮೊದಲಾದ ಮಹಾನುಭಾವರಿಂದ ಮಾನಿತನಾಗಿದ್ದಾನೆ. ಕರ್ನಾಟಕದವನೇ ಆದ ಈತನ ಕಾವ್ಯದಲ್ಲಿ ಕೃಷ್ಣಾ ಗೋದಾವರೀ ಮುಂತಾಗಿ ಅನೇಕ ಪ್ರದೇಶಗಳ ವರ್ಣನೆಗಳು ರಮಣೀಯವಾಗಿ ಬಂದಿವೆ. ಇವನ ಕಾಲ, ಕ್ರಿ. ಶ. ಸುಮಾರು ೭೫೦–೮೫೦ರ ಮಧ್ಯ.

ಕೃಷ್ಣಾಕ್ಕೆ ಭೀಮಾನದಿಯ ಅನಂತರ ಕರ್ನಾಟಕದ್ದೇ ಆದ ಇನ್ನೊಂದು ದೊಡ್ಡನದಿ ತುಂಗಭದ್ರಾ ಸೇರುತ್ತದೆ. ಈ ತುಂಗಭದ್ರಾನದಿಯನ್ನು ಅನೇಕರು ವರ್ಣಿಸಿದ್ದಾರೆ. ಅವರಲ್ಲಿ ಹರಿಹರ, ರಾಘವಾಂಕ, ಸಿದ್ಧನಂಜೇಶ, ಪುರಂದರ ದಾಸರು ಮತ್ತು ಕನಕದಾಸರು ಮುಖ್ಯರು. ಹರಿಹರ ಗಿರಿಜಾಕಲ್ಯಾಣದಲ್ಲಿ ತುಂಗಭದ್ರೆಯನ್ನು ಹೀಗೆ ವರ್ಣಿಸಿದ್ದಾನೆ :

ಇಂತಿಂತು ನೋಡುತುಂ ಬರೆ
ಮುಂತಿರ್ದುದು ತರಳತರ ತರಂಗ ಪ್ರಯುತಾ
ನಂತ ನವಫೇನ ಜಲಚರ
ಸಂತಾನಂ ತುಂಗಭದ್ರೆ ಗಂಗಾಪ್ರಾಯಂ ||

ನೆನೆದನೆ ಧನ್ಯಂ ನೋಡಿದ
ನನಘಂ ಸೋಂಕಿದನನಮರನಘಮರ್ಷಣಮಿ–
ರ್ದನೆ ಗಣನಾಥಂ ಸೇವಿಸಿ
ದನೆ ಮುಕ್ತಂ ಕೇಳ ತುಂಗಭದ್ರೆಯ ಜಳಮಂ ||

ಈ 'ಸುರುಚಿರ ತುಂಗಭದ್ರೆಯನ್ನು' ಒಮ್ಮೆ ನೆನೆದರೆ, ಭವದ ಪಾತಕವೆಲ್ಲ ದೂರ ವಾಗುವುದೆಂದಿದ್ದಾನೆ–ರಾಘವಾಂಕ. ಸಿದ್ಧನಂಜೇಶನಿಗೆ 'ಮಹಾತೀರ್ಥವಾದ

ತುಂಗಭದ್ರೆ,' ಶುಭದ ಮುದ್ರೆ. ಪುರಂದರದಾಸರು—

'ತುಂಗೆಮಂಗಳ ತರಂಗೆ_ ಹರಿಸರ್ವಾಂಗೆ।
ಜಯ ಜಯ ಜಯತು ತುಂಗೆ'

—ಎಂದು ಐದು ನುಡಿಯಲ್ಲಿ ಹಾಡಿ ಹೊಗಳಿದ್ದಾರೆ. ಕನಕದಾಸರಂತೂ "ತುಂಗಭದ್ರೆ ಇರಲಿಕ್ಕೆ ಭಾವಿಕೆರೆಯೇಕೆ" ಎಂದು ಹೇಳಿ ರಂಗನಾಥನ ಸಮವಾಗಿ ನದಿಯನ್ನು ಪರಿಗಣಿಸಿದ್ದಾರೆ.

ಗಂಗೇಚ ಯಮುನೇಚ ಗೋದಾವರೀ ಸರಸ್ವತೀ
ನರ್ಮದಾಸಿಂಧುಕಾವೇರೀ ಜಲೇಸ್ಮಿನ್ ಸನ್ನಿಧಿಂ ಕುರು ॥

—ಎಂದು ಸ್ಮರಿಸುವ ಸಂಸ್ಕೃತಿ (culture) ಇತ್ತೀಚೆತ್ತ ಮಾಯವಾಗಹತ್ತಿದೆ. ಬಹಳ ಜಲದ ಓಘದಿಂದ ಹರಿಯುವ ಕಾವೇರಿಯ ವರ್ಣನೆ ಅನೇಕ ಶಾಸನಗಳಲ್ಲಿ ಬಂದಿದೆ. ಈ ಕಾವೇರಿಯ ನೀರನ್ನು, ನೀರಾವರಿಗೆ ನಮ್ಮ ಜನ, ಬಹುಕಾಲದಿಂದ ಬಳಸುತ್ತಿದ್ದಾರೆ. ಕಾವೇರಿಯ ಜಲಕ್ಕೆ ಈಗ ಕನ್ನಡಿಗರೂ ತಮಿಳರೂ ಗುದ್ದಾಡುತ್ತಿರುವಂತೆ ಹಿಂದೆಯೂ ನಮ್ಮ ಜನ ಗುದ್ದಾಡಿದ್ದಾರೆ; ಆ ಗುದ್ದಾಟವನ್ನು ಕನ್ನಡ ಕವಿಯೊರ್ವನು ಕಾವ್ಯದಲ್ಲಿ ವಿವರಿಸಿದ್ದಾನೆ :

ಕಾವೇರಿಯ ಕಾಲನಾ ತಿಗುಳನೇಂ ಕಡಂಗೊಂಡನೋ
ಬಡ್ಡಿಗೊಂಡನೋ ! (ಶಬ್ದಮಣಿದರ್ಪಣಂ, ಸೂ. ೧೭೮-೩)

(ಕಾವೇರಿಯ ಕಾಲುವೆಯನ್ನು ತಮಿಳನು ಏನು ಕಡಕ್ಕೆ ತೆಗೆದುಕೊಂಡಿದ್ದಾನೆಯೆ? ಅಥವಾ ಬಡ್ಡಿಯಲ್ಲಿ ಭೋಗ್ಯಕ್ಕೆ ಹಾಕಿಕೊಂಡಿರುವನೆ ?)

"ನೋಡು ಕಾವೇರಿಯು
ನಾಡಿನ ಜನರಿಗೆ
ಬೇಡಿದ ಫಲವನು
ನೀಡುತ ಪೊರೆವುದು"

—ಎಂದಿದ್ದಾನೆ ಇನ್ನೊಬ್ಬ ಕವಿ. ಪಂಜೆಯವರು "ಎಲ್ಲಿ ಕಾವೇರಿ ಹೊಳೆ ಹೊಳೆ

ಹೊಳೆವಳೊ" ಎಂದು ಕೊಡಗನ್ನು ವರ್ಣಿಸುವಲ್ಲಿ ವರ್ಣಿಸಿದ್ದಾರೆ.

ನದಿಗಳ ಈ ವರ್ಣನೆಗಳು, ಅವು ನಮ್ಮ ಜೀವನದಲ್ಲಿ—ನಾಡಿನ ಜನತೆಯ ನಾಡಿ ನಾಡಿಗಳಲ್ಲಿ, ತಮ್ಮ ಸಂಪತ್ತನ್ನು ಬೆರೆಸಿ ಬೆರೆತು ನಿಂತಿವೆಯೆಂಬುದನ್ನು ಸೂಚಿಸುತ್ತವೆ.

ಇಂದಿನ ಬೀದರ್ ಜಿಲ್ಲೆಯ ಔರಾದದಿಂದ ಮೈಸೂರು ಜಿಲ್ಲೆಯ ಗುಂಡ್ಲಪೇಟೆ ತಾಲ್ಲೂಕಿನ ದಕ್ಷಿಣದ ತುದಿಯಲ್ಲಿರುವ ಗೋಪಾಲಸ್ವಾಮಿಯ ಬೆಟ್ಟದ ಆ ಕಡೆಯ ಪಕ್ಕದ ಪದತಲದವರೆಗೆ ಹಬ್ಬಿರುವ ಭೂಪ್ರದೇಶಕ್ಕೆ ಆಗಲೀ ಕವಿರಾಜಮಾರ್ಗಕಾರನು ಹೇಳಿದ ಕನ್ನಡ ನಾಡಿನ ಭೂಭಾಗದ ಭೂಮಿಯನ್ನಾಗಲೀ-ತದಂತರ್ಗತ ಯಾವುದೇ ಭಾಗವನ್ನಾಗಲೀ–ವಿಷಯವನ್ನಾಗಲೀ-ಗ್ರಾಮವನ್ನಾಗಲೀ ವರ್ಣಿಸಿದ ವರ್ಣನೆಗಳಲ್ಲ - ವಿವರಣೆಗಳೆಲ್ಲ – ಕವಿಗಳು ಕಂಡ ಕರ್ನಾಟಕದ ವಿವರಣೆಗಳೇ–ಕಲ್ಪನೆಗಳೇ–ಆಗುತ್ತವೆ. ಈ ದೃಷ್ಟಿಯಿಂದ ಕವಿಗಳು ಕಂಡ ಕರ್ನಾಟಕದ ಕಬಂಧ ರೂಪವನ್ನು ಕಿರುಲೇಖನದಲ್ಲಿ ಅಳವಡಿಸುವುದು ಅಸಾಧ್ಯದ ಮಾತು. ಅಗುಳಿನಿಂದ ಅನ್ನವನ್ನು ಪರೀಕ್ಷಿಸುವ ಹಾಗೆ ಅಲ್ಲೊಂದು ಇಲ್ಲೊಂದು ವರ್ಣನೆಯನ್ನು ಎತ್ತಿಕೊಂಡು ಆ ಕವಿಗಳು ಕಂಡ ಕರ್ನಾಟಕವನ್ನು ಕಿಂಚಿತ್‌ವರ್ಣಿಸಬಹುದು. ಜಾನಪದ ಪದ್ಯವೊಂದರಲ್ಲಿ ಇಲ್ಲಿನ ನೆಲದ ವರ್ಣನೆ ಹೀಗೆ ಬಂದಿದೆ :

ಏಳುತಾಲೇ ಎದು ಯಾರಾರ ನೆನೆಯಾಲಿ
ಎಳ್ಳು ಜೀರಿಗೆ ಬೆಳೆಯೋಳಾ ಭೂಮಿತಾಯ
ಎದ್ದೊಂದು ಗಳಿಗ್ಯೆ ನೆನದೇನು ॥

ಜಿನಸೇನರು 'ಪೂರ್ವಪುರಾಣ' ಕೃತಿಯಲ್ಲಿ ಪೋದನಪುರವನ್ನು ಸುಮಾರು ಹೀಗೆಯೇ ವರ್ಣಿಸಿದ್ದಾರೆ :

ಉಪಶಲ್ಯ ಭುವಃ ಕುಲ್ಯಾ ಪ್ರಣಾಲೀ ಪ್ರಸೃತೋದಕಾಃ ।
ಶಾಲೀಕ್ಷು ಜೀರಕ ಕ್ಷೇತ್ರೈ ವೃಕಸ್ತ ಸ್ಯ ಮನೋಹರಮ್ ॥

[ಭತ್ತದ ಗದ್ದೆಗಳು, ಕಬ್ಬಿನ ಗದ್ದೆಗಳು, ಜೀರಗೆಯ ಹೊಲಗಳು ಮುಂತಾಗಿ ಸತತ ಹರಿಯುವ ಕಾಲುವೆಗಳಿಂದ ಸುತ್ತುವರೆದು ಅದು (ಪೋದನಪುರ)

ಮನೋಹರವಾಗಿತ್ತು.]....ಇತ್ಯಾದಿ. ಗೋದಾವರಿ ತೀರದ ಬೋದನ ಪ್ರದೇಶವನ್ನು ನೋಡಿದವರಿಗೆ ಇದರಲ್ಲಿ ಉತ್ಪ್ರೇಕ್ಷೆ ಏನೂ ಕಾಣುವುದಿಲ್ಲ. ಈ ಪೋದನಪುರವೇ ಕನ್ನಡದ ಮಹಾಕವಿ ಪಂಪನು ಇದ್ದ ಆ ಅರಿಕೇಸರಿಯ ರಾಜಧಾನಿ ಬೋದನ. ಪಂಪನು ಈ ಬೋದನವನ್ನು (<ಬಹುಧಾನ್ಯನಗರ=ಏಕಚಕ್ರನಗರ, ವಿ.ವಿ.೩-೨೨) ಕುರುಜಾಂಗಣ ನಾಡನ್ನು (ಅರಿಕೇಸರಿಯ ರಾಜ್ಯವನ್ನು) ಬನವಾಸೀ ದೇಶವನ್ನು ಮತ್ತು 'ಕರ್ನಾಟಕ ಬಲ' ಇತ್ಯಾದಿಗಳನ್ನು ಬಹು ಸುಂದರವಾಗಿ ವರ್ಣಿಸಿದ್ದಾನೆ.

"ಅಪಜಿ ಪೊಜಿವೊಜಿಲ ವಿಶಾಳ ಕನಕ ಕೃತಕ ಗಿರಿಗಳಿಂ ।
ಫಳ [ಪ್ರಕೀರ್ಣ] ತರುಗಳಿಂ ॥

ನಸೆಯ ಕೊನೆಯ ತಳಿರ ಮುಗುಳ ವಸಲತಾ ನಿಕುಂಜದಿಂ ।
ಪ್ರಸೂನ ರಜದ ಪುಂಜದಿಂ ॥

.... ಇತ್ಯಾದಿಯಾಗಿ ಇರುವ ಕುರುಜಾಂಗಣ ನಾಡಿನ ಸೌಂದರ್ಯವನ್ನಾಗಲಿ

ಅಲ್ಲಿ ಸೊಗಯಿಸುವ ಕೃತಕಗಿರಿಗಳಿಂ ।
ಕಲ್ಪತರುಗಳನೆ ಪೋಲ್ವ ಮರಗಳಿಂ ॥

ನಂದನಂಗಳೊಳೆ ಸುಳಿವ ಬಿರಯಿಯಿಂ ।
ಕಂಪು ತಣ್ಪಲೆಯೆ ಪೂತ ಸುರಯಿಯಿಂ ॥

ಸುತ್ತಲುಂ ಪರಿವ ಜರಿವೊನಲ್ಗಳಿಂ ।
ದೆತ್ತಲುಂ ನಲಿವ ಪೊಸ ನವಿಲ್ಗಳಿಂ ॥

ಬೆಳೆದು ಮುಗಮುಗಿಪ ಗಂಧಶಾಳಿಯಿಂ ।
ದಲ್ಲಿ ಸುಳಿವ ಗಿಳಿವಿಂಡಿನೋಳಿಯಿಂ ॥

ಈಂಟು ಜಳಧಿಯೆನಿಪಗಟ ನೀಳ್ಪಿನಿಂ ।
ನೆಗೆಸು ಸೊಗಯಿಸುವ ಕೋಂಟೆಯೊಳ್ಸಿಂ ॥

....ಇತ್ಯಾದಿಯಾಗಿ ಬಂದಿರುವ ಬೋದನದ ರಮ್ಯ ನಿಸರ್ಗ ಚಿತ್ರವನ್ನಾಗಲಿ

ಮತ್ತು ಗೋಕರ್ಣದ ಗೌರೀನಾಥನನ್ನು

"ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತಜಾತಿಸಂ
ಪಗೆಯೆ ಕುಕಿಲ್ವಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೊಗಂ
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಡಿಕೊಳ್ವೊಡಾವ ಬೆ
ಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿದೇಶದೊಳ್ ॥
...............ತೆಂಕನಾಡ ಮಱೆಯಲ್ಕಿನ್ನೆಂ ಮನಂ ಬರ್ಕುಮೇ ॥"

ಎಂದು ಪಂಪ ಮುಂತಾಗಿ ಬಂದಿರುವ ಬನವಾಸಿ ದೇಶದ ಕಮನೀಯ ಚಿತ್ರವನ್ನಾಗಲಿ ಓದುಗನು ಮರೆಯುವಂತಿಲ್ಲ. ತಳಿರು ತುಂಬಿನಿಂತ, ಹೂಕಾಯಿ ಮಿಡಿಹೊತ್ತ ಮಾವಿನಮರ, ಹೂ ತುಂಬಿ ನಿಂತ ಮಲ್ಲಿಗೆ-ಸಂಪಿಗೆ, ಪಂಚಮಸ್ವರದಲ್ಲಿ ತಾರ ಸ್ಥಾಯಿ ಮುಟ್ಟುವ ಕುಹೂಕುಹೂ ಎಂದು ಕೂಗುವ ಕೂಜನದ ಕೋಗಿಲೆ; ಹೂ ಹೂಗಳ ಮೇಲೆ ಜಿನಗುಡುವ ಝೇಂಕಾರದ ದುಂಬಿಹಿಂಡು; ವನದಲ್ಲಿ ವೈಯಾರದಿಂದ ನಲಿದೊಲಿದು ಕೂಡುವ ಪ್ರೇಮಿಗಳು—ಎಲ್ಲಿ ನೋಡಿದರೂ ಯಾವ ಬೆಟ್ಟದ ಸಾಲು ಸಾಲಿನಲ್ಲಿ ಹೆಜ್ಜೆಯಿಟ್ಟರೂ—ಆ ಮೈನವಿರೇಳಿಸುವ ದೃಶ್ಯಗಳೆ! ಆ ನಾಡು—ತ್ಯಾಗಕ್ಕೆ ನೆಲೆ, ಭೋಗಕ್ಕೆ ಸೆಲೆ, ಸಂಗೀತ ಸಾಹಿತ್ಯ ಗೋಷ್ಠಿಗಳ ಆಗರ! ಇವುಗಳ ದರ್ಶನ, ಎಂತಹವರಿಗೂ ಬೇರೆಬಗೆಯನ್ನು ಸೃಷ್ಟಿಸುತ್ತವೆಯಲ್ಲವೆ?

ಈ ಬನವಾಸಿ ದೇಶದ ವರ್ಣನೆ—ಅನೇಕ ಶಾಸನಗಳಲ್ಲಿ ಬಂದಿದೆ, ಕಾವ್ಯಗಳಲ್ಲಿ ಬಂದಿದೆ. ಶಾಂತಿನಾಥ ಕವಿಯ 'ಸುಕುಮಾರ ಚರಿತ' ಮತ್ತು ಆತನೇ ಬರೆದ ಶಾಸನ ಅನಂತರ 'ಪ್ರಭುಲಿಂಗಲೀಲೆ' ಕೃತಿಯ ಕರ್ತೃವಾದ ಚಾಮರಸನ ವರ್ಣನೆಗಳು ಬಹಳ ಹೃದಯಂಗಮವಾಗಿದ್ದು ಚಿತ್ತಾಕರ್ಷಕವಾಗಿವೆ. ಆ ವರ್ಣನೆಗಳು ಬಹಳ ವಿಸ್ತಾರವಾಗಿದ್ದು ಎಲ್ಲವನ್ನು ಕೊಡುವುದಾಗುವುದಿಲ್ಲ. ಶಾಂತಿನಾಥ, ಬಳ್ಳಿಗಾವಿಯ ಶಾಸನವೊಂದರಲ್ಲಿ (ಎಪಿ.ಕ.ಸಂ. vii, ಶಿಕಾರಿಪುರ-೧೩೬) ಬಳ್ಳಿಗಾವಿಯನ್ನು ಬಹುವಿಸ್ತಾರವಾಗಿ ವರ್ಣಿಸಿದ್ದಾನೆ. ಸ್ವಲ್ಪ ಭಾಗವನ್ನು ಇಲ್ಲಿ ಉದ್ಧರಿಸುತ್ತೇನೆ.

ವೃ॥ ಜನಪದ ಕೋಟಿಯೊಳ್ನೆಗರ್ದ ಕುನ್ತಳದೇಶಮ ಸಾರವಲ್ಲಿ ತಾಂ
ಬನವಸೆನಾಡು ಸಾರವದಱೊಳ್ಪರಿಭಾವಿಸೆ ಬಳ್ಳಿಗಾವೆ ಸ

ಜ್ಞನನಿಧಿ ಪಟ್ಟಣಂಗಳ ತವರ್ಮನೆ ಸಾರಮೆನಿಪ್ಪ ಕೀರ್ತ್ತಿರ್ತ
ದ್ವಸನಿಧಿ ಮೇರೆಯಾಗೆ ಸಲೆಪರ್ವಿದುದುರ್ವಿಗೀ ಸಮಸ್ತ ಧಾತ್ರಿಯ ||

ಅದು ವಿಬುಧೈಕ ವಾಸಮಮರಾವತಿಯನ್ತತಿ ಭೋಗಿಸೇವ್ಯವ
ಪ್ಪುದು ಪೆಸರ್ವೆತ್ತು ರಂಜಿಸುವ ಭೋಗವತೀಪುರದನ್ತೆ ಭಾವಿಸ
ಲ್ಕದು ಧನದ ಪ್ರಸೇವ್ಯವಳಕಾಪುರದನ್ತೆ ಬಳ್ಳಿಗಾವೆಗಾ
ಪ್ಪುದೊ ಪಡಿಪಟ್ಟಣಂ ನೆಗರ್ದ ವಾರ್ಧಿಪರೀತ ಸಮಸ್ತ ಧಾತ್ರಿಯೊಳ್ ||

ವ || ಅಲ್ಲಿಯ ನಗರ ಜನಂಗಳ ಗುಣಂಗಳಂ ಪೇಳ್ವೊಡೆ
ವೃ || ಪರಹಿತರೇಕವಾಕ್ಯರಭಿಮಾನಿಗೆ ತವರ್ಮನೆ ಧರ್ಮವಾಗರಂ
ಸರಸಕವೀಶ್ವರಾವಳಿಗೆ ಕೇಳಿಗೃಹಂ ಕಣಿಪೆರ್ಮೆಗೊಪ್ಪೊದುಂ
ಹರಿಹರ ಪಂಕಜಾಸನ ಜಿನಾದಿ ವಿನಿರ್ಮಳ ಧರ್ಮದಿಂದೊಡಾ
ದ್ದೊರೆಯುತೊ ಬಳ್ಳಿಗಾವಿಯು ಮಹಾನಗರಂಗಳೊಳೀ ಧಾತ್ರಿಯೊಳ್ ||

ಜನಪದ (=ಪ್ರದೇಶ ಹಾಗೂ ಸಾಂಸ್ಕೃತಿಕ ಘಟಕ) ಗಳಲ್ಲಿ ಕುನ್ತಳ ದೇಶವೇ ಸಾರವತ್ತಾದದ್ದು; ಆ ಕುನ್ತಳ ದೇಶದಲ್ಲಿ ಬನವಸೆನಾಡು ಸಾರವತ್ತಾದದ್ದು; ಆ ಬನವಸೆ ನಾಡಿನಲ್ಲಿ ಬಳ್ಳಿಗಾವಿ ಪಟ್ಟಣವು ಸಾರವತ್ತಾದದ್ದು; ಪ್ರಪಂಚ ದಲ್ಲಿಯೆ ಅಂತಹ ಇನ್ನೊಂದು ಪಟ್ಟಣವಿಲ್ಲ. ಅದು ಇಂದ್ರನ ಅಮರಾವತಿ, ಆದಿಶೇಷನ ಭೋಗವತೀಪುರ, ಕುಬೇರನ ಅಲಕಾಪುರ, ಈ ಧಾತ್ರಿಯಲ್ಲಿ ಅದಕ್ಕೆ ಸಮನಾದ ಪಟ್ಟಣ ಇನ್ನೊಂದಿಲ್ಲ. ಇನ್ನು ಅಲ್ಲಿಯ ಜನರು—ಗುಣಭರಿತರು, ಪರಹಿತರು, ಏಕವಾಕ್ಯರು (ನುಡಿವಂತೆ ನಡೆಯುವವರು), ಜ್ಞಾನವಂತರು, ಧರ್ಮವಂತರು, ಸರಸಕವಿಗಳು, ಕೀರ್ತಿಗೆಕಣಿಗಳು, ಹರಿಹರಬ್ರಹ್ಮ ಮತ್ತು ತೀರ್ಥಂಕರರಲ್ಲಿ ಭಕ್ತಿಯುಳ್ಳವರು—ಸರ್ವಮತಸಹಿಷ್ಣುಗಳು. ಜನರು ಹೀಗಿದ್ದರೆ ದೇಶ ಒಳ್ಳೆಯದಾಗಿರುವುದರಲ್ಲಿ ಸಂದೇಹವಿಲ್ಲ. ಇಂದಿನ ನಮ್ಮ ಯುಗಕ್ಕೆ ಈ ಹೊಂದಾಣಿಕೆ ಆದರ್ಶವಾಗಬೇಕಾಗಿದೆ.

ಕಾಲಕಾಲಕ್ಕೆ – ರಾಜಮಹಾರಾಜರುಗಳ, ಮಹಾಮಾಂಡಲಿಕರ, ಸಾಮನ್ತಮನ್ನೆಯರ ತೋಳ್ಬಲಕ್ಕನುಸಾರವಾಗಿ ಅವರವರ ಮಂಡಲಗಳ–ರಾಜ್ಯದ ಎಲ್ಲೆಗಳ – ಸೀಮಾರೇಖೆಗಳು ಆಗಾಗ್ಗೆ ಬದಲಿಯಾಗುತ್ತಿದ್ದವು. ಚಾಮರಸ ಕವಿಯು ಬನವಸೆಯು ಬೆಳುವೊಲದೇಶದಲ್ಲಿದೆಯೆಂದು ಹೇಳಿ

ವರ್ಣಿಸಿದ್ದಾನೆ :

...........ಅಮರಾದ್ರಿಗೊಪ್ಪುವ ತೆಂಕದಿಕ್ಕಿನಲಿ।
ಸತ್ಯದಲಿ ಸದ್ಭಕ್ತಿಯಲಿ ಸ
ದ್ವೃತ್ತಿಯಲಿ ಸಚ್ಚರಿತದಲಿ ಸಂ
ಪತ್ತಿನಲಿ ಸಲೆಸೊಗಸಿ ಬೆಳುವಲದೇಶ ಮೆಱೆಯಿಹುದು॥

ಅದಱೊಳವನೀಕಾಂತೆಗೊಪ್ಪುವ
ವದನವೋ ಶೃಂಗಾರಸಾರದ
ಸದನವೋ ಸೊಬಗಿನ ಸುಮಾನದ ಸುಖದ ನೆಲೆವೀಡೊ।

ಸುದತಿ ರತ್ನಗಳೊಗೆವ ಚೆಲುವಂ
ಬುಧಿಯೊ ಪೇಳನೆ ಸಕಲ ಸೌರಂ
ಭದಲಿ ಸೊಗಸಿಹುದಲ್ಲಿ ಬನವಸೆಯೆಂಬ ಪಟ್ಟಣವು॥

ವಾಸ್ತವವಾಗಿ 'ಬೆಳ್ವೊಲ-೩೦೦' ಎಂಬುದು ಒಂದಾನೊಂದು ಕಾಲದಲ್ಲಿ 'ಬನವಾಸಿಪನ್ನಿರ್ಛಾಸಿರ (ಬನವಾಸಿ-೧೨೦೦೦) ದಿಂದ ಭಿನ್ನವಾದ ಪ್ರಾಂತ. ರನ್ನ ಅದನ್ನು 'ಬೆಳ್ವೊಲ-೩೦೦' ಎಂದೇ ವರ್ಣಿಸಿದ್ದಾನೆ :

ಕನ್ನಡ ಮೆರಡಱುನೂಱಱ
ಕನ್ನಡಮಾ ತಿರುಳಕನ್ನಡಂ ಮುಘರಮ್ಯೋ।
ತ್ಪನ್ನಂ ಸಂಸ್ಕೃತಮೆನೆ ಸಂ
ಪನ್ನಂ ನೆಗೞ್ದುಭಯಕವಿತೆಯೊಳ್ ಕವಿರನ್ನಂ॥

ಇಲ್ಲಿನ 'ಕನ್ನಡಮೆರಡಱುನೂಱು' ಪ್ರದೇಶವೆಂದರೆ ಪುಲಿಗೆರೆ-೩೦೦ ಮತ್ತು ಬೆಳ್ವೊಲ-೩೦೦ (ನೋಡಿ : ಗದಾಯುದ್ಧದರ್ಪಣ, ಪು. ೩೦)

'ಕುಂತಳ' 'ರಟ್ಟಪಾಡಿ' ಇವು ಏಳೂವರೆ ಲಕ್ಷ ಎಂದು ಮೊದಲು ರಾಷ್ಟ್ರಕೂಟರ ಅನಂತರ ಕಲ್ಯಾಣದ ಚಾಳುಕ್ಯರ ರಾಜ್ಯವನ್ನು ಸೂಚಿಸುವ ಒಂದು ದೊಡ್ಡ ಭೂಭಾಗ. ಸು.ಕ್ರಿ.ಶ. ೧೦೭೪ರ ಸಮಯದಲ್ಲಿ ಕುಂತಳದ ವ್ಯಾಪ್ತಿ ಅತ್ಯಂತ ದಕ್ಷಿಣಕ್ಕೆ ಸರಿದಿತು ; ಉತ್ತರದಲ್ಲಿ ಅದು ಆ ಕಲ್ಯಾಣದ ಆಚೆಗೂ (ನಾಂದೇಡ ಜಿಲ್ಲೆಯ ಶಾಸನ-೨೩) ನಾಂದೇಡ ಇತ್ಯಾದಿಯಾಗಿ ಹಬ್ಬಿ

ಕೊಂಡಿತ್ತು :

ಕುನ್ತಳದೇಶವಧೂ ಮೃದು
ಕುನ್ತಳ ದೇಶದನ್ತೊಲೆಸೆವ ಸಾಯಿರಬಾಡ ।
ಕ್ಕನ್ತೊಡವಿದೆನಿಸಿ ಕೂಡೆ ಬ
ಸನ್ತಮೆನಿಪ್ಪವರವಾಡಿಯೇಳ್ನೂಱಱೊಳ್ ॥

ಈ ಶಾಸನದ ಕಾಲ ಕ್ರಿ.ಶ. ೧೧೨೨.

ಕವಿ ಚಕ್ರವರ್ತಿ ರನ್ನ ತಾನು ಹುಟ್ಟಿದ ಪ್ರದೇಶವನ್ನು ಹೀಗೆ ವರ್ಣಿಸಿದ್ದಾನೆ :

ಅಱೆಕೆಯ ಗಟ್ಟಗೆಯುಂ ಪೆ
ರ್ದೊಱೆಯುಂ ಪರಿದಲ್ಲಿ ತದ್ದವಾಡಿಗೆ ತೆಂಕಲ್
ತೊಱೆಗಲೆಗೆ ಬಡಗಲಿರ್ದುದು
ನೆಱೆಯೆ ಸುಖೋದಿಪಮೆನಿಸಿ ಬೆಳುಗಲಿ ದೇಶಂ ।
ಬೆಳುಗಲಿಯಯ್ನೂಱರೊಳ
ಗ ಳಮೆನಿಸುವ ಜಂಬುಖಂಡಿಯೆಪ್ಪತ್ತರ್ಕಂ
ತಿಳಕವೆನೆ ನೆಗೞ್ದ ಮುದುವೊೞ
ಲೊಳೆ ಪುಟ್ಟಿ ಸುಪುತ್ರನೆನಿಸಿದಂ ಕವಿರನ್ನಂ ॥

ತಾನು ಹುಟ್ಟಿದ ಆ ಪ್ರದೇಶ ಅತಿಶಯ ಸುಖವನ್ನು ಕೊಡುವಂತಹದಾಗಿತ್ತು ಎಂದು ಹೇಳಿದ್ದಾನೆ—ರನ್ನ. ಗಟ್ಟಗೆ (ಘಟಪ್ರಭಾ) ನದಿ, ಪೆರ್ದೊಱೆ (ಕೃಷ್ಣಾ) ನದಿ ಹರಿಯುತ್ತಿರುವಲ್ಲಿ ತದ್ದವಾಡಿ (ತರ್ದವಾಡಿ-೧೦೦೦) ವಿಷಯಕ್ಕೆ ದಕ್ಷಿಣದಲ್ಲಿ ಬೆಳುಗಲಿ-೫೦೦ ; ಅದರ ಅಂತರ್ಗತವಾದ ಜಂಬುಖಂಡಿ (ಜಮಖಂಡಿ)-೭೦ ; ಆ ಜಂಬುಖಂಡಿ-೭೦ರಲ್ಲಿ ತಿಲಕಪ್ರಾಯವಾದ ಊರು ಮುದುವೊೞಲು— ಅಲ್ಲಿ ಆತನ ಜನ್ಮವಾಯಿತು.

ಈ ಪ್ರದೇಶಕ್ಕೆ ಇನ್ನಷ್ಟು ಉತ್ತರಕ್ಕಿರುವ ಕಲ್ಯಾಣವನ್ನು ವಿರುಪಾಕ್ಷ ಪಂಡಿತನು ಚೆನ್ನಬಸವ ಪುರಾಣದಲ್ಲಿ ವಿಶೇಷ ವಿಸ್ತಾರವಾಗಿ ವರ್ಣಿಸಿದ್ದಾನೆ :

ಅಲ್ಲಿಗಲ್ಲಿಗೆ ಬೆಳೆವ ಬೆಳೆಗಳಿಂ ಮೊೞೆಗಳಿಂ ।
ದಲ್ಲಿಗಲ್ಲಿಗೆ ನೆಱೆವ ತಳಗಳಿಂ ಕೊಳಗಳಿಂ ।

ದಲ್ಲಿಗಲ್ಲಿಗೆ ರನ್ನದರೆಗಳಿಂ ಕೆಱೆಗಳಿಂ ಪರಿವ ಕಾಲುವೆಗಳಿಂದ ।
ಅಲ್ಲಿಗಲ್ಲಿಗೆ ತೋರ್ಪಗಿರಿಗಳಿಂ ಕರಿಗಳಿಂ ।
ದಲ್ಲಿಗಲ್ಲಿಗೆ ನೆಱೆದ ಶುಕಗಳಿಂ ಪಿಕಗಳಿಂ ।
ದಲ್ಲಿಗಲ್ಲಿಗೆ ಗವಾಸ್ಪದಗಳಿಂ ನದಗಳಿಂದಾ ದೇಶವೊಪ್ಪಿರ್ದುದು ॥

ಪ್ರಾಯಃ ಈ ಬಗೆಯ ವರ್ಣನೆ ನಮ್ಮ ಆಗಿನ ಇಡಿ ಕರ್ನಾಟಕದ ಅನೇಕ ಸ್ಥಳಗಳ ಬಗ್ಗೆ ಬಂದಿದೆ. ಹೀಗಾಗಲಿಕ್ಕೆ ಬಹುಶಃ ಅಷ್ಟಾದಶವರ್ಣನೆಗಳಲ್ಲಿ ಒಂದಾದ 'ನಗರದ ವರ್ಣನೆ' ಕಾರಣವೆಂದು ತೋರುತ್ತದೆ. ದಂಡಿಯು ಕಾವ್ಯಾದರ್ಶದಲ್ಲಿ ಈ ಅಷ್ಟಾದಶವರ್ಣನೆಗಳ ಪ್ರಸ್ತಾಪ ಬಂದಿದೆ. ಅವನು ನಮ್ಮ ಪ್ರಾಚೀನ ಕವಿಗಳಿಗೆ ಆದರ್ಶಪ್ರಾಯರಾದ ಶಾಸ್ತ್ರಕಾರರಲ್ಲಿ ಮೊದಲ ಸ್ಥಾನ ಗಿಟ್ಟಿಸಿದ ವ್ಯಕ್ತಿ. ಆ ಪ್ರಭಾವ ಇರಬಹುದು.

ಸುಮಾರು ೨೦೦೦ ವರ್ಷದ ಇತಿಹಾಸದಲ್ಲಿ ಉತ್ತರದ ಕಲ್ಯಾಣದಿಂದ ದಕ್ಷಿಣದ ತಲಕಾಡಿನವರೆಗೆ ಅನೇಕ ಸಣ್ಣ ದೊಡ್ಡ ರಾಜಮನೆತನಗಳು ಅಸ್ತಿತ್ವಕ್ಕೆ ಬಂದು ರಾಜ್ಯವಾಳಿದವು. ಅವುಗಳಿಗೆ ಅಲ್ಲಲ್ಲಿ ಸಂಪದ್ಭರಿತ ರಾಜಧಾನಿಗಳಿದ್ದವು; ಅವುಗಳ ಸಂಖ್ಯೆ ವಿಪುಲ : ದೊಡ್ಡ ದೊಡ್ಡ ರಾಜಧಾನಿಗಳಲ್ಲಿ ಪ್ರತಿಷ್ಠಾನ (ಪೈಠಣ), ಕಲ್ಯಾಣ, ಮಳಖೇಡ (ಮಾನ್ಯಖೇಟ) ಬೀದರ್, ಕಲ್ಬುರ್ಗಿ (ಗುಲ್ಬರ್ಗ), ಬಿಜಾಪೂರ್, ಬಾದಾಮಿ, ವಿಜಯನಗರ(ಹಂಪಿ), ದೋರಸಮುದ್ರ, ಮನ್ನೆ, ತಲವನಪುರ, ಬನವಾಸಿ, ಬಾರ್ಕೂರು, ಇಕ್ಕೇರಿ, ಕೆಳದಿ, ಮೈಸೂರು ಮುಂತಾಗಿ ಅನೇಕ. ಒಂದೊಂದರ ವರ್ಣನೆಯೂ ವಿಪುಲವಾಗಿ ದೊರೆಯುತ್ತದೆ. ವಿಜ್ಞಾನೇಶ್ವರ ಕಲ್ಯಾಣದಂತಹ ನಗರ ಹಿಂದೆ ಇದ್ದಿಲ್ಲ ಮುಂದೆ ಇರದು ಎಂದು ವರ್ಣಿಸಿದ್ದಾನೆ: ನಾಸೀದಸ್ತಿ ಭವಿಷ್ಯತಿ ಕ್ಷಿತಿತಲೇ ಕಲ್ಯಾಣಕಲ್ಪಂ ಪುರಂ. ಪ್ರಾಕೃತಕವಿ ಪುಷ್ಪದಂತ ಮಳಖೇಡವನ್ನು, ಅಲ್ಲಿನ ಸುಂದರ ಸೌಧಗಳನ್ನು, ತನ್ನ ಮೂರು ಕಾವ್ಯಗಳಲ್ಲೂ ವರ್ಣಿಸಿದ್ದಾನೆ. ಗಂಗವಾಡಿ-೯೬೦೦೦ ಹಾಗೂ ಅದರ ರಾಜಧಾನಿಗಳ ವರ್ಣನೆ ಹಲವು ಶಾಸನಗಳಲ್ಲಿ ಬಂದಿದೆ. ಮಹಾಕಾವ್ಯ ಬರೆಯಲು ಹೊರಟವರೆಲ್ಲ ಕಡ್ಡಾಯವಾಗಿ ಕರ್ನಾಟಕ ಪ್ರದೇಶವನ್ನು ವರ್ಣಿಸಿದ್ದಾರೆ. ಕವಿರಾಜಮಾರ್ಗಕಾರ, ನಂಜುಂಡ ಅನಂತರ ಈ ೨೦ನೆಯ ಶತಮಾನದ ಅನೇಕರ ಕಾವ್ಯದಲ್ಲಿ 'ಕಾವೇರಿಯಿಂದ ಗೋದಾವರಿವರೆಗಿನ ಪ್ರದೇಶದ--- ನದಿಗಳ ವರ್ಣನೆಯು ಬಂದಿದೆ. ನಮ್ಮ ಕನ್ನಡ ನಾಡು ಪ್ರಾಚೀನಂಗೆ

ಸೌಂದರ್ಯದ-ಆದರ್ಶದ-ಸೀಮೆ :

ಗಾಡಿಯ ಸೀಮೆ ಚೆಲ್ವೊಗೆದ ತಾಣಮಲಂಪಿನಸಂತೆ ಪೆಂಪುಸಾ
ರ್ದಾಡುವ ಭೂಮಿ ಸೌಖ್ಯದೆಡೆ ಪುಣ್ಯದಗೊತ್ತು ವಿನೋದದಾಗರಂ
ಮೋಡಿಯ ಮಂಟಪಂ ಸಿರಿಯ ಪೆರ್ಚುಗೆಗೊಳ್ಗೆನೆ ಮುಕ್ತಿ ಕಾಂತೆ ಕೈ
ಗೂಡುವಬೀಡು ಕನ್ನಡದನಾಡು ವಿರಾಜಿಪುದೆಂತು ಬಣ್ಣಿಪೆಂ ॥

—ಚಿಕ್ಕುಪಾಧ್ಯಾಯ

ಜಿನಧರ್ಮಾವಾಸಮಾದತ್ತು ಮಳವಿನಯದಾಗರಮಾದತ್ತು ಪದ್ಮಾ
ಸನಸಿರ್ಮಾ ಸದ್ಮಮಾದತ್ತತಿವಿಶದಯಶೋಧಾಮಮಾದತ್ತು ವಿದ್ಯಾ
ಧನ ಜನಸ್ಥಾನಮಾದತ್ತು ಸಮುಕ್ತರಳ ಗಂಭೀರ ಸದ್ಗೇಹಮಾದ
ತ್ತೆನಿಸಲ್ಕಿಂತುಳ್ಳ ನಾನಾಮಹಿಮೆಯಿಂ ಶೋಭಿಸೆಗುಂ ಚಾರುಕರ್ಣಾಟದೇಶಂ

—ಶಾಸನಪದ್ಯಮಂಜರಿ, ೨೫೦

ಹೊಸಗನ್ನಡ ಸಾಹಿತ್ಯದಲ್ಲೂ ನಮ್ಮ ಕವಿಗಳಿಗೆ ನಮ್ಮ ನಾಡು-ನುಡಿ-ಜನ-ಎಲ್ಲ ವಿಷಯಗಳ ಮೇಲೂ ವಿಶೇಷ ಪ್ರೇಮವಿದ್ದುದು ಕಂಡುಬರುತ್ತದೆ. ನವೋದಯ, ನವ್ಯ ಮತ್ತು ಬಂಡಾಯ ಹಾಗೂ ದಲಿತ ಸಾಹಿತ್ಯಗಳಲ್ಲಿ ಕರ್ನಾಟಕದ ಪ್ರಜ್ಞೆಯು ಮೂಡಿ ನಿಂತಿದೆ. ೧೯೫೬ರಲ್ಲಿ ಭಾಷಾವಾರು ಪ್ರಾಂತಗಳಾಗುವವರೆಗೆ ಕರ್ನಾಟಕ (ಮೈಸೂರು ಎಂದು ಆಗ ನಾಮಕರಣಗೊಂಡ) ರಾಜ್ಯ ಅಸ್ತಿತ್ವದಲ್ಲಿ ಬರುವವರೆಗೆ-ಒಂದು ಬಗೆಯ ಕಾಣ್ಕೆ, ಅನಂತರ ಇಲ್ಲಿನ ಶೋಷಣೆಯ ಚಿತ್ರ-ಇವು ನಮ್ಮ ಕವಿಗಳ ಕಾವ್ಯದಲ್ಲಿ ಮೂಡಿನಿಂತಿವೆ. ವಿಜಯನಗರ ಸಾಮ್ರಾಜ್ಯದ ಪತನಾನಂತರ ಕರ್ನಾಟಕಕ್ಕೆ ಭಾರೀ ಆಘಾತವೊದಗಿತು. ದೇಶ ಹಲವು ಸಂಸ್ಥಾನಗಳಲ್ಲಿ-ಹಲವು ಆಡಳಿತಗಳಲ್ಲಿ-ಹಂಚಿಹೋಯಿತು. ಕನ್ನಡ ಮಾತನಾಡುವ ಜನ, ಬೇರೆ ಬೇರೆ ಭಾಷೆಗಳ ಅಳರಸರ ಕೆಳಗೆ ಬದುಕುವಂತಾಗಿ ಅವರ ನುಡಿಯನ್ನೇ ಆಡಳಿತಕ್ಕೆ ಬಳಸಬೇಕಾದುದರಿಂದ ತಮ್ಮ ನುಡಿಯನ್ನು ಕೇವಲ ಮಾತನಾಡುವ ಹಂತದಲ್ಲಿಟ್ಟುಕೊಂಡು ಜೀವನ ಸಾಗಿಸುವಂತಾಯಿತು. ಸ್ವಲ್ಪ ಕಾಲದಲ್ಲೆ ಧಾರವಾಡದಂತಹ ಸ್ಥಳಗಳಲ್ಲಿ ಕೂಡ ಕನ್ನಡ ನುಡಿ ಗೌಣಸ್ಥಾನಕ್ಕೆ ತಳ್ಳಲ್ಪಟ್ಟಿತು. ಆಗ ಶಾಂತಕವಿ (ಬಾಳಚಾರ್ಯ ಸಕ್ರಿ) ಮೊದಲಾದ ಅನೇಕ ಕನ್ನಡದ ಪುಣ್ಯಪುರುಷರು ತಮ್ಮ ತನುಮನಧನಗಳ ಮೂಲಕ-ಕನ್ನಡಕ್ಕಾಗಿ ಟೊಂಕಕಟ್ಟಿ ದುಡಿದರು. ೧೯೪೯ರಲ್ಲಿ ಕುವೆಂಪು

ಅವರು ಬರೆದಿರುವ—

ದೀಕ್ಷೆಯ ತೊಡು ಇಂದೇ,
ಕಂಕಣ ಕಟ್ಟಿಂದೇ !
ಕನ್ನಡ ನಾಡೊಂದೇ,
ಇನ್ನೆಂದೂ ತಾನೊಂದೇ !

—ಎಂಬ "ಕರ್ನಾಟಕ ಮಂತ್ರ ದೀಕ್ಷೆ" ಕವನ ಕೂಡ ಇದನ್ನೇ ಸಾರುತ್ತದೆ. ಕುವೆಂಪು ಅವರಿಗೆ ಕರ್ನಾಟಕ ಕೇವಲ ಒಂದು ಮಣ್ಣಿಗೆ–ನೆಲಕ್ಕೆ–ಇರುವ ಹೆಸರಲ್ಲ :

ಕರ್ಣಾಟಕ ಎಂಬುದೇನು
ಹೆಸರೆ ಬರಿಯ ಮಣ್ಣಿಗೆ ?
ಮಂತ್ರ ಕಣಾ ! ಶಕ್ತಿ ಕಣಾ !
ತಾಯಿಕಣಾ ! ದೇವಿ ಕಣಾ !
ಬೆಂಕಿ ಕಣಾ ! ಸಿಡಿಲು ಕಣಾ !
ಕಾವ ಕೊಲುವ ಒಲವ ಬಲವ
ಪಡೆದ ಛಲದ ಚಂಡಿ ಕಣಾ
ಋಷಿಯ ಕಾಣ್ಬ ಕಣ್ಣಿಗೆ !

ಈ ಮಲೆನಾಡ ಮಹರ್ಷಿಯ ಗುರು ಕನ್ನಡದ 'ಶ್ರೀ'–ಬಿ. ಎಂ. ಶ್ರೀ 'ಕನ್ನಡ ತಾಯ್ನೋಟ' 'ಕನ್ನಡದ ಬಾವುಟ' ಮುಂತಾಗಿ ಹಲವೆಡೆಗಳಲ್ಲಿ, ಕನ್ನಡದ ಹಿಂದಿನ ಹಿರಿಮೆಗರಿಮೆಗಳ-ಅಧಃಪತನಕ್ಕಿಳಿದ ಸಮಕಾಲೀನ ದುಃಸ್ಥಿತಿಗಳ–ಬಗೆಗೆ, ಕರುಳು ಕದಡುವ ಹಾಗೆ ಬರೆದಿದ್ದಾರೆ. ಶ್ರೀಯವರಿಗೆ, ಕನ್ನಡ ನಾಡನ್ನು ಸುತ್ತಿದವರಿಗೆ-ಮುಂದೆ ನಿಂತದ್ದು :

ಏನು ಚೆಲುವಿನ ನಾಡು ! ಚೆಲುವು ಚೆಲ್ಲುವ ನಾಡು ! ಕನ್ನಡದ ನಾಡು !
ಏನು ಚಿನ್ನದ ನಾಡು ! ಸನ್ಮೊಲುಮೆಯಾ ನಾಡು ! ಸನ್ಮಿನಿಯ ನಾಡು !
ಕಾವೇರಿಯಿಂದಮಾ ಗೋದಾವರಿವರೆಗೆ ಚಾಚಿರುವ ನಾಡು !

'ಪುಲಕೇಶಿ ಹರ್ಷರೇ ಹೊಯ್ದು ಸಾರುವರು' ಎಂದವರ ಮುಂದೆ—

"ಕೇಳಣ್ಣ ನಾನೊಬ್ಬ ಹಳೆಯ ಮುತ್ತೈದೆ. ಹಿರಿದಾಗಿ ಬಾಳಿದವಳೊಮ್ಮೆ,
ಈಗ ಬಡತನ, ಬಡವೆ, ಬಡವಾದೆ : ಬಡವಾದ ಮಕ್ಕಳನು ನೋಡಿ,

ಬತ್ತಿ, ಮುತ್ತಿ ಮುಡಿಯು ಸೊರಗಿಸಲಿ ಬಡವಾದೆ—ಸಾವಿಲ್ಲ ನನಗೆ !
ಸಾವಿಲ್ಲ ಸಾಯುತಿಹೆ

—ಎಂದು ಸಾರುವ ಕನ್ನಡ ತಾಯಿ ಅವತರಿಸಿ ನಿಂತಿದ್ದಾಳೆ—'ಪರರ ಕೈ ಕಾಯುತ್ತ, ಸಾಯದೆಯೆ ಬದುಕದೆಯೆ ಬಾಳನೂಕುವೆನು' ಎಂದಿದ್ದಾಳೆ—ಆಕೆ. ಅವಳಿಗೆ ರಂಬಿಸಿ—ನಂಬಿಸಿ—ಹರಸಮ್ಮ ಎಂದು ಬೇಡಿಕೊಂಡಿದ್ದಾರೆ 'ಶ್ರೀ'. ಅದಕ್ಕೆ—ನಕ್ಕಳಾ ತಾಯಿ! ಶ್ರೀಯವರಿಗೆ ನಾಡಿನಲ್ಲಿ ಹೊಸ ಚೈತನ್ಯ ಮೂಡಿದುದೂ ಕಂಡಿದೆ-ಅಂತೆಯೆ "ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ, ಬಾಳ್ಗೆ—ಕನ್ನಡದ ತಾಯ್ ಗೆಲ್ಗೆ ಬಾಳ್ಗೆ" ಎಂದು ಹಿರಿಯ ಕೂಗನ್ನು ಕೂಗಿದ್ದಾರೆ. ಈ ಹೊಸ ಚೈತನ್ಯ ಬೆಟಗೇರಿ ಕೃಷ್ಣಶರ್ಮರ ಕವಿತೆಯಲ್ಲಿ

"ಕನ್ನಡ ನಾಡಿನ ಮುಂಬಾನೊಳು ಚಿಂ
ಬಣದ ಬೆಳಕು ಇದೇತರದು ?
ಹೊನ್ನಗದಿರ ಬರಲಿಹನೆಂದೊರೆಯಲು
ಮುನ್ನವೇ ಬಂದರುಣನದೇ ಇದು ?
    ನನ್ನಿಯು ! ನಿಜ ! ಅರುಣನದೆ ಇದು !"

ಎಂದು ಮೂಡಿನಿಂತಿದೆ.

ಹರಿದು ತುಂಡಾದ ಕನ್ನಡನಾಡಿನ ದುಃಸ್ಥಿತಿ ಶ್ರೀನಿವಾಸರಿಗೆ (ಮಾಸ್ತಿ ವೆಂಕಟೇಶ ಅಯ್ಯಂಗಾರ್) ಹೀಗೆ ಕಂಡಿದೆ :

ಹರಿದು ತುಂಡಾಗಿಹುದು ಇಂದು ಕನ್ನಡ ನಾಡು ;
    ಅಣ್ಣ ತಮ್ಮದಿರು ತಾವಣ್ಣ ತಮ್ಮದಿರೆಂದು
ತಿಳಿಯಲಾರರು ನಡೆಯಲಾರರು ; ಬಾ ಬಂಧು
    ಎಂದು ಕರೆಯಲು, ಸ್ವಾಮಿ ನಮ್ಮೂರು ಧಾರವಾಡ
ನಮ್ಮೂರು ಮೈಸೂರು ನಮ್ಮೂರು ಎರಕಾಡು
    ಮುಜುರಡೆಯಿಂದ ಕರೆಯಿರಿ ನಮ್ಮ ಎನ್ನುವರು.
ಕನ್ನಡದ ನಾಡ ಜನವೆಲ್ಲವೂ ನಮ್ಮವರು
    ಬಡಗ ತೆಂಕಣ ಮೂಡ ಕೊಡಗ ತಾಳವ ತೋಡ

ಇನ್ನೆಲ್ಲ ಕನ್ನಡಿಗರೆನ್ನವರು ಎನ್ನುಸಿರು,
  ನಾವೆಲ್ಲ ಒಂದು ಮನೆಯುವರಣ್ಣತಮ್ಮದಿರು

ನಮ್ಮೆಲ್ಲರಸು ಪಡೆದುದೊಂದೆ ನಾಡಿನ ಬಸಿರು
  ಎಂದು ನಾವರಿದೆವೇ ನಮಗೆ ಇನ್ನಾರೆದುರು !

ಹಾ ನನ್ನ ಸೋದರರೆ ಬನ್ನಿ ಒಂದಾಗಿ
  ಜಯವಧುವ ನಿಮ್ಮ ತೋಳಿನೊಳಿಟ್ಟು ತೂಗಿ

ಇಂತಹದೆ ಇನ್ನೊಂದು ಕಳವಳದ ಗೀತೆ ಸಿದ್ಧಯ್ಯ ಪುರಾಣಿಕರ 'ಕನ್ನಡದ ದೀಪವದು ಕಾಣದಿಹದು'—

ಭಾರತಿಯ ಮನೆಯಲ್ಲಿ ಲಕ್ಷದೀಪಗಳಿಂದು
  ನಕ್ಷತ್ರಗಳ ತೆರದಿ ಹೊಳೆಯುತಿಹವು

....
ಮೂಲೆಗಳು ಬೆಳಗಿದರು ನಡುಮನೆಯು ಕತ್ತಲೆಯು
  ಕನ್ನಡದ ದೀಪವದು ಕಾಣದಿಹುದು !

....
ಮಿಂಚು ಹುಟ್ಟುವ ನಾಡು ಮನಸು ಮಾಡಿದಡೊಮ್ಮೆ
  ಬ್ರಹ್ಮಾಂಡವನ್ನೆಲ್ಲ ಬೆಳಗಬಹುದು !

ಕನ್ನಡದ ಸಿರಿವೆಳಕು ಮುನ್ನೀರುಗಳ ದಾಟಿ
  ನಿಟ್ಟು ನಿಟ್ಟಿನ ನಾಡ ತೊಳಗಬಹುದು !

ಮಂಗಳೂರಿನ ಮಣ್ಣ ಹಣತೆಯನು ಪಡೆಗೊಳಿಸಿ
  ಮೈಸೂರ ಸಿರಿಗಂಧದೆಣ್ಣೆ ಯೆರೆದು

ರಾಯಚೂರಿನ ಹತ್ತಿಯಲಿ ಬತ್ತಿಯಣಿಗೊಳಿಸಿ
  ಧಾರವಾಡದ ಕೆಚ್ಚು-ಕಡ್ಡಿ ಕೊರೆದು-

ಕನ್ನಡದ ಹೊಂದೀವಿಗೆಯ ಹಚ್ಚಲಿನ್ನೊಮ್ಮೆ
  ಬಸವ ವಿದ್ಯಾರಣ್ಯ ಹುಟ್ಟಿಬರಲಿ !

ಕನ್ನಡದ ವೈರಿಗಳ ಮೆಟ್ಟಿ ಕನ್ನಡನಾಡ
  ಚಿನ್ನರನ್ನದ ಗುಡಿಯ ಕಟ್ಟಿಬರಲಿ !

—ಎಂದು ಮುಂತಾಗಿ ಅವರು ಹಾಡಿ 'ತಾಯುಬರವನ್ನು' ಹಾರೈಸಿದ್ದಾರೆ.

ಏಕೀಕೃತ ಕರ್ನಾಟಕ ಆಗುವ ಅವಕಾಶವನ್ನು ಕಳಕೊಳ್ಳಬೇಡಿರೆಂದು ಕನ್ನಡ ಜನಕ್ಕೆ ಆಣೆ ಇಟ್ಟಿದ್ದಾರೆ:

ಪಂಪ ಹರಿಹರರಾಣೆ ನಾರಣಪ್ಪನ ಆಣೆ
ಮಹಾದೇವಿ ಚೆನ್ನಮ್ಮ ಓಬವ್ವರಾಣೆ!
ಈಗ ಬಂದಿದೆ ಕಾಲ ತಾಯ ಬರಿಸುವ ಕಾಲ
ಇದನು ಕಳಕೊಳ್ಳದಿರಿ ಕನ್ನಡದ ಆಣೆ!

ಮತ್ತೆ:

ದಿಲ್ಲಿಯಲ್ಲಿಹ ಕನ್ನಡಿಗನೂ ಒರೆಯಲೀ ತಾಯ್ನುಡಿಯನು,
ಬಾಡದಂತೆಯೆ ನೋಡಿಕೊಳ್ಳಲಿ ಕನ್ನಡದ ಭಾಗ್ಯದ ಕುಡಿಯನು

—ಎಂದು ಅದೇ ಭಾಗದ ಎಚ್. ಜೆ. ಉಪಾಧ್ಯಾಯರು ಹಾಡಿದ್ದಾರೆ. ಮಂಜೇಶ್ವರದ ಗೋವಿಂದಪೈ—

ತಾಯೆ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೆ!
ಹರಸು ತಾಯೆ, ಸುತರ ಕಾಯೆ ನಮ್ಮ ಜನ್ಮದಾತೆಯೆ!

ಸೋಲಗೆಲ್ಲವಾರಿಗಿಲ್ಲ?
ಸೋತು ನೀನೆ ಗೆದೆಯಲ್ಲ?
ನಿನ್ನ ನಳಿವು ತಟ್ಟಬೊಲ್ಲ!
ತಾಳಿಕೋಟೆ ಸಾಸಿರಂ

—ಎಂದು ಮುಂತಾಗಿ ತಾಯಿಯ ಬರವನ್ನು ಆಶಿಸಿದ್ದಾರೆ. ಹೀಗೆಯೆ ವಿ.ಸಿ. ಪು. ತಿ. ನ. ಕಣವಿ, ನರಸಿಂಹಸ್ವಾಮಿ ಮೊದಲಾದವರೂ ಕವಿತೆಗಳನ್ನು ಬರೆದಿದ್ದಾರೆ.

೧೯೪೭ ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದರೂ 'ಕರ್ನಾಟಕ' ಒಂದಾಗಲಿಲ್ಲ ಎಂಬ ಕೊರಗಿನ ಕಳಕಳಿಯನ್ನು ಗೋಪಾಲಕೃಷ್ಣ ಅಡಿಗರು—

ಇಂದು ಕೂಡ ಆಗದೆ
ಕನ್ನಡವೊಂದಾಗದೆ?
ಭೇದದ ಹುಳಿ ನೀಗದೇ,
ಕಾಯಿಮನ ಮಾಗದೇ,

ಒಮ್ಮತದೊಗ್ಗಟ್ಟಿನ ಫಲ
ನಮ್ಮ ಬಾಳಿಗಾಗದೆ ?
ಆಗದೇ, ಹೋಗದೇ ?
ಕನ್ನಡವೊಂದಾಗದೆ ?

—ಎಂದು ೧೯೫೨ ರಲ್ಲಿ ನಡೆದುಬಂದ ದಾರಿಯಲ್ಲಿ ತೋರಿಸಿಕೊಂಡಿದ್ದಾರೆ.

೧೯೫೬ರಲ್ಲಿ ರಾಜ್ಯಗಳ ಪುನರ್ಯೋಜನೆಯಿಂದ ಕರ್ನಾಟಕವು ಏಕೀಕೃತವಾಯಿತು.—'ಮೈಸೂರು'ಪ್ರದೇಶ' ಎಂಬ ಹೆಸರಲ್ಲಿ. ಆ ಸಂದರ್ಭದಲ್ಲಿ ಎಸ್. ಡಿ. ಇಂಚಲ ಅವರು "ಕರ್ನಾಟಕ ದರ್ಶನ" ಎಂಬ ಒಂದು ಕವನ ಸಂಕಲವನ್ನು ಹೊರತಂದಿರುವರು. ಇದರಲ್ಲಿ ೨೨ ಕವನಗಳಿವೆ. ದ. ರಾ. ಬೇಂದ್ರೆ—

ಬಡಗಣ, ತೆಂಕಣ, ಪಡುವಣ, ಮೂಡಣ
ನಡುವಣ ಕನ್ನಡ ಪಂಚಶಿಖ
ಪರಮೇಶ್ವರನೊಲು ಪ್ರಪಂಚ ಪ್ರಕಟಿಸಿ
ಮೈದೋರಿತು ಇಗೊ ಪಂಚಮುಖ ||

—ಎಂದು ಕರ್ನಾಟಕದ ಐದುಮುಖಗಳ ಆಯಾಮವನ್ನು ನಮಗೆ ಕೊಟ್ಟಿದ್ದಾರೆ. ವಿ. ಕೃ. ಗೋಕಾಕ—

ಕನ್ನಡದ ಅಮೃತ ಬಿಂದುಗಳ ಮಾಲೆ
ಹೊಳೆವಿರಲಿ ಭೂವ್ಯೋಮ ಪಟವ ಮೇಲೆ

—ಎಂದು ಹಾಡಿಪ್ಪಾರೆ. ಇಲ್ಲಿಯ ಹಂತದವರೆಗೆ ಸುಮಾರು ಯಾವುದೇ ಕವಿಯ ಕವಿತೆಯನ್ನು ಎತ್ತಿಕೊಂಡರೂ ನಾಡಿನ ಪ್ರಾಚೀನ ವೈಭವ, ಹಿಂದಿನ ಕೀರ್ತಿಕಹಳೆ—ಇವುಗಳ ವರ್ಣನೆಗಳೇ—ಆವಿಷ್ಕಾರಗಳೇ ಕಂಡುಬರುತ್ತವೆ. ಆದರ್ಶ, ಆ ಭಾವಗೀತೆಗಳ, ಆ ಪ್ರಗಾಥಗಳ, ಅಂತಃಶಕ್ತಿಯಾಗಿ ನಿಂತಿದೆ. ಅಕಬರಅಲಿಯವರು ಒಂದೆಡೆ ಹೇಳಿದ ಹಾಗೆ—

ದಕ್ಷಿಣ-ಉತ್ತರ, ದ್ರಾವಿಡ-ಆರ್ಯರ
ಸಂಯೋಗದ ಸೌಗಂಧಶ್ರೀ ;
ಹರಿ ಹರ_ಜಿನರಿಗು, ಅಲ್ಲಾ ದೇವಗು,
ಏಸುಕ್ರಿಸ್ತನಿಗು ಕ್ಷೇತ್ರಶ್ರೀ ;

'ದೇವನೊಬ್ಬ ನಾಮವು ಹಲವೆಂ'ಬುವ
  ಪರಮತ ಸಹಿಷ್ಣು ಭಾವಶ್ರೀ

ಇದು ಕನ್ನಡ ನೆಲ, ಇದು ಕನ್ನಡ ಬಲ,
  ಇದು ಕನ್ನಡ ಕುಲಧರ್ಮಶ್ರೀ

ಕರ್ನಾಟಕದ ಏಕೀಕರಣ ಆದ ಮೇಲೆ, ಆದರ್ಶ ಆದರ್ಶವಾಗಿ, ಕಟ್ಟಿದ ಕನಸು ಕನಸಾಗಿ, ಸ್ವಾರ್ಥ ತೊತ್ತುಳ ತುಳಿಯುತ್ತಿರುವಾಗ ಪುನಃ ಬಾಗಿ ಬಂಡಾಯ ಸಾಹಿತ್ಯ ಮತ್ತು ದಲಿತ ಸಾಹಿತ್ಯಗಳ ಸೃಷ್ಟಿಗೆ ನಾಂದಿಯಾಯಿತು. ಸಿದ್ಧಲಿಂಗಯ್ಯ, ಕಾಳೇಗೌಡನಾಗವಾರ, ಚೆನ್ನಣ್ಣವಾಲಿಕಾರ, ಬರಗೂರ ರಾಮಚಂದ್ರಪ್ಪ, ಚಂದ್ರಶೇಖರಪಾಟೀಲ, ಅರವಿಂದಮಾಲಗಿತ್ತಿ, ಎಂ. ಶ್ರೀನಿವಾಸ, ಅಲ್ಲಮಪ್ರಭು ಬೆಟ್ಟದೂರು, ಲಿಂಗಣ್ಣಸತ್ಯಂಪೇಟೆ, ಮುನಿವೆಂಕಟಪ್ಪ, ಡಿ. ವಿಜಯ ಮುಂತಾಗಿ ಅನೇಕರು ಶೋಷಣೆಯ ವಿರುದ್ಧ ಕಾವ್ಯವನ್ನು ಸೃಜಿಸಿರುವರು. ಇಲ್ಲಿ ಸಿದ್ಧಲಿಂಗಯ್ಯನವರ 'ಕನ್ನಡವ್ವನಿಗೆ' ಎಂಬ ಕವಿತೆಯನ್ನು ನಿದರ್ಶನವಾಗಿ ಕೊಡಬಹುದು :

ಯಂಗೆ ಹೇಳಲಿ ತಾಯಿ
  ನಿನ್ನ ಗೌರ್‍ವ ?

ವಿಜಯನಗರದ ಹೆಬ್ಬಾಗಲಲಿ
  ಇರುವೆ ಸಾಲಲ್ಲಿ ನಿನ್ನ ಬಳಗ

ತಲೆ ಮುಗುಚಿ ಕಯ್ಯೊಡ್ಡಿದ ಲಕ್ಷಲಕ್ಷ ಜನಕೆ
  ಭಿಕ್ಷ ಹಾಕಿದ ಕೃಷ್ಣದೇವರಾಯನೆಂಥ ಮಾನುಭಾವ

ಅಷ್ಟು ತಾಂಡು ಇಷ್ಟು ಕೊಟ್ಟ ಅವನೆಂಥ ಮಹಾದೇವ
  'ಮುತ್ತು ರತ್ನಗಳನು ಬಳ್ಳದಿಂದ ಅಳೆದು ಮಾರಿದ'

ಸೆಟ್ಟಿ ವ್ಯಾಪಾರಿಗಳು ನಿನಗೆ ಬಂಗಾರದಲಿ ಸಿಂಗಾರ ಮಾಡವ್ರೆ
  ನಿನದೆಂಥ ಪುಣ್ಯ ತಾಯೇ

ರಾಜಗುರುಗಳನ್ನು ಯಣಕಿಂತ ಚೆನ್ನಾಗಿ ಹೊರುವೋರು
  ರೆಡಿಯಾಗಿ ನಿಂತ ನಿನ್ನದು ತ್ಯಾಗಿಗಳ ನಾಡು

ದೇವ ಬ್ರಾಹ್ಮಣರಿಗೆ ಅಗ್ರಹಾರದಲಿ ಸರಬತ್ತು ಕೊಟ್ಟ
  ಯಂಥ ಜನಸೇವೆ !

ಸೂಳೆಯರಿಲ್ಲದ ನಾಡೊಂದು ನಾಡೆ ?
ಹದವಾದ ಚರ್ಮವ ಹರಾಜಿಗಿಟ್ಟು ಜನವ ಬದುಕಿಸಿದ.

ಕರ್ನಾಟಕ ರತ್ನಸಿಂಹಾಸನಾಧೀಶ್ವರರ
ಕನಸಿನಲಿ ಕಂಡು ಸಲುಗೆಯ ಮಾತಾಡಿದವಳೆ
ನಿನ್ನ ಕೀರ್ತಿ ಕಡಿಮೆಯೇನೆ ?

ಅರವಿಂದ ಮಾಲಗತ್ತಿ—

ಕರಿನಾಡ ಎಂಬೂದು ಕನ್ನಡಮ್ಮನ ನಾಡ
ಕೊಂಕಿಲ್ಲ ತಾಯನ್ನ ಕೂಡಲಕ। ನನಬಳಗ
ಕೊಂಡಾಳು ಅಗ್ಯಾರು ನಾಡಾಗ.
ಕನ್ನಡಮ್ಮನಿಗೆ ಕಾಯ್ಕೋಲ ನಾನೆತ್ತಿ
ಕಾಲ್ಬಿಡದ ಕೇಳೇಸ। ನನಬಳಗ್ಕ
ಬಾಗಿ ನಡಿಯಾದ ಬಿಡಿಸವ್ವ

—ಎಂದು ಶೋಷಿತರ ಜೀವನಚಿತ್ರವನ್ನು ಮುಂದಿಟ್ಟಿದ್ದಾರೆ.

'ವಿಜಯನಗರ ಗತವೈಭವ ಪುನಃ ಸೃಷ್ಟಿಸುವವರಿಗೆ' ಎಂಬ ಕವನದಲ್ಲಿ ಅಲ್ಲಮಪ್ರಭು ಬೆಟ್ಟದೂರು ಅವರು—

ಗತವೈಭವ, ವೈಭವ, ವೈಭವ
ಎಂಬ ಭಜಾವಳಿಯ ಬಟ್ಟೆ ಬಿಚ್ಚುತ್ತೀರಾ ?
ಏನು ಹಿಂದಿನ ಜಸ್ಮದ ಕಣ್ಣಲ್ಲಿ ಕಟ್ಟಿಕೊಂಡು
ಸಮ್ಮದ ಬದುಕಿಗೆ ಬೆಂಕಿ ಹಚ್ಚುತ್ತೀರಾ ?
ಮಣ್ಣು ತೂರುತ್ತೀರಾ ?

—ಎಂದು ಪ್ರಶ್ನಿಸಿ, ಅನಂತರ—

ವೈಭವ ಸತ್ತ ಹೆಣ :
ಹೆಣ ಸಿದಿಗಿಯಲ್ಲಿಟ್ಟು ಸಿಂಗರಿಸಿ ಜುರುಮುರಿ ಉಗಿ
ದಂದಾಮುಂದಿ ಮಾಡುವ ಬದಲು ಮೊದಲು ನಮಗೆ ಕೊಡಿ
ಆ ಉಗುವ ಅಕ್ಕಿ, ಮಂಡಾಳು_ಎಂದು ಕೇಳಿ
ಇದು ನಮ್ಮ ಹಕ್ಕು ಎಂದೂ ಸರಕಾರಕ್ಕೆ ಹೇಳಿ—

ಎಂದು ಆದೇಶವನ್ನೂ ಇತ್ತಿದ್ದಾರೆ.

ಕಾಳೇಗೌಡ ನಾಗವಾರ ಅವರು 'ಕನ್ನಡಿಗ' ಎಂಬ ಪದ್ಯದಲ್ಲಿ

"ಕನ್ನಡಿಗ, ಕತ್ತೆ, ಬಡವ, ದಲಿತ
ಈ ಯಾವ ಹೆಸರಿಟ್ಟು ಕರೆದರು ಕೂಡ
ಒಳಗಿನ ಹೂರಣದಲ್ಲಿ
ಅಂಥ ಮುಖ್ಯ ವ್ಯತ್ಯಾಸ ಕಾಣುವುದೇ ಇಲ್ಲ"

—ಎಂದು ಕರ್ನಾಟಕದ ಒಂದು ಪೈಲನ್ನು ನಮ್ಮ ಮುಂದೆ ಪ್ರದರ್ಶಿಸಿದ್ದಾರೆ.

ನವೋದಯ, ನವ್ಯ, ಬಂಡಾಯ ಹಾಗೂ ದಲಿತ ಸಾಹಿತ್ಯ ಈ ಎಲ್ಲ ಪ್ರಕಾರಗಳಲ್ಲೂ ಅನೇಕರು ಕರ್ನಾಟಕವನ್ನು ಕುರಿತು ಬರೆದಿದ್ದಾರೆ. ಕವಿಗಳ, ಕವಿತೆಗಳ, ಸಂಖ್ಯೆ ಅಪಾರ–ಗಂಭೀರಗುಂಭರಾಗಿ, ವಿಜೃಂಭಣೆಯನ್ನೂ ವೈಭವವನ್ನೂ ಕುರಿತು ಹಾಡಿದ್ದಾರೆ; ಕಥನಕವನದಲ್ಲಿ ಕತೆಯನ್ನು ಹೇಳಿದ್ದಾರೆ; ಕೀರ್ತನ ಕಟ್ಟಿ ಕನ್ನಡದ ಕೀರ್ತಿಯನ್ನು ಕೀರ್ತಿಸಿದ್ದಾರೆ; 'ದೇವಾನಾಂಪ್ರಿಯ' ಅವರು

ಬೆಂಗಳೂರಿನ ಕಥೆಯ ಕೇಳಿ ಬಲ್ಲೆಯಾ, ಗೆಳೆಯ
ಇದು ನಮ್ಮ ಕನ್ನಡದ ಗಂಡು ಮೆಟ್ಟು!
ಬಸ್ಸು, ಹೋಟಲು, ಜೀವಿ—ಎಲ್ಲೂ ನಮಗಿಂಬಿಲ್ಲ,
ತಮಿಳರಾ ಕೈಯಲಿದೆ ನಮ್ಮ ಜುಟ್ಟು!

—ಎಂದು ಸ್ವಾರಸ್ಯವಾಗಿ ಚುಟುಕಗಳಲ್ಲಿ ಕುಟುಕಿದ್ದಾರೆ; ಅಣಕಗಳಲ್ಲಿ ಮಿಣಕಿದ್ದಾರೆ. ಆ ಎಲ್ಲ ಕವಿತೆಗಳ ಒಂದು ಸಮಗ್ರ ಸಂಕಲನ ಈಗ ಕನ್ನಡ ಜನತೆಗೆ ಇನ್ನೂ ದೊರಕಿಲ್ಲ. ಅಂತಹದೊಂದು ಸಂಗ್ರಹ ಅತ್ಯಗತ್ಯ (It is a desideratum)*. ಜೀಂಪ್ರಿ, ಕುವೆಂಪು ಇವರು ಬರೆದ ಕವಿತೆಗಳೆಲ್ಲವನ್ನೂ ಹೀಗೆಯೇ ಇತರರ ಎಲ್ಲ ಕವಿತೆಗಳನ್ನೂ ಬಳಸಿಕೊಳ್ಳುವದಕ್ಕಾಗಲಿ, ಎಲ್ಲರ ಹೆಸರನ್ನು ಹೇಳುವುದಕ್ಕಾಗಲಿ ಈ ಕಿರುಲೇಖನದಲ್ಲಿ ಆಗಿಲ್ಲ, ಸಾಧ್ಯವಿಲ್ಲ, ಫಸಲೇನೋ ಜೋರಾಗಿದ್ದಿದೆ; ಅದರ ರಾಶಿ ಒಟ್ಟಲಿಕ್ಕೆ ಇಲ್ಲಿ ಜಾಗ ಸಾಲದು. ಸಿ. ಪಿ. ಕೆ. ಅವರ ಪದ್ಯದ ನುಡಿಯೊಂದರಿಂದ ಕವಿಗಳು ಕಂಡ ಕರ್ನಾಟಕದ

* ಎಸ್. ಚೆನ್ನಪ್ಪ ಅವರು ಒಂದು ಸಣ್ಣ ಗ್ರಂಥವನ್ನು "ಕವಿಗಳು ಕಂಡ ಕರ್ನಾಟಕ" ಎಂದು ಸಂಪಾದಿಸಿದ್ದಾರೆ.

ಕಾಣ್ಕೆಯನ್ನು ಹೀಗೆ ಮುಕ್ತಾಯಗೊಳಿಸಬಹುದು:

> ಕಡೆಯ ಪ್ರಾರ್ಥನೆಯುಮ್ ಬೇಡವೆನು ಪಂಪನೊಲು; ಭವಸಹಸ್ರದಲ್ಲಿ
> ನರನಾಗಿ ಮರಿದುಂಬಿಯಾಗಿ, ಕೋಗಿಲೆಯಾಗಿ ಬರಲು ಕರ್ನಾಟಕದಲಿ !
> ಕನ್ನಡದ ನೆಲವಿರಲಿ ಜಲವಿರಲಿ ಚೆಲುವಿರಲಿ, ಕನ್ನಡದ ಗಾಳಿಯಿರಲಿ—
> ಅನ್ಯವನು ಕಾಮಿಸೆನು, ಆಶೀರ್ವದಿಸು ತಾಯೆ, ಕನ್ನಡದ ಭುವನೇಶ್ವರಿ !**

** ಈ ಲೇಖನವನ್ನು ಬರೆಯುವಲ್ಲಿ ಬಂಡಾಯ ಹಾಗೂ ದಲಿತ ಸಾಹಿತ್ಯದ ತಮ್ಮ ಭಂಡಾರವನ್ನು ಬಳಸಿಕೊಳ್ಳಲು ಸಹಾಯ ಮಾಡಿದ ಶ್ರೀ ದೇವಯ್ಯ ಹರವೆ ಅವರಿಗೆ ನಾನು ಋಣಿ.



ಅದೃಷ್ಟ

ಅಲ್ಪರು ಅದೃಷ್ಟ ಎನ್ನುತ್ತಾರೆ. ಬುದ್ಧಿಶಾಲಿಗಳು ಕಾರ್ಯ ಕಾರಣಗಳನ್ನು ನಂಬುತ್ತಾರೆ.

—ಬಿ. ಎಂ. ಶ್ರೀಕಂಠಯ್ಯ

ವಿವೇಕಕ್ಕಿಂತ ಅದೃಷ್ಟವೇ ಮನುಷ್ಯನನ್ನು ಆಳುತ್ತದೆ.

—ಸಿಸಿರೋ

ಅದೃಷ್ಟ ಎಂಬುದು ಒಂದು ಸಂತೆಯಂತೆ. ಸ್ವಲ್ಪ ಹೊತ್ತಿನಲ್ಲಿ ಅದರ ಬೆಲೆ ಬಿದ್ದು ಹೋಗಬಹುದು.

—ಬೇಕನ್

ಕರ್ನಾಟಕದ ಏಕೀಕರಣದ ಕಥೆ

—ಗೊರೂರು ರಾಮಸ್ವಾಮಿಅಯ್ಯಂಗಾರ್

ವಿಸ್ತಾರವಾದ ಭರತಖಂಡದ ಅನೇಕ ಪ್ರಾಂತಗಳ ಪೈಕಿ ಕರ್ನಾಟಕವು ಒಂದು ಪ್ರಮುಖ ರಾಜ್ಯ. ಇದು ವಿಸ್ತೀರ್ಣದಲ್ಲಿ ಏಳನೆಯ ಮತ್ತು ಜನಸಂಖ್ಯೆಯಲ್ಲಿ ಎಂಟನೆಯ ಸ್ಥಾನವನ್ನು ಪಡೆದಿದ್ದರೂ ಚಾರಿತ್ರಿಕವಾಗಿ ಕಲೆ ಸಾಹಿತ್ಯ ಧರ್ಮ ಪ್ರಕೃತಿ ಸಂಪತ್ತು ಈ ಎಲ್ಲ ದೃಷ್ಟಿಗಳಿಂದ ಭರತಮಾತೆಯ ಕಿರೀಟದಲ್ಲಿ ಉಜ್ವಲಸ್ಥಾನವನ್ನು ಪಡೆದಿದೆ. ಪ್ರಪಂಚದಲ್ಲಿ ಯಾವ ರಾಷ್ಟ್ರವಾದರೂ ಹೆಮ್ಮೆ ಪಡಬಹುದಾದಂಥ ರಾಜ್ಯ ಕರ್ನಾಟಕ. ಈ ರಾಜ್ಯ ವಿಸ್ತಾರವಾದ ಅರಣ್ಯ ಪ್ರದೇಶ, ಪೂರ್ವ ಪಶ್ಚಿಮ ಘಟ್ಟಗಳು, ತಕ್ಕ ಮಟ್ಟಿನ ಸಮುದ್ರ ತೀರ, ಬಂದರುಗಳು, ಕೃಷ್ಣ ಕಾವೇರಿ ಸಹಿತವಾದ ಮುಪ್ಪತ್ತಕ್ಕಿಂತ ಹೆಚ್ಚು ನದಿಗಳು, ಬಹುಮಟ್ಟಿಗೆ ಸಮಶೀತೋಷ್ಣವಾಗಿ ಸುಖವಾಗಿ ಹಿತವಾಗಿರುವ ಹವಾಮಾನ, ಪ್ರಕೃತಿಯ ಕೋಪಸೂಚಕವಾದ ಅತಿವೃಷ್ಟಿ ಸರ್ಪಗ್ರಾಹಿ ಪ್ರವಾಹ ಭೂಕಂಪಗಳು ಇಲ್ಲದಿರುವಿಕೆ, ಉತ್ತಮ ಸಂಸ್ಕೃತಿಯುಳ್ಳವರೂ ಉದಾರಿಗಳೂ ಪರರಿಗೆ ಆಶ್ರಯದಾತರೂ ಆದ ಜನರಿಂದ ಕರ್ನಾಟಕ ಸರ್ವಾದರಣೀಯ ಪ್ರಾಂತವಾಗಿದೆ. ಇಲ್ಲಿ ಭಾಷೆ ಅಥವಾ ಧರ್ಮದ ಮತ್ತು ಮತದ ಹೆಸರಿನಲ್ಲಿ ಹೋರಾಟವಾದುದೇ ಇಲ್ಲ. ಎಲ್ಲ ದೇವರೂ ಒಂದೇ ಎಂಬ ಸಂದೇಶದ "ಯಂ ಶೈವಾಸ್ಸಮುಪಾಸತೆ" ಎಂಬ ಶ್ಲೋಕ ಹುಟ್ಟಿದುದು ಈ ಕರ್ನಾಟಕ ದೇಶದಲ್ಲಿಯೇ.

ಭರತಖಂಡದ ಪ್ರಾಂತಗಳಲ್ಲಿ ಕರ್ನಾಟಕವು ಸಾವಿರಾರು ವರುಷಗಳ ಚಾರಿತ್ರ್ಯಿಕ ದಾಖಲೆಯುಳ್ಳ ಪ್ರಾಂತ. ಕ್ರಿಸ್ತಪೂರ್ವದಲ್ಲಿಯೇ ಕರ್ನಾಟಕದ ಇತಿಹಾಸದ ನೆಲೆಗಳು ನಮಗೆ ದೊರೆಯುತ್ತವೆ. ಬೌದ್ಧ ಧರ್ಮವು ಕ್ರಿ. ಪೂ. ಮುನ್ನೂರರಲ್ಲಿಯೇ ಕರ್ನಾಟಕಕ್ಕೆ ಬಂದಿತು. ಅಶೋಕನ ಶಾಸನಗಳು ಚಿತ್ರದುರ್ಗದ ಜಿಲ್ಲೆ ಮುಂತಾದ ಕಡೆ ದೊರಕಿವೆ. ಭದ್ರಬಾಹು ಚಂದ್ರಗುಪ್ತರು ಶ್ರವಣಬೆಳಗೊಳಕ್ಕೆ ಬಂದಿದ್ದರು. ಭಾರತದ ಆಧುನಿಕ ಚರಿತ್ರೆಗೆ ದಾಖಲೆ ದೊರೆಯುವುದೇ ಅಲೆಕ್ಸಾಂಡರನ ಕಾಲದಿಂದ ಕ್ರಿ.ಶ. ಎರಡನೆಯ ಶತಮಾನದಲ್ಲಿ ಭಾರತಕ್ಕೂ—ಕನ್ನಡನಾಡಿಗೂ ಸಂಪರ್ಕವಿದ್ದಿತೆಂದು ಗೋವಿಂದ ಪೈಗಳು ಸಾಧಿಸಿದ್ದಾರೆ. ಡಾ॥ ಎಂ. ಎಚ್. ಕೃಷ್ಣರು ಚಂದ್ರವಳ್ಳಿಯ ಶೋಧನೆಯಿಂದ

ಕರ್ನಾಟಕ ಸಂಸ್ಕೃತಿ ಕ್ರಿ. ಶ. ನಾಲ್ಕು ನೂರರಲ್ಲಿಯೇ ಅಲ್ಲಿ ಸ್ಥಾಪನೆಯಾಗಿ, ಕರ್ನಾಟಕರು ಚೀನ ರೋಮ್ ಬರ್ಮ ಗಾಂಧಾರ ಮೊದಲಾದ ರಾಷ್ಟ್ರಗಳೊಡನೆ ಕಬ್ಬಿಣ, ರೇಷ್ಮೆಯ ಬಟ್ಟೆಗಳು, ಮಣಿಗಳು, ಗಾಜಿನ ಬಳೆಗಳನ್ನು ವ್ಯಾಪಾರ ಮಾಡುತ್ತಿದ್ದರೆಂದೂ ಕುಶಲ ವಿದ್ಯೆಗಳಲ್ಲಿ ಪ್ರವೀಣರಾಗಿದ್ದರೆಂದೂ ಹೇಳುತ್ತಾರೆ. ರಾಮಾಯಣ ಮತ್ತು ಮಹಾಭಾರತಗಳಲ್ಲಿ ಕರ್ನಾಟಕದ ಉಲ್ಲೇಖವಿದೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಸಹ ಕನ್ನಡದ ಉಲ್ಲೇಖವಿದೆಯೆಂದು ಕೆಲವು ವಿದ್ವಾಂಸರು ಸಿದ್ಧಮಾಡಿದ್ದಾರೆ.

ಸುಮಾರು ಎರಡು ಸಾವಿರ ವರ್ಷಗಳ ಹಿಂದೆಯೇ ಕನ್ನಡಿಗರು ಸಮಾಜ ಜೀವನವನ್ನು ನಡೆಸುತ್ತ ನಾಗರಿಕರಾಗಿ ರಾಜ್ಯಗಳನ್ನು ಕಟ್ಟಿ ಆಳಿದರು. ಸಾತವಾಹನರು, ಕದಂಬರು ಗಂಗರು ಬಾದಾಮಿ ಚಾಳುಕ್ಯರು ರಾಷ್ಟ್ರಕೂಟರು ಕಳಚುರ್ಯರು ಹೀಗೆ ಹತ್ತು ಹನ್ನೊಂದನೆ ಶತಮಾನದವರೆಗೆ ಕನ್ನಡಿಗರು ದಕ್ಷಿಣ ಭಾರತದಲ್ಲಿ ಪ್ರಬಲ ಚಕ್ರಾಧಿಪತ್ಯಗಳನ್ನು ಸ್ಥಾಪಿಸಿ ಆಳಿದರು. ಚಾಲುಕ್ಯ ಪುಲಕೇಶಿ ಕನೂಜಿನ ಹರ್ಷವರ್ಧನನ್ನೇ ಸೋಲಿಸಿದನು. ಈ ಯುದ್ಧದಲ್ಲಿ ಪುಲಕೇಶಿಯು ಅರವತ್ತು ಸಾವಿರ ಆನೆಗಳನ್ನು ರಣರಂಗಕ್ಕೆ ಒಯ್ದನೆಂದು ಒಂದು ಉಲ್ಲೇಖವಿದೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ ಪಟ್ಟದಕಲ್ಲು ಐಹೊಳೆ ಮುಂತಾದ ಕಲಾ ಶಿಖರಗಳೂ ರಾಷ್ಟ್ರಕೂಟರ ಕಾಲದಲ್ಲಿ ಎಲ್ಲೋರ ಅಜಂತ ಮುಂತಾದ ಜಗತ್‌ಪ್ರಸಿದ್ಧ ಕಲಾಕೃತಿಗಳೂ ಸೃಷ್ಟಿಯಾದವು. ಎಲ್ಲೋರದ ಕೈಲಾಸ ದೇವಾಲಯವನ್ನು ಕುರಿತು ಪರ್ಸಿಬ್ರೌನ್ ಫರ್ಗುಸನ್‌ರು ಅದರ ಸೌಂದರ್ಯ ವೈಶಿಷ್ಟ್ಯ ಸಮಕಾಲದಲ್ಲಿಯೂ ಪ್ರವಾಸಿಗರಲ್ಲಿ ಆಶ್ಚರ್ಯವನ್ನುಂಟುಮಾಡುತ್ತದೆ ಎಂದಿದ್ದಾರೆ. ಕರ್ನಾಟಕದ ಮುಂದಿನ ಎರಡು ಪ್ರಬಲ ಚಕ್ರಾಧಿಪತ್ಯಗಳೆಂದರೆ ಹೊಯ್ಸಳ ಸಾಮ್ರಾಜ್ಯ ಮತ್ತು ವಿಜಯನಗರ ಚಕ್ರಾಧಿಪತ್ಯ. ಹೊಯ್ಸಳರ ಸುಮಾರು ನಾಲ್ಕು ಶತಮಾನಗಳ ಆಳ್ವಿಕೆಯಲ್ಲಿ ಕರ್ನಾಟಕದ ಪ್ರಖ್ಯಾತಿ ಗಗನಕ್ಕೇರಿತಲ್ಲದೆ ದಕ್ಷಿಣಭಾರತದಲ್ಲಿ ರಾಜಕೀಯವಾಗಿ ಹೊಯ್ಸಳರು ಬಹಳ ಪ್ರಮುಖ ಸ್ಥಾನವನ್ನು ಆಕ್ರಮಿಸಿ ಚೋಳ ಪಾಂಡ್ಯ ಚೇರ ಮುಂತಾದವರ ಮೇಲೆ ಪ್ರಭಾವವನ್ನು ಬೀರಿದರು. ತಮಿಳುನಾಡಿಗೆ ದಂಡೆತ್ತಿ ಹೋಗಿ ಅಲ್ಲಿ ಕೆಲವು ಭಾಗವನ್ನು ಆಳಿದರು. ಹೊಯ್ಸಳರ

ಮಾದರಿಯ ದೇವಾಲಯಗಳು (ಜಕಣಾಚಾರಿ) ಕರ್ನಾಟಕದಲ್ಲೆಲ್ಲ ನೂರಾರು ಅದುವಲ್ಲದೆ ಆ ಶಿಲ್ಪದ ಮಾದರಿ ಭಾರತದಲ್ಲಿಯೂ ಇತರ ರಾಷ್ಟ್ರಗಳ ಮೇಲೆಯೂ ಪ್ರಭಾವವನ್ನು ಬೀರಿತು. ಜಗತ್ ಪ್ರಸಿದ್ಧವಾದ ಬೇಲೂರು ಹಳೇಬೀಡು ದೇವಾಲಯಗಳು ನಿರ್ಮಿತವಾದವು.

ಮುಂದಿನ ಮೂರು ಶತಮಾನಗಳು, ಜಗತ್ತನ್ನೇ ಬೆರಗುಗೊಳಿಸಿದ ವಿಜಯನಗರ ಸಾಮ್ರಾಜ್ಯದ ಎಂದೆಂದಿಗೂ ಮರೆಯದ ವೈಭವದ ಶಿಖರ. ಕೆಲವು ಕಾಲ ಬಹಮನಿಷಾಹಿಗಳೂ ಆದಿಲ್‌ಶಾಹಿಗಳೂ ಕರ್ನಾಟಕದ ಕೆಲವು ಭಾಗ, ಮಹಾರಾಷ್ಟ್ರದ ಕೆಲವು ಭಾಗ, ಆಂಧ್ರದ ಕೆಲವು ಭಾಗಗಳಲ್ಲಿ ಆಳ್ವಿಕೆ ಮಾಡಿದರು. ಅವರಿಂದ ಇಸ್ಲಾಂ ಸಂಸ್ಕೃತಿ ಮತ್ತು ಕರ್ನಾಟಕದ ಕಲೆ ಸಂಗೀತಗಳಿಗೆ ಪ್ರೋತ್ಸಾಹ ದೊರೆಯಿತು. ವಿಜಯನಗರದ ಪತನಾನಂತರ ಮೈಸೂರಿನಲ್ಲಿ ಹೈದರ್‌ಆಲಿ ಮತ್ತು ಟೀಪುರವರ ಆಳ್ವಿಕೆ ನಡೆದು ೧೭೯೯ರಲ್ಲಿ ಟಿಪ್ಪು ಯುದ್ಧ ಭೂಮಿಯಲ್ಲಿ ಮಡಿದನು. ಬ್ರಿಟಿಷರನ್ನು ಎದುರಿಸಿ ಸ್ವಾತಂತ್ರ್ಯಕ್ಕಾಗಿ ಹೋರಾಡುವುದರಲ್ಲಿ ಅವರಿಬ್ಬರ ಪಾತ್ರವೂ ಹಿರಿದಾಗಿತ್ತು. ಟೀಪುವನ್ನು ಸೋಲಿಸಿದ ಆಂಗ್ಲೆಯರು ೧೭೯೯ರಲ್ಲಿ ಮೈಸೂರು ರಾಜ್ಯವನ್ನು ಕೃಷ್ಣರಾಜ ಒಡೆಯರಿಗೆ (ಆಗ ಆ ಬಾಲಕನಿಗೆ ವಯಸ್ಸು ಐದು) ಕೊಟ್ಟರು. ಒಂದು ಕಾಲದಲ್ಲಿ ಬೊಂಬಾಯಿನವರೆಗೆ – ಬಂಗಾಳದವರೆಗೆ ಸಹ ಪಸರಿಸಿದ್ದ ಕರ್ನಾಟಕ ಸಾಮ್ರಾಜ್ಯ, ಕುಗ್ಗಿ ಇತರರಿಗೆ ಹಂಚಿಹೋಗಿ ಹೆಸರಿಗೆ ಕನ್ನಡ ರಾಜ್ಯವಾಗಿ ಮೈಸೂರರಸರಿಗೆ ದಕ್ಕಿತು.

ಒಂಬತ್ತನೆಯ ಶತಮಾನದಲ್ಲಿ ಕವಿರಾಜಮಾರ್ಗವೆಂಬ ಗ್ರಂಥವನ್ನು ಬರೆದ ನೃಪತುಂಗನು ಕನ್ನಡನಾಡು ಕಾವೇರಿಯಿಂದ ಗೋದಾವರಿವರೆಗೆ ಇದ್ದಿತೆಂದು ಹೇಳುತ್ತಾನೆ. ಅಂದರೆ ಪಶ್ಚಿಮದಲ್ಲಿ ಅರಬ್ಬೀ ಸಮುದ್ರದವರೆಗೆ ಮತ್ತು ಈಗಿನ ಮಹಾರಾಷ್ಟ್ರದ ಪೂರ್ವಕ್ಕೆ ಗೋದಾವರಿವರೆಗೆ ಕನ್ನಡನಾಡು ಇದ್ದಿರಬಹುದೆಂದು ಕೊಂಕಣದಲ್ಲಿ ಬರೆದಿರುವ ಶಿಲಾಲಿಪಿಯ ಆಧಾರದಿಂದ ಊಹಿಸಬಹುದಾಗಿದೆ. ಚಾಲುಕ್ಯರ ಕಾಲದಲ್ಲಿ ಬಂಗಾಳದವರೆಗೆ ಹಬ್ಬಿದ್ದಿತೆಂದೂ ಸೇನ್ (ನಯಸೇನ) ಎಂಬ ಬಂಗಾಳದ ಇಂದಿನ ಮನೆತನಗಳು

ಕರ್ನಾಟಕದಿಂದ ಹೋಗಿ ನೆಲೆಸಿರಬಹುದೆಂದೂ ಕೆಲವು ಸಂಶೋಧಕರು ತರ್ಕಿಸು ತ್ತಾರೆ.

ಕಾವೇರಿಯಿಂದ ಮಾ ಗೋದಾವರಿವರೆಗೆ ವಿಶಾಲವಾದ ಕರ್ನಾಟಕವನ್ನು ಬ್ರಿಟಿಷರು ಟೀಪುವಿನ ಪತನದ ನಂತರ ಚೂರುಚೂರು ಮಾಡಿಬಿಟ್ಟರು. ಟಿಪ್ಪು ವನ್ನು ಸೋಲಿಸಲು ಬ್ರಿಟೀಷರು ಮರಾಠರ ಮತ್ತು ಹೈದರಾಬಾದ್ ನಿಜಾಂರ ಸಹಾಯವನ್ನು ಪಡೆದಿದ್ದರು. ಯುದ್ಧದಲ್ಲಿ ಗೆದ್ದನಂತರ, ಬ್ರಿಟಿಷರು ಮರಾಠ ರಿಗೂ ಹೈದರಾಬಾದ್ ನಿಜಾಮರಿಗೂ ಅವರ ಸಹಾಯಕ್ಕಾಗಿ ಕರ್ನಾಟಕದ ಭಾಗಗಳನ್ನು ಹಂಚಿಕೊಟ್ಟರು. ಕರ್ನಾಟಕದ ಇಡಿ ದೇಹ-ಒಂದೂವರೆ ಸಾವಿರ ವರುಷಗಳಿಗಿಂತಲೂ ಹೆಚ್ಚು ಕಾಲ–ಒಟ್ಟಾಗಿದ್ದುದನ್ನು ತುಂಡರಿಸಿ ಮದರಾಸು ಬೊಂಬಾಯಿ (ಆಗಿನ ಮಹಾರಾಷ್ಟ್ರ) ಕೊಡಗು, ಹೈದರಾಬಾದ್ ಮತ್ತು ಮೈಸೂರುಗಳಿಗೆ ಹಂಚಿಬಿಟ್ಟರು. ಇದಿಷ್ಟೇ ಸಾಲದು ಎಂಬಂತೆ ಹದಿನಾಲ್ಕು ಹದಿನೈದು ಸಣ್ಣ ಪುಟ್ಟ ರಾಜ್ಯಗಳು ಜಹಗೀರುಗಳಲ್ಲಿ ಕನ್ನಡದ ಭಾಗಗಳು ಸೇರಿ ಹೋಗಿ ಒಂದು ಕಾಲಕ್ಕೆ ಕನ್ನಡ ನಾಡು ಇಪ್ಪತ್ತೆರಡು ಆಳ್ವಿಕೆಗೆ ಒಳಗಾಯಿತು. ಹಳೆ ಮೈಸೂರಿನ ಎಂಟು ಜಿಲ್ಲೆಗಳು ಮಾತ್ರ ಮೈಸೂರು ಪ್ರಾಂತಕ್ಕೆ ಸೇರಿ ಮೈಸೂರು ರಾಜರು ಕರ್ನಾಟಕದ ರತ್ನ ಸಿಂಹಾಸನಾಧೀಶ್ವರರು ಎಂಬ ಬಿರುದನ್ನು ಹೊಂದಿ ಮೈಸೂರಿನಲ್ಲಿ ಆಳ್ವಿಕೆ ಮಾಡತೊಡಗಿದರು. ಕರ್ನಾಟಕದ ಒಗ್ಗಟ್ಟು ಒಮ್ಮತಿಕತೆಯೇ ಮುರಿದುಹೋಯಿತು. ಇಪ್ಪತ್ತೆರಡು ಬೇರೆ ಬೇರೆ ಆಳ್ವಿಕೆಗೆ ಸೇರಿದುದರಿಂದ ಕನ್ನಡಿಗರು ಒಟ್ಟಾಗಿ ಸೇರುವುದೇ ಅಪರೂಪವಾಯಿತು. ಅಣ್ಣತಮ್ಮಂದಿರು ಪೂರ್ಣವಾಗಿ ಬೇರೆ ಬೇರೆಯಾಗಿ ಅಪರಿಚಿತರೇ ಆದರು. ಒಬ್ಬರಿಗೊಬ್ಬರಿಗೆ ಪರಿಚಯವಾಗುತ್ತಿದ್ದುದು ಭಾಷೆಯ ಮಾಧ್ಯಮದಿಂದ ಮಾತ್ರ–ಎಲ್ಲರೂ ಕನ್ನಡವನ್ನೇ ಮಾತನಾಡಿ ಬರೆಯುತ್ತಿದ್ದುದರಿಂದ—

ಕನ್ನಡಿಗರು ಮುಖ್ಯವಾಗಿ ಐದು ಭಾಗವಲ್ಲಿ ಹಂಚಿಹೋದುದರಿಂದ– ಬೊಂಬಾಯಿ ಮದರಾಸು ಹೈದರಾಬಾದುಗಳಲ್ಲಿ–ಅವರು ಅಲ್ಪಸಂಖ್ಯಾತರೂ ಎರಡನೆಯ ದರ್ಜೆಯ ಪ್ರಜೆಗಳೂ ಆದರು. ಆಡಳಿತದಲ್ಲಿ ಅವರಿಗೆ ಪ್ರಾಧಾನ್ಯ ಸಿಕ್ಕಲಿಲ್ಲ. ಅವರನ್ನು ಸೇರಿಸಿದ ಪ್ರಾಂತಗಳಾದ ಮದರಾಸು ಬೊಂಬಾಯಿಗಳಲ್ಲಿ

ಮರಾಠಿ ಗುಜರಾತಿ ಹಿಂದಿ ಸಹ ತೆಲುಗು ಮಲೆಯಾಳಂ ತಮಿಳು ಇವುಗಳ ಪ್ರಾಬಲ್ಯ ಮತ್ತು ಪ್ರಾಧಾನ್ಯತೆ ಹೆಚ್ಚಾಗಿದ್ದವು. ಬೊಂಬಾಯಿಯಲ್ಲಿಯಂತೂ ಮರಾಠಿ ಗುಜರಾತಿ ಹಿಂದಿ ಇವುಗಳ ಅವಾಂತರ. ಇಂಗ್ಲಿಷ್ ಭಾಷೆಗೆ ಆಡಳಿತ ದಲ್ಲಿ ಪ್ರಮುಖಸ್ಥಾನವಿದ್ದುದ್ದಲ್ಲದೆ ಆಯಾ ಪ್ರಾಂತ ಭಾಷೆಗಳ ಪ್ರಾಬಲ್ಯ ದಲ್ಲಿ ಕನ್ನಡವನ್ನು ಕೇಳುವವರೇ ಇರಲಿಲ್ಲ. ಕನ್ನಡ ಶಾಲೆಗಳಿಗೇ ಅಸ್ತಿತ್ವವಿರಲಿಲ್ಲ. ಆಡಳಿತ ಭಾಷೆ ಇಂಗ್ಲಿಷ್, ವ್ಯವಹಾರ ಭಾಷೆ ತಮಿಳು ಹಿಂದಿ ಮರಾಠಿ ಮುಂತಾದ ದೇಶಭಾಷೆ. ಹೀಗಾಗಿ ಅಲ್ಲಿಯ ಕನ್ನಡಿಗರಿಗೆ ಕನ್ನಡ ಬರಿಯ ಅಡಿಗೆ ಮನೆಯ ಭಾಷೆ ಮಾತ್ರವಾಯಿತು. ಅಧಿಕಾರ ಸ್ಥಾನದಲ್ಲಿ ಸಮಾಜ ಪ್ರತಿಷ್ಠೆಯಲ್ಲಿ ಬಹುಸಂಖ್ಯಾತರಾದ ಇತರ ಭಾಷೆಗಳವರ ಪ್ರತಾಪವೇ ಹೆಚ್ಚಾಗಿತ್ತು. ಜೊತೆಗೆ ಆ ಬಹುಸಂಖ್ಯಾತರ ಜೊತೆಗೆ ಕನ್ನಡಿಗರನ್ನು ಕರ್ನಾಟಕದಿಂದ ಕಿತ್ತುಹಾಕಿದ್ದುದರಿಂದ, ಇವರು ತೀರ ಗಡಿಗಳಲ್ಲಿ ಇದ್ದವರಾದರು. ರಾಜಧಾನಿಗೆ ಇವರ ಕೂಗು ಮುಟ್ಟುವುದಾಗಲೀ ಇವರ ಪ್ರದೇಶಗಳಿಗೆ ಆಡಳಿತ ರಸ್ತೆ ನೀರಾವರಿ ಶಿಕ್ಷಣ ಸೌಲಭ್ಯ ವೈದ್ಯಕೀಯ ಸೌಲಭ್ಯ ಸಾಧ್ಯವಿರಲಿಲ್ಲ. ಇವರು ಧನಿಕರ ಮನೆಯ ಬಡಬಂಧುವಿನಂತೆ ತಳ್ಳಿದಕಡೆಗೆ ಬಿದ್ದುಕೊಂಡು– ಸಂಘಟಿತರಾಗಲೂ ನಿಶ್ಶಕ್ತರಾಗಿದ್ದರು. ಮೈಸೂರಿನಲ್ಲಿ ಹೊರತು ಉಳಿದ ಎಲ್ಲೆಡೆಯೂ ಕನ್ನಡಿಗರು ಅಲ್ಪಸಂಖ್ಯಾತರೇ ಆಗಿದ್ದರು. ಹೈದರಾಬಾದ್ ಕನ್ನಡಿಗರು–ಆಡಳಿತ ಭಾಷೆ ಮತ್ತು ಶಿಕ್ಷಣ ಭಾಷೆ ಉರ್ದು ಆಗಿದ್ದುದರಿಂದ ಉಸಿರು ಕಟ್ಟಿಹೋಗಿದ್ದರು. ಕೊಡಗಿನ ಕನ್ನಡಿಗರು ಕೊಡಗರಾದರೂ ಕೊಡಗು ಆಂಗ್ಲೇಯರ ಪೃಥಕ್ ವಸಾಹತಿನಂತೆ ಇದ್ದು ಅಲ್ಲಿಯ ತಂಪು ಹವೆ, ಮನೋಹರ ವಾದ ಪ್ರಕೃತಿ (ಭಾರತದ ಸ್ವಿಟ್ಜರ್‌ಲ್ಯಾಂಡ್) ಆಂಗ್ಲೇಯರನ್ನು ಆಕರ್ಷಿಸಿತು. ಕೊಡಗಿನ ವೀರಯೋಧರು ಪರಾಕ್ರಮಪೂರಿತರಾದರೂ ತಮ್ಮತನವನ್ನು ಸ್ಥಾಪಿ ಸಲು ಅಸಮರ್ಥರಾಗಿ ಆಂಗ್ಲೇಯರ ಅನುಕರಣಪಟುಗಳಾದರು. ಇನ್ನು ಇತರ ಹತ್ತು ಹದಿನಾಲ್ಕು ಸಣ್ಣಪುಟ್ಟ ರಾಜ್ಯಗಳಲ್ಲಿ (ಜಹಗೀರ್) ಮರಾಠಿ ಪ್ರಾಬಲ್ಯ ವಿದ್ದುದರಿಂದ ಕನ್ನಡಿಗರ ಯೋಗಕ್ಷೇಮ, ಯಾರ ಹೊಣೆಯೂ ಆಗಿರಲಿಲ್ಲ. ಬೆಂಗಳೂರಿನಿಂದ ಪುಣೆಗೆ ಹೊರಟ ರೈಲು, ದಾರಿಯಲ್ಲಿ ಹತ್ತು ಆಡಳಿತಗಳ ಮೂಲಕ ಹೋಗಬೇಕಾಗಿದ್ದಿತೆಂಬುವನ್ನು ಗಮನಿಸಿದರೆ, ಕನ್ನಡಿಗರು ಹೇಗೆ ಚೆಲ್ಲಾಪಿಲ್ಲಿಯಾಗಿದ್ದರು ಎಂಬುದರ ಅರಿವುಂಟಾಗುತ್ತದೆ.

ಇವನ್ನೆಲ್ಲ ಗಮನಿಸಿ ರಾಜಕೀಯವಾಗಿ ಸಾಧ್ಯವಿಲ್ಲವಾದರೂ-ಸಾಂಸ್ಕೃತಿಕವಾಗಿಯಾದರೂ ಕನ್ನಡಿಗರನ್ನೆಲ್ಲ ಒಂದೆಡೆ ಸೇರಿಸುವ ಉದ್ದೇಶದಿಂದ ಅರವತ್ತು ವರುಷಗಳಿಗೂ ಹಿಂದೆಯೇ ಅಂದಿನ ಹಿರಿಯರು ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು. ಕನ್ನಡನಾಡನ್ನೂ ಕನ್ನಡ ಜನತೆಯನ್ನೂ ಭಾಷೆಯ ಮೂಲಕ ಹೆಚ್ಚು ನಿಕಟವಾಗಿ ಬಂಧಿಸುವುದು ಪರಿಷತ್ತಿನ ಮುಖ್ಯ ಗುರಿಯಾಗಿತ್ತು. ಈ ಇಪ್ಪತ್ತೆರಡು ಆಳ್ವಿಕೆಗಳಲ್ಲಿ, ಅನಾಥರಾಗಿ ತೊಳಲಾಡುತ್ತಿರುವ ಕನ್ನಡಿಗರನ್ನೆಲ್ಲ ಉಳಿದ ಚಟುವಟಿಕೆಗಳ ಜೊತೆಯಲ್ಲಿ-ವರುಷಕ್ಕೊಮ್ಮೆಯಾದರೂ ಒಂದೆಡೆ ಸೇರಿಸಿ, ಒಬ್ಬರನ್ನೊಬ್ಬರು ನೋಡಿ ಸಂಪರ್ಕ ಹೊಂದಿ ಕನ್ನಡಿಗರು ಒಬ್ಬರನ್ನೊಬ್ಬರು ಅರಿಯಬೇಕೆಂದು ವಾರ್ಷಿಕ ಸಮ್ಮೇಳನಗಳೂ ಏರ್ಪಾಡಾದವು. ಪ್ರತಿ ಸಮ್ಮೇಳನದಲ್ಲಿಯೂ ಕನ್ನಡನಾಡನ್ನೆಲ್ಲ ಒಂದುಗೂಡಿಸಿ ಒಂದು ಆಳ್ವಿಕೆಯಲ್ಲಿ ತರುವ-ಏಕತಂತ್ರ-ನಿರ್ಣಯಗಳು ತಪ್ಪದೆ ಆಗುತ್ತಿದ್ದವು. ಏಕೀಕರಣದ ಆವಶ್ಯಕತೆ ಎಲ್ಲ ಕನ್ನಡಿಗರಿಗೂ ಮನದಟ್ಟಾಗಿದ್ದಿತು. ಪತ್ರಿಕೆಗಳೂ ಲೇಖಕರೂ ವ್ಯಕ್ತಿಗಳೂ ಏಕೀಕರಣಕ್ಕಾಗಿ ತಮ್ಮಿಂದಾದ ಪ್ರಯತ್ನಗಳನ್ನೆಲ್ಲ ಮಾಡುತ್ತಿದ್ದರು. ಆದರೆ ಇದರ ನಿರ್ಣಯವನ್ನು ಮಾಡಬೇಕಾದವರು ಕೇಂದ್ರ ಸರ್ಕಾರದವರಾದುದರಿಂದ, ನಮ್ಮವರ ಪ್ರಯತ್ನವೆಲ್ಲ ಬರಿ ಕಾಗದದ ನಿರ್ಣಯ ಮತ್ತು ಅರಣ್ಯರೋದನವೇ ಆಯಿತು.

೧೯೧೮–೧೯ ರಲ್ಲಿ ರೌಲೆಟ್ ಕಾನೂನು ವಿರೋಧ, ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡಗಳಿಂದ ಭಾರತೀಯರ ಸ್ವಾತಂತ್ರ್ಯಪ್ರೇಮ ಅಸಹಕಾರ ಚಳುವಳಿಯೊಂದಿಗೆ ದೇಶವನ್ನೆಲ್ಲ ಕಿಚ್ಚಿನಂತೆ ಮುತ್ತಿತು. ಅಹಿಂಸಾತ್ಮಕ ಸತ್ಯಾಗ್ರಹ ಅಸ್ತ್ರದೊಂದಿಗೆ ಗಾಂಧೀಜಿ ಕಾಂಗ್ರೆಸ್ಸಿನ ನೇತೃತ್ವವನ್ನು ವಹಿಸಿಕೊಂಡರು. ದೇಶದ ಮೂಲೆ ಮೂಲೆಯಲ್ಲಿ ಚಳುವಳಿ ಎದ್ದಿತು. ಕರ್ನಾಟಕವು ಎಂದಿನಿಂದಲೂ ಗಾಂಧೀಪ್ರಾಂತವೆಂದು ಹೆಸರು ಗಳಿಸಿತ್ತು. ಸ್ವಾತಂತ್ರ್ಯ ಹೋರಾಟದಲ್ಲಿಯೂ ಕರ್ನಾಟಕ ಮುಂದಾಗಿತ್ತು. ಎಲ್ಲೆಡೆಯೂ ಕಾನೂನು ಭಂಗ ಅಹಿಂಸಾ ಆಂದೋಲನ. ಕರ್ನಾಟಕದವರು ಸ್ವರಾಜ್ಯ ಹೋರಾಟದೊಂದಿಗೆ ಕರ್ನಾಟಕ ಏಕೀಕರಣವನ್ನೂ ಗುರಿಯಾಗಿ ಮಾಡಿಕೊಂಡರು. ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರೆಲ್ಲ ಏಕೀಕರಣದ ಕೆಲಸಗಾರರೂ ಆದರು.

ವಿಕೇಂದ್ರೀಕೃತ ಆಳ್ವಿಕೆಗೆ ಪ್ರಾಧಾನ್ಯವಿತ್ತ ಸ್ವರಾಜ್ಯ ಪ್ರಣಾಳಿಕೆಯಲ್ಲಿ ಪ್ರತಿಯೊಂದು ಪ್ರಾಂತದ ಆಡಳಿತವೂ ಆಯಾ ಭಾಷೆಯಲ್ಲಿ ನಡೆಯಬೇಕೆಂಬುದೂ ಒಂದು ಮುಖ್ಯ ತತ್ವವಾಗಿತ್ತು. ಸ್ವರಾಜ್ಯ ಚಳುವಳಿಯನ್ನು ನಡೆಸಲು ಜನಸಂಪರ್ಕವನ್ನು ಹೊಂದಲು ಜನತೆಯ ಭಾಷೆಯಲ್ಲಿ ಎಲ್ಲ ಕಾರ್ಯವನ್ನು ನಡೆಸುವುದು ಅವಶ್ಯಕವಾಗಿತ್ತು. ಪ್ರಾಂತಭಾಷೆಯ ಪ್ರಾಮುಖ್ಯತೆಯನ್ನು ಕಾಂಗ್ರೆಸ್ಸು ಮೊದಲಿಗೇ ಅರಿತು ಕರ್ನಾಟಕಕ್ಕೆ ಒಂದು ಭಾಷಾ ಪ್ರಾಂತವ ಅಂತಸ್ತನ್ನು ಕೊಟ್ಟಿತು. ೧೯೨೪ ರಲ್ಲಿ ಬೆಳಗಾವಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನ ನಡೆದುದರಿಂದ ರಾಜಕೀಯಕ್ಕೆ ಬೆಂಬಲ ಬಂದಂತೆ ಏಕೀಕರಣಕ್ಕೂ ಬೆಂಬಲ ದೊರೆಯಿತು. ಅಲ್ಲಿಂದ ಮುಂದೆ ಅನೇಕ ವರುಷಗಳು ಕರ್ನಾಟಕದ ಏಕೀಕರಣ ಸಮಿತಿಗಳು ಕರ್ನಾಟಕದ ವಿವಿಧಭಾಗಗಳಲ್ಲಿ ಸಮಿತಿಯ ಮಹಾಧಿವೇಶನಗಳನ್ನು ನಡೆಸಿದರು. ಇಂಥ ಅಧಿವೇಶನಗಳಿಗೆ ಶ್ರೀಮಾನ್ ಹಳಕಟ್ಟಿ, ಪಟ್ಟಾಭಿ ಸೀತಾರಾಮಯ್ಯ, ನಾಗನಗೌಡ, ಜಿನರಾಜಹೆಗಡೆ, ಬಿ. ಜಿ. ಖೇರ್ ಮುಂತಾದ ಗಣ್ಯರೆಲ್ಲ ಅಧ್ಯಕ್ಷರಾಗಿದ್ದರು. ಹೀಗೆ ರಾಜಕೀಯ ಚಳುವಳಿಗಾಗಿ ಒಂದು ಪ್ರಾಂತವನ್ನು ಸಂಪಾದಿಸಿದುದು ಸಾಂಸ್ಕೃತಿಕವಾಗಿಯೂ ಅದನ್ನು ಒಂದುಗೂಡಿಸಲು ಸಹಾಯವಾಯಿತು. ಉಳಿದ ಕಡೆ ಹೇಗಾದರೂ ಇದ್ದಿರಲಿ, ಕರ್ನಾಟಕದಲ್ಲಿಯಂತೂ ಪ್ರತಿಯೊಬ್ಬ ಸ್ವಾತಂತ್ರ್ಯ ಹೋರಾಟಗಾರನೂ ಏಕೀಕರಣ ಹೋರಾಟಗಾರನೂ ಪ್ರಚಾರಕನೂ ಆದನು. ಹೀಗೆ ಸ್ವಾತಂತ್ರ್ಯ ಹೋರಾಟದ ಇಪ್ಪತ್ತೈದು ವರ್ಷಗಳೂ ಏಕೀಕರಣದ ಕಾರ್ಯ ಸಹ, ವ್ಯವಸ್ಥಿತವಾಗಿ ಆದವು. ಕರ್ನಾಟಕದಲ್ಲಿ ಪ್ರತಿಯೊಂದು ಚಳುವಳಿಯೂ–ಕರನಿರಾಕರಣ ಮೊದಲುಗೊಂಡು–ಏಕೀಕೃತ ಕರ್ನಾಟಕ ಭಾವನೆಗೆ ಸಹಾಯಕವಾದವು. ಇದರಲ್ಲಿ ಭಾಗವಹಿಸಿದ ಜನರ ಪತ್ರಿಕೆಗಳ ಸಂಘಗಳ ಹೆಸರುಗಳನ್ನು ಹೇಳ ಹೊರಟರೆ ಅದೇ ಒಂದು ದೊಡ್ಡ ಪಟ್ಟಿಯಾಗುವುದು. ಪ್ರತಿಯೊಂದು ಊರಿನಲ್ಲಿಯೂ ಒಬ್ಬನಾದರೂ ಸ್ವಾತಂತ್ರ ಹೋರಾಟಗಾರ ಇದ್ದಂತೆ ಪ್ರತಿಯೊಂದು ಊರಿಗೂ ಒಬ್ಬನಾದರೂ ಏಕೀಕರಣವಾದಿ ಹೋರಾಟಗಾರ ಇದ್ದ.

೧೯೪೭ ರಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಜಯ ಲಭಿಸಿತು. ಬ್ರಿಟಿಷರು ಭಾರತವನ್ನು ತೊರೆದು ಹೊರಟರು. ಆಗ ಎಲ್ಲ ಪ್ರಾಂತಗಳೂ ಸ್ವತಂತ್ರವಾದವು.

ಬ್ರಿಟಿಷರು ಅಲ್ಲಿಯೂ ಒಂದು ತಲೆನೋವನ್ನು ಬಿಟ್ಟುಹೋದರು. ಭಾರತವನ್ನು ಎರಡಾಗಿ ಮಾಡಿದುದಲ್ಲದೆ, ದೇಶೀಯ ಸಂಸ್ಥಾನಗಳನ್ನೆಲ್ಲ ಸ್ವತಂತ್ರವಾಗಿ ಬಿಟ್ಟುಹೋದರು. ಮೈಸೂರು ಮಹಾರಾಜರು, ಹೈದರಾಬಾದು ನಿಜಾಮರು ಇನ್ನೂ ಅನೇಕ ರಾಜರು ಭಾರತದ ಒಕ್ಕೂಟಕ್ಕೆ ಸೇರಲಿಲ್ಲ. ದೇಶೀಯ ರಾಜರೆಲ್ಲ ಒಂದು ಸ್ವತಂತ್ರ ಒಕ್ಕೂಟವನ್ನು ಮಾಡಿಕೊಳ್ಳುವ ಗುರಿಯನ್ನು ಹೊಂದಿದ್ದರು. ತಿರುವಾಂಕೂರಿನ ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರು, ಸಮುದ್ರ ಸಂಪರ್ಕದ ಮೂಲಕ ಇತರ ದೇಶಗಳ ಜೊತೆ ರಾಯಭಾರ ಸಂಬಂಧವನ್ನು ಹೊಂದುವ ಇಚ್ಛೆಯನ್ನೂ ವ್ಯಕ್ತಪಡಿಸಿದ್ದರು.ಮೈಸೂರು ಮಹಾರಾಜರೂ ಸಹ ಭಾರತ ಒಕ್ಕೂಟಕ್ಕೆ ಪ್ರಾರಂಭದಲ್ಲಿ ಸೇರಲಿಲ್ಲ. ಆ ಎಲ್ಲ ಕಾರ್ಯಗಳೂ ಸ್ವಾತಂತ್ರ್ಯ ಹೋರಾಟಕ್ಕೂ ಏಕೀಕರಣತತ್ವ ಜನರ ಆಶೋತ್ತರ ಎಲ್ಲಕ್ಕೂ ವಿರುದ್ಧವಾಗಿದ್ದವು. ರಾಜರು ಹಾಗೇನಾದರೂ ಸ್ವತಂತ್ರವಾಗಿ ಉಳಿದಿದ್ದರೆ ಏಕೀಕರಣ ಸಾಧ್ಯವಾಗುತ್ತಲೇ ಇರಲಿಲ್ಲ. ಮೈಸೂರು ಮಹಾರಾಜರೂ ಪ್ರಾರಂಭದಲ್ಲಿ ಭಾರತ ಒಕ್ಕೂಟಕ್ಕೆ ಸೇರಲಿಲ್ಲ. ಆಗ ಮೈಸೂರಿನಲ್ಲಿ (೧೯೪೭ನೇ ಸೆಪ್ಟೆಂಬರ್) ಆರು ವಾರಗಳ ಕಾಲ, ಅತ್ಯಂತ ತೀವ್ರವಾದ ಚಳುವಳಿ ನಡೆಯಿತು. ಹೋರಾಟದಲ್ಲಿ ವಿದ್ಯಾರ್ಥಿಗಳು, ಕಾರ್ಮಿಕರು, ರೈಲು ಸಿಬ್ಬಂದಿ ಪೋಲೀಸ್ ಸಹ ಸೇರಿಬಿಟ್ಟರು. ಎಲ್ಲರೂ ಸೇರಿ ಸರ್ಕಾರವನ್ನು ಸ್ಥಗಿತಗೊಳಿಸಿಬಿಟ್ಟರು. ಮಹಾರಾಜರು ನಿರುಪಾಯರಾಗಿ ಭಾರತ ಒಕ್ಕೂಟಕ್ಕೆ ಸೇರಿ, ಅಧಿಕಾರವನ್ನು ಪ್ರಜೆಗಳಿಗೆ ವರ್ಗಾಯಿಸಿದರು. ಚೆಂಗಲರಾಯರೆಡ್ಡಿಯವರು ಮೈಸೂರಿನ ಪ್ರಥಮ ಸ್ವಾತಂತ್ರ್ಯ ಮುಖ್ಯಮಂತ್ರಿಯಾದರು.

ಅಧಿಕಾರ ವರ್ಗಾವಣೆ ದೇಶವಿಭಜನೆ ಸಂವಿಧಾನ ಸಮಿತಿ ಕಾರ್ಯಕಲಾಪ ಆಹಾರ ಧಾನ್ಯ ಸೃಷ್ಟಿಯಲ್ಲಿ ಕೊರತೆಗಾಂಧೀಜಿಯ ಮರಣ ನಿರಾಶ್ರಿತರ ಪುನರ್ವಸತಿ ಕಾಶ್ಮೀರ ಪ್ರಶ್ನೆ ಗಡಿಪ್ರಶ್ನೆ, ಸ್ವಾತಂತ್ರ್ಯ ದೇಶಕ್ಕೆ ತಂದು ಒಡ್ಡಿದ ಸಾವಿರಾರು ಸಮಸ್ಯೆಗಳ ಮೂಲಕ, ಭಾಷಾವಾರು ಪ್ರಾಂತೀಕರಣದ ಕಡೆಗೆ ಗಮನಹರಿಸಲು ಕೇಂದ್ರ ಸರ್ಕಾರಕ್ಕೆ ಸಾಧ್ಯವೇ ಆಗಲಿಲ್ಲ. ಏಕೀಕರಣ ಕ್ರಿಯಾ ಸಮಿತಿಗಳೇನೋ ಎಲ್ಲೆಲ್ಲಿಯೂ ತಮ್ಮ ಚಟುವಟಿಕೆಗಳನ್ನು ನಡೆಸುತ್ತಲೇ ಇದ್ದವು. ೧೯೫೨ ರಲ್ಲಿ ಪ್ರಥಮ ಸಾರ್ವತ್ರಿಕ ಚುನಾವಣೆಯೂ ಆಯಿತು. ಏನೆಲ್ಲ ಆದರೂ

ಕನ್ನಡಿಗರ ಏಕೀಕರಣ ಆಗಲೇ ಇಲ್ಲ. ಅವರು ಇಪ್ಪತ್ತೆರಡು ಆಳ್ವಿಕೆಯಲ್ಲಿ ಚದುರಿಹೋಗಿ ಇದ್ದರು. ಒಂದು ಚುಟುಕದಲ್ಲಿ ಹೇಳಬೇಕಾದರೆ ಕನ್ನಡಿಗರ ಸ್ಥಿತಿ ಎಲ್ಲಿಯೂ ಪ್ರಬಲವಾಗಿರಲಿಲ್ಲ. ಪ್ರಬಲವಾಗಿಲ್ಲದಿರುವುದಿರಲಿ, ಅವರಿಗೆ ಜನ ಸಂಖ್ಯೆಗನುಗುಣವಾದ ಪ್ರಾತಿನಿಧ್ಯ ಸಹ–ಇತರ ಪ್ರಾಂತದವರ ಬಹುಮತದಲ್ಲಿ ದೊರೆತಿರಲಿಲ್ಲ. ಉದಾಹರಣೆಗೆ ಬೊಂಬಾಯಿ ಮರಾಠರು ೧೧೦ ಲಕ್ಷ ಗುಜರಾತಿಗಳು ೫೦ ಲಕ್ಷ ಮತ್ತು ಕನ್ನಡಿಗರು ೩೯ ಲಕ್ಷ ಇದ್ದರು. ಮದರಾಸಿನಲ್ಲಿ ತಮಿಳರು ೧೮೫ ಲಕ್ಷ, ತೆಲುಗರು ೧೨೨ ಲಕ್ಷ, ಮಲೆಯಾಳಿಗಳು ೩೧ ಲಕ್ಷ, ಕನ್ನಡಿಗರು ೧೨ ಲಕ್ಷ ಇದ್ದರು. ಭಾರತದ ಕೇಂದ್ರ ಪ್ರತಿನಿಧಿ ಸಭೆಯಲ್ಲಿ–ಸೆಂಟ್ರಲ್ ಲೆಜಿಸ್ಲೇಚರ್–ಬ್ರಿಟಿಷ್ ಭಾರತದ ೬೮ ಲಕ್ಷ ಕನ್ನಡ ಪ್ರಜೆಗಳಿಗೆ ಪ್ರತಿನಿಧಿ ಒಬ್ಬರೇ ಇದ್ದರು. ಮುವತ್ತೊಂದು ಲಕ್ಷದ ಮಲೆಯಾಳಿಗಳಿಗೆ ನಾಲ್ಕು ಪ್ರತಿನಿಧಿಗಳು, ಮುವತ್ತೊಂದು ಲಕ್ಷ ಸಿಂಧಿಗಳಿಗೆ ನಾಲ್ಕು ಪ್ರತಿನಿಧಿಗಳು. ಅರವತ್ತೆಂಟು ಲಕ್ಷ ಕನ್ನಡ ಪ್ರಜೆಗಳಿಗೆ ಒಬ್ಬ ಪ್ರತಿನಿಧಿ! ಕನ್ನಡಿಗರ ಧ್ವನಿ ತಮಿಳು ತೆಲುಗು ಮಲೆಯಾಳಿ ಮರಾಠಿ ಗುಜರಾತಿಗಳ ಪ್ರತಾಪದ ಎದುರಿಗೆ ಕುಗ್ಗಿತ್ತು. ಏಕೀಕರಣವಾದಿಗಳ ಚಳುವಳಿ ನಡೆದೇ ಇತ್ತು. ಕೆ. ಆರ್. ಕಾರಂತರ ನೇತೃತ್ವದಲ್ಲಿ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು ಸ್ಥಾಪಿತವಾಗಿ ಐದು ಸಾವಿರಕ್ಕೂ ಹೆಚ್ಚು ಮಂದಿ ಸೆರೆವಾಸ ಹೊಂದಿದರು. ಮುಖಂಡರನ್ನು ಸ್ಥಾನಬದ್ಧತೆಯಲ್ಲಿಟ್ಟರು. ಸರ್ವೋಚ್ಚ ನ್ಯಾಯಾಲಯ, ಬೊಂಬಾಯಿ ಸರಕಾರದ ಸ್ಥಾನಬದ್ಧತಾ ಕಾಯಿದೆಯನ್ನು ಹೊಡೆದು ಹಾಕಿತು. ಆ ವೇಳೆಗೆ ಆಂಧ್ರದ ಪೊಟ್ಟಿ ಶ್ರೀರಾಮುಲು ಆಮರಣಾಂತ ಉಪವಾಸದಿಂದ ಹುತಾತ್ಮರಾದರು. ಹೈದರಾಬಾದ್ ಕಾಂಗ್ರೆಸ್ಸಿನಲ್ಲಿ ಆಂಧ್ರ ಪ್ರಾಂತ್ಯ ರಚನೆಗೆ ಮಾತ್ರ ನಿರ್ಣಯ ಬಂದುದನ್ನು ಶ್ರೀ ಕೆ. ಹನುಮಂತಯ್ಯ ನವರು ಪ್ರಬಲವಾಗಿ ವಿರೋಧಿಸಿ ಕರ್ನಾಟಕ ಏಕೀಕರಣವನ್ನು ಪ್ರತಿಪಾದಿಸಿದರು. ೧೯೫೩ ರಲ್ಲಿ ಆಂಧ್ರಪ್ರಾಂತ ರಚನೆಯಾಯಿತು. ಮೈಸೂರು ಎಂದಿನಿಂದಲೂ ಕರ್ನಾಟಕದ ಕಣ್ಣು ಆಗಿದ್ದುದರಿಂದ, ಆಂಧ್ರದಿಂದ ಹೊರತೆಗೆದ ಏಳು ತಾಲ್ಲೂಕುಗಳೂ ಮೈಸೂರಿಗೆ ಸೇರಿ, ಏಕೀಕರಣದ ಪ್ರಥಮ ಹೆಜ್ಜೆಯನ್ನು ಇಟ್ಟಂತೆ ಆಯಿತು.

ಆದರೂ ಕೇಂದ್ರ ಸರ್ಕಾರ ಕರ್ನಾಟಕ ಏಕೀಕರಣಕ್ಕೆ ಮುಂದಾಗಲಿಲ್ಲ.

ಅವರು ಮೊದಲು ನಿಯಮಿಸಿದ ಧಾರ್ ನಿಯೋಗ, ಭಾಷಾ ಪ್ರಾಂತಗಳಿಗೆ ಅನುಕೂಲವಾದ ವರದಿಯನ್ನು ಕೊಡಲಿಲ್ಲ. ಅನಂತರ ನಿಯಮಿತವಾದ ವಿ. ಜೆ. ಪಿ. (ವಲ್ಲಭಾಯಿ ಜವಹರಲಾಲ್ ಪಟ್ಟಾಭಿರಾಮಯ್ಯ) ಸಮಿತಿ ಮತ್ತೊಂದು ವರದಿಯನ್ನು ಸಲ್ಲಿಸಿತು. ಅದಕ್ಕನುಗುಣವಾಗಿ ಭಾಷಾವಾರು ಪ್ರಾಂತ ರಚನೆಗೆ ಒಪ್ಪಿಗೆ ಸೂಚಿತವಾಯಿತು. ೧೯೪೯ ರಲ್ಲಿ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಹರಿಹರದಲ್ಲಿ ಸೇರಿದ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿ, ಮೈಸೂರು ಮಹಾರಾಜರನ್ನು ಗವರ್ನರ್ ಆಗಿ ಒಳಗೊಂಡ ಕರ್ನಾಟಕ ಪ್ರಾಂತ ವಾಗಬೇಕೆಂದು ತೀರ್ಮಾನಿಸಿತು. ಈ ಎಲ್ಲ ಪ್ರಯತ್ನಗಳ ಫಲವಾಗಿ ಫಜಲ್ ಅಲಿ ನಿಯೋಗ ಸ್ಥಾಪಿತವಾಗಿ ಸಾವಿರದ ಒಂಬೈನೂರ ಐವತ್ತಾರರ ನವಂಬರ್ ಒಂದರಂದು ಕರ್ನಾಟಕ ಪ್ರಾಂತ ನಿರ್ಮಾಣವಾಯಿತು. ಆದರೆ ಅದರಲ್ಲಿಯೂ ಒಂದು ಅಪಶಕುನವಿತ್ತು. ಮೈಸೂರು ಪ್ರಾಂತವನ್ನು ಸೇರಿಸಿ ಕರ್ನಾಟಕ ಮಾಡಿದರೆ, ಮೈಸೂರಿಗೇ ನಷ್ಟವಾಗುತ್ತದೆ ಎಂಬ ಕೂಗು ಎದ್ದಿತು. ಮಂಡ್ಯ ದಲ್ಲಿ ಅದೇ ದಿನ ಏಕೀಕರಣ ಪ್ರತಿಭಟನಾ ಸಭೆ ಸಹ ನಡೆಯಿತು. ಆದರೆ ಆ ಸಂದರ್ಭದಲ್ಲಿ ಶ್ರೀಮಾನ್ ಹನುಮಂತಯ್ಯನವರು ಮೈಸೂರಿನ ಮುಖ್ಯಮಂತ್ರಿ ಯಾಗಿದ್ದುದರಿಂದ-ಎರಡು ತಿಂಗಳ ಹಿಂದೆ ಅವರು ಅಧಿಕಾರ ಬಿಟ್ಟಿದ್ದರೂ- ಏಕೀಕರಣವನ್ನು ಸಾಧಿಸಿಬಿಟ್ಟರು. ಏಕೀಕರಣ, ಜಗತ್ತಿನ ಇತಿಹಾಸದಲ್ಲಿಯೇ ಒಂದು ಅಪೂರ್ವ ಸಾಧನೆ. ಈ ಹೋರಾಟಕ್ಕೆ ನೂರಐವತ್ತು ವರುಷಗಳ ಇತಿಹಾಸವೇ ಇದೆ. ಇಷ್ಟು ವರ್ಷಗಳ ನಂತರ ಅಣ್ಣತಮ್ಮಂದಿರೆಲ್ಲ ಮುಖಾ ಮುಖಿಯಾಗಿ ಮತ್ತೆ ಸೇರಿದ್ದೇವೆ. ನಮ್ಮ ಅಣ್ಣತಮ್ಮಂದಿರನೇಕರು ನಮ್ಮ ಜೊತೆ ಸೇರಿಲ್ಲ. ಕಾಸರಗೋಡಿನವರ ಸ್ಥಿತಿಯಂತೂ ತುಂಬ ಚಿಂತಾಜನಕ ವಾಗಿದೆ

ಏಕೀಕರಣವೂ ಆಯಿತು. ನಾಮಕರಣವೂ ಆಯಿತು. ಇವಕ್ಕಾಗಿ ದುಡಿದವರ ಸಂಖ್ಯೆ ಅಪಾರ. ಹಳಕಟ್ಟಿ ಮುದವೀಡ್ಕರ್, ಕಡಪ ರಾಘವೇಂದ್ರ ರಾವ್ ಸಾಹಿತ್ಯ ಪರಿಷತ್ತಿನ ಎಲ್ಲ ನೇತಾರರು, ಕಾಂಗ್ರೆಸ್ಸಿನ ಎಲ್ಲ ಮುಖಂಡರೂ ಆಲೂರ್ ವೆಂಕಟರಾವ್, ಮಾಸ್ತಿ, ದೇವರಾಜ ಅರಸ್, ದೊಡ್ಡಮೇಟಿ, ಜೆಳ್ಳಪ್ಪ, ಶಂಕರಗೌಡ ಪಾಟೀಲ್, ಟಿ. ಟಿ. ಶರ್ಮ, ಕೌಜಲಗಿ, ಬುರ್ಲಿ, ಜಯ

ಚಾಮರಾಜ ಒಡೆಯರ್, ವೆಂಕಟನಾರಾಣಪ್ಪ ತಗಡೂರು, ಹಾರ್ನಹಳ್ಳಿ, ಕೆ. ಎಂ. ರುದ್ರಪ್ಪ, ಶ್ರೀನಿವಾಸ ಮಂಗಳವೇಡೆ, ಬಿ. ಎಂ. ಶ್ರೀ., ಅ. ನ. ಕೃ., ರಮಾನಂದ ತೀರ್ಥ, ಕಾರ್ನಾಡ ಸದಾಶಿವರಾವ್, ಬೇಂದ್ರೆ, ಪೂಣಚ್ಚ, ಒಬ್ಬರೇ ಇಬ್ಬರೇ. ಇಪ್ಪತ್ತು ಆಳ್ವಿಕೆಗಳಲ್ಲಿರುವ ಎಲ್ಲ ಕನ್ನಡಿಗರೂ ಈ ರಥವನ್ನು ಎಳೆದು ಗುರಿ ಮುಟ್ಟಿಸಿದ್ದಾರೆ. ಇದಕ್ಕಾಗಿ ಸೇವೆ, ತ್ಯಾಗ ಬಲಿದಾನ ಸರ್ವಸ್ವ ಸಮರ್ಪಣೆ ಎಲ್ಲ ಆಗಿದೆ. ಈ ವರುಷ ಜೆಳ್ಳಿ ಹಬ್ಬವೂ ತಿಂಗಳಾನುಗಟ್ಲೆ ಅನೇಕ ಹಣವ್ಯಯ- ಕಣ್ಣು ಕೋರೈಸುವ ದೀಪ ಕಿವಿ ಭೋರ್ಗರೆವ ಚಲಚಿತ್ರ ಸಂಗೀತದೊಂದಿಗೆ ಆಚರಿಸಲ್ಪಟ್ಟಿತು. ಯಾವ ಉದ್ದೇಶಕ್ಕಾಗಿ ನಾವು ಏಕೀಕರಣವನ್ನು ಸಾಧಿಸಿದೆವೊ ಅದು ನೆರವೇರಿದೆಯೆ ?

ಕೆಲವು ನೆರವೇರಿವೆ ; ರಾಜ್ಯದ ಆಡಳಿತ ಭಾಷೆ ಕನ್ನಡವಾಗಿ ದಕ್ಷತೆಯಿಂದ ಜಾರಿಯಾಗಿಲ್ಲ ; ಕಡ್ಡಾಯ ಪ್ರಾಥಮಿಕ ಶಿಕ್ಷಣ ಮತ್ತು ಪ್ರಾಥಮಿಕ ಶಾಲೆಗಳ ಕಟ್ಟಡ ನಿರ್ಮಾಣ ಸಹ ಅತಿಯಾದ ಯಾಂತ್ರೀಕರಣದಿಂದ ನಡೆಯುತ್ತಿವೆ. ಗ್ರಾಮ ಕೈಗಾರಿಕೆಗಳೆಲ್ಲ ನಿರ್ನಾಮವಾಗುತ್ತಿವೆ. ಇನ್ನೂ ಎಲ್ಲ ಹಳ್ಳಿಗಳಿಗೂ ಕುಡಿಯುವ ನೀರಿನ ಬಾವಿ ದೊರಕಿಲ್ಲ. ಗ್ರಾಮಾಭಿವೃದ್ಧಿಯ ಕಡೆ ಇನ್ನೂ ಹೆಚ್ಚು ಗಮನ ಹರಿಸಬೇಕು. ಕೈಗಾರಿಕೆ ವಾಣಿಜ್ಯ ವ್ಯಾಪಾರಗಳಲ್ಲಿ ಕನ್ನಡಿಗರು ಇತರರಂತೆ ಮುಂದಾಗಿಲ್ಲ; ಅಧಿಕಾರದಲ್ಲಿಯೂ ಕೇಂದ್ರದಲ್ಲಿಯೂ ತಮ್ಮ ಪ್ರಭಾವವನ್ನು ಸ್ಥಾಪಿಸಿಲ್ಲ. ಯಾವುದಕ್ಕೂ ಕೇಂದ್ರದ ಸಲಹೆಗಾಗಿ ದಿನಬೆಳಗಾದರೆ ದಿಲ್ಲಿಗೆ ಧಾವಿಸುವ ಮುಖಂಡರು, ಕನ್ನಡಿಗರು ಅನೇಕ ಚಕ್ರಾಧಿಪತ್ಯಗಳನ್ನು ಸ್ವತಂತ್ರವಾಗಿ ಸ್ಥಾಪಿಸಿ ಆಳಿ, ಹೊಯ್ಸಳರ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ರಾಜಕೀಯ ಸಮತೋಲನವನ್ನು ಸ್ಥಾಪಿಸಿದುದನ್ನು ಮರೆತರೆ? ವಿಜಯನಗರವನ್ನು ಮರೆತರೆ? ಕನೂಜಿನ ಶ್ರೀ ಹರ್ಷನನ್ನು ಚಾಲುಕ್ಯ ಪುಲಕೇಶಿ ಸೋಲಿಸಿದ ಧೈರ್ಯ ಸ್ಥೈರ್ಯ ಎಲ್ಲಿ? ಗಾಂಧೀಜಿ ಮೆಚ್ಚಿ ಕರ್ನಾಟಕ ನನ್ನ ಪ್ರಾಂತವೆಂದು ಹೇಳಿಕೊಂಡ ಶಿಸ್ತು ಅಹಿಂಸೆ ಸತ್ಯಪಾಲನೆ ಬೇಡವೆ? ಇಂಥ ಜನ! ಇಂಥ ಪೂರ್ವೇತಿಹಾಸ! ಇಂಥ ಪ್ರಕೃತಿ ಸಂಪತ್ತು! ಪರಮಾತ್ಮನ ಇವಕ್ಕಿಂತ ಹೆಚ್ಚಾದುದನ್ನು ಅನುಗ್ರಹಿಸಲಾರ. ಇವನ್ನೆಲ್ಲ ಸದುಪಯೋಗ ಪಡಿಸಿ. ಪಂಪನು ಹೇಳಿದಂತೆ "ಆರ್ ಅಂಕುಶವಿಟ್ಟೊಡಂ ನೆನೆವುದೆನ್ನ ಮನಂ

ಬನವಾಸಿ ದೇಶಮುಂ" ಎಂಬಂತೆ ಈ ನಾಡವರ ಬದುಕು ಸಾರ್ಥಕವಾಗುವಂತೆ ಮಾಡುವುದು, ನಮ್ಮ ನಾಯಕರ ಹೊಣೆಗಾರಿಕೆ. ನಾಯಕರಿಗೂ ಜನತೆಗೂ ತೇಜಸ್ಸು ಹೆಚ್ಚಲಿ. ಏಕೀಕರಣ ಹೋರಾಟದಲ್ಲಿ ಭಾಗವಹಿಸಿದ ಎಲ್ಲ ಮಹನೀಯರು, ಸಂಘ ಸಂಸ್ಥೆಗಳು ಪತ್ರಿಕೆಗಳು ಇವರ ಹೆಸರನ್ನು ನಮೂದಿಸಲು ಸ್ಥಳಾಭಾವದಿಂದ ವಿಷಾದಿಸುತ್ತೇನೆ.



ಅದೃಷ್ಟ

ಅದೃಷ್ಟ ನಾಳೆ ದೊಡ್ಡ ಲಾಭವನ್ನು ನಿನ್ನ ಪಾಲಿಗೆ ತರಬಹುದು ; ಇಂದು ಹೋದದ್ದು ನಾಳೆ ಬಂದೀತು,

—ಸೆರವಾಂಟೆಸ್

ಅದೃಷ್ಟ ಗಾಜಿನಂತೆ. ಹೊಳಪು ಹೆಚ್ಚಾದಂತೆಲ್ಲಾ ಬೇಗ ಒಡೆಯಬಲ್ಲದು.

—ಸೈರಸ್

ಅಧಿಕಾರ

ಅಧಿಕಾರ ಎಂಬುದು ಮುಳ್ಳಿನ ಹಾಸಿಗೆ.

—ಷೇಕ್ಸ್‌ಪಿಯರ್

ವಿಶ್ವದ ಚರಿತ್ರೆಯ ಎಲ್ಲ ರೀತಿಯ ಅಪರಾಧಗಳನ್ನು ಎರಡು ಪದಗಳಲ್ಲಿ ಸಂಗ್ರಹಿಸಬಹುದು: ಅಧಿಕಾರದ ದುರುಪಯೋಗ.

—ಆರ್. ಜಿ. ಇಂಗರ್‌ಸಾಲ್

ಕರ್ನಾಟಕದ ಗಡಿ ಸಮಸ್ಯೆಗಳು
—ಹೊರನಾಡ ಕನ್ನಡಿಗರು

—ಕಯ್ಯಾರ ಕಿಞ್ಞಣ್ಣರೈ

ಭಾಷೆಯ ತಳಹದಿಯಲ್ಲಿ ರಾಜ್ಯಗಳ ಪುನಾರಚನಾ ತತ್ವವನ್ನು ನಾವು ಸ್ವಾತಂತ್ರ್ಯಕ್ಕಾಗಿ ಹೋರಾಟ ಹೂಡಿದ ಕಾಲದಿಂದಲೇ ಒಪ್ಪಿಕೊಂಡೆವು. ನಾವು ಎಂದಿಗೂ ಒಂದಾಗದಂತೆ ನಮ್ಮನ್ನು ಛಿದ್ರ ವಿಚ್ಛಿದ್ರಗೊಳಿಸಿ ಆಳಿದರೆಂದು ನಾವು ಬ್ರಿಟಿಷರನ್ನು ದೂರಿದೆವು. ಆದರೆ ಸ್ವಾತಂತ್ರ್ಯ ಪಡೆದಮೇಲೂ ಭಾಷಾ ರಾಜ್ಯಗಳ ರಚನೆಗೆ ವಿಳಂಬವೇ ಆಯಿತು; ಆಗ ಮತ್ತೆ ಆಂಧ್ರದ ಪೊಟ್ಟಿಸೀತಾರಾಮುಲು ಗೈದ ಬಲಿದಾನ ಎಲ್ಲರನ್ನೂ ಎಚ್ಚರಿಸಿತು! ೧೯೫೩ರ ಆಗಸ್ಟ್ ೧೦ರಂದು ಪಾರ್ಲಿಮೆಂಟಿನಲ್ಲಿ ಮಂಜೂರಾದ ಆಕ್ಟಿನಂತೆ ಆಂಧ್ರರಾಜ್ಯರಚನೆಯೂ ಆಯಿತು. ಅಷ್ಟರಲ್ಲಿ ಇತರ ಭಾಷಾ ರಾಜ್ಯಗಳ ಬೇಡಿಕೆಯೂ ಬಲವಂತವಾಗಲು ಅಂದಿನ ಪ್ರಧಾನಿ ನೆಹರು ಸಮಗ್ರಭಾಷಾ ರಾಜ್ಯಗಳ ರಚನೆಗೆ ಒಂದು ಆಯೋಗ ನೇಮಿಸುವುದಾಗಿ ಘೋಷಿಸಿದರು. ೧೯೫೩ರ ಡಿಸೆಂಬರ್ ೨೯ರಂದು ರಾಜ್ಯ ಪುನಾರಚನಾ ಆಯೋಗದ ನೇಮಕವಾಯಿತು. ಆ ಆಯೋಗ ರಾಷ್ಟ್ರದಾದ್ಯಂತ ಸಂಚರಿಸಿ ಸಾಕ್ಷಿಗಳನ್ನು ಸಂಗ್ರಹಿಸಿದ ಪ್ರಕಾರ ಪಾರ್ಲಿಮೆಂಟಿನ ಮುಂದೆ ವರದಿಯೊಂದನ್ನು ಮಂಡಿಸಿತು. ಅಲ್ಲಿ ಅನೇಕ ತಿದ್ದುಪಡಿಗಳು ಸೂಚಿತವಾದರೂ ಬಳ್ಳಾರಿಯನ್ನು ಕರ್ನಾಟಕಕ್ಕೆ ಬಿಟ್ಟುಕೊಡುವ ಒಂದೇ ಒಂದು ತಿದ್ದುಪಡಿಯನ್ನು ಒಪ್ಪಿಕೊಂಡು, ಇತರ ವಿವಾದಗಳನ್ನೆಲ್ಲಾ ವಲಯ ಮಂಡಳಿಯಲ್ಲಿ ತೀರ್ಮಾನಿಸಬಹುದೆಂದು ಸೂಚಿಸಿ ರಾಜ್ಯ ಪುನಾರಚನಾ ಕಾಯಿದೆ ಮಂಜೂರಾಯಿತು. ಅದರಂತೆ ಕರ್ನಾಟಕ, ಕೇರಳ, ತಮಿಳುನಾಡು, ಮಹಾರಾಷ್ಟ್ರ ಮೊದಲಾದ ಭಾಷಾ ರಾಜ್ಯಗಳು ೧೯೫೬ರ ನವಂಬರ್ ಒಂದರಂದು ಅಸ್ತಿತ್ವಕ್ಕೆ ಬಂದುವು.

ಆಗೊಮ್ಮೆ, ಕನ್ನಡಿಗರು ಅರ್ಧಶತಮಾನದಿಂದ ಕಂಡ ಕನಸು ನನಸಾಯಿತು ಎಂದು ಸಂತಸ ಪಡುವಂತೆ ಮೇಲ್ನೋಟಕ್ಕೆ ತೋರಿದರೂ ಒಟ್ಟಿನಿಂದ ಕರ್ನಾಟಕ್ಕೆ ಆದ ನಷ್ಟ ಬಹಳವಾಗಿತ್ತು. ಸುಮಾರು ಹತ್ತುಸಾವಿರ ಚದುರ

ಮೈಲುಗಳಿಗೂ ಮಿಕ್ಕಿದ ವಿಸ್ತಾರವಾದ ಕನ್ನಡ ಪ್ರದೇಶಗಳು ನೆರೆಯ ಕೇರಳ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರಗಳಲ್ಲಿ ಸೇರಿಹೋಗಿದ್ದುವು. ಮೈಸೂರಿಗೆ ತಾಗಿ ನೈಋತ್ಯ ದಿಕ್ಕಿನಲ್ಲಿರುವ ನೀಲಗಿರಿ, ಗುಡಲೂರು, ಉದಕಮಂಡಲ, ಕೂನೂರು, ಕೊಳ್ಳೆಗಾಲ, ತಾಳವಾಡಿ ಬರಗೂರು ಈ ಪ್ರದೇಶಗಳು ತಮಿಳು ನಾಡಿಗೆ ಹೋಗಿದ್ದುವು; ಬೆಂಗಳೂರು ಜಿಲ್ಲೆಗೆ ತಾಗಿ ಇರುವ ಸೇಲಂಜಿಲ್ಲೆಯ ಹೊಸೂರು, ಕೃಷ್ಣಗಿರಿ ಪ್ರದೇಶಗಳೂ ತಮಿಳುನಾಡಿನಲ್ಲಿಯೇ ಉಳಿದುವು. ಆದವಾನಿ, ಆಲೂರು, ರಾಯದುರ್ಗ ತಾಲ್ಲೂಕುಗಳೂ ಮಡಕಸಿರಾ, ಕಲ್ಯಾಣ ದುರ್ಗ, ಹಿಂದುಪುರಗಳ ಕನ್ನಡ ಭಾಗಗಳೂ ಆಂಧ್ರಕ್ಕೆ ಸೇರಿ ಹೋದುವು. ಸೊಲ್ಲಾಪುರ, ಅಕ್ಕಲಕೋಟೆ, ಜತ್ತ್ ತಾಲ್ಲೂಕುಗಳೂ ಉಸ್ಮಾನ್‌ಬಾದ್ ಜಿಲ್ಲೆಯ ನಳದುರ್ಗ, ಉಮರ್ಗ ತಾಲ್ಲೂಕುಗಳೂ ಮಂಗಳವೇಡೆಯ ಒಂದು ಭಾಗವೂ ಮಹಾರಾಷ್ಟ್ರದಲ್ಲಿ ವಿಲೀನವಾಗಿ ಹೋಯಿತು. ಕಾಸರಗೋಡು, ವೈನಾಡು ತಾಲ್ಲೂಕುಗಳ ಕನ್ನಡಭಾಗಗಳು ಕೇರಳಾಂತರ್ಗತವಾದುವು. ಅಂದಿನ ನಮ್ಮ ಧುರೀಣರೆಂಬವರ ಅದೂರ ದೃಷ್ಟಿಯೋ ಅಥವಾ ಕರ್ನಾಟಕದ ದೌರ್ಭಾಗ್ಯವೋ ಕಾರಣವಾಗಿ ಕರ್ನಾಟಕದಲ್ಲಿಯೇ ಇರಬೇಕಾದ ಎಷ್ಟೋ ಅಚ್ಚಗನ್ನಡ ಪ್ರದೇಶಗಳು ಬೇರೆ ಭಾಷಾ ರಾಜ್ಯಗಳಲ್ಲಿ ಉಳಿಯುವಂತೆ ಆಯಿತು.

ಕರ್ನಾಟಕ ರಾಜ್ಯ ರೂಪುಗೊಂಡಾಗ, ಬಿಟ್ಟುಹೋದ ಗಡಿ ಪ್ರದೇಶಗಳ ಜನರಲ್ಲಿ ತೀವ್ರ ಅತೃಪ್ತಿ ನಿರಾಶೆಗಳು ತುಂಬಿದುವು; ಈ ಅನ್ಯಾಯವನ್ನು ಸರಿಪಡಿಸಬೇಕೆಂಬ ಬಗ್ಗೆ ಅತುಲ ತ್ಯಾಗ ಬಲಿದಾನಗಳ ಉಗ್ರಚಳವಳಿಗಳೇ ಆದುವು. ಕಾಸರಗೋಡಿನಂತಹ ಪ್ರದೇಶಗಳಲ್ಲಿ ಸತ್ಯಾಗ್ರಹ, ಪಿಕೆಟಿಂಗ್, ಲಾಠಿ ಪೆಟ್ಟು, ಸೆರೆಮನೆವಾಸ ಎಲ್ಲಾ ನಡೆಯಿತು. ಮಹಿಳೆಯರೂ ಹಸುಗೂಸುಗಳನ್ನು ಎತ್ತಿಕೊಂಡು ಸೆರೆಮನೆ ಸೇರಿದರು. ವಿದ್ಯಾರ್ಥಿಗಳು ಪೋಲೀಸರ ಗುಂಡಿಗೆ ಆಹುತಿಯಾದರು! ಚುನಾವಣೆಗಳನ್ನು ಇದಿರಿಸಿದರು; ಅಖಿಲ ಭಾರತವ್ಯಾಪ್ತಿಯ ಪಕ್ಷಗಳನ್ನು ಸೋಲಿಸಿ ಕನ್ನಡಿಗರು ಚುನಾವಣೆಗಳಲ್ಲಿ ಗೆದ್ದು ಜನಾಭಿಪ್ರಾಯ ಸ್ಥಾಪಿಸಿದರು. ಕಾಸರಗೋಡಿನಂತಹ ಕೆಲವೇ ಕಡೆಗಳಲ್ಲಿ ಇಂತು ಇಪ್ಪತ್ತೈದು ವರ್ಷಗಳು ದಾಟಿದರೂ ಇನ್ನೂ ನಿರಂತರ ಹೋರಾಟ ನಡೆಯುತ್ತಲೇ ಇವೆ.

ಕೆಲವು ಗಡಿ ಭಾಗಗಳ ಕನ್ನಡಿಗರ ಹೋರಾಟದ ಕಾವು ಸಾಕಷ್ಟು ಬೆಂಬಲವಿಲ್ಲದೆ ಇಳಿಯುತ್ತಾ ಬಂದು ಅವರಲ್ಲಿ ನಿರಾಶೆಯ ಕಾರ್ಮೋಡ ಕವಿದಿದೆ.

ಕರ್ನಾಟಕದೊಂದಿಗೆ ಮಹಾರಾಷ್ಟ್ರದವರು ಗಡಿ ವಿವಾದವನ್ನು ಮುಂದುವರಿಸುತ್ತಾ ಬಂದಿದ್ದಾರೆ. ೧೯೫೭ರಲ್ಲಿ ಮಹಾರಾಷ್ಟ್ರ ಸರ್ಕಾರ ಕೇಂದ್ರದ ಗೃಹಖಾತೆಗೆ ಮನವಿಯೊಂದನ್ನು ಸಲ್ಲಿಸಿ ಗಡಿವಿವಾದದ ಪುನರ್ವಿಮರ್ಶೆಗೆ ಕೇಳಿಕೊಂಡಿತು. ಬೆಳಗಾವಿನಗರ ಸಹಿತವಾದ ಹಲವು ಕನ್ನಡ ಪ್ರದೇಶಗಳೂ ಸೇರ್ಪಡೆ ಆ ಮನವಿಯಲ್ಲಿ ನಮೂದಿಸಲಾಗಿತ್ತು. ಅವೆಲ್ಲವನ್ನು ಮೈಸೂರು ಸರ್ಕಾರ ತಿರಸ್ಕರಿಸಿದ್ದಲ್ಲದೆ ೧೯೨೯ರಲ್ಲಿಯೇ ಬೆಳಗಾವಿಯಲ್ಲಿ ಜರಗಿದ ಮರಾಠಿ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಎನ್. ಸಿ. ಕೇಳ್ಕರ್ ಅವರು ಬೆಳಗಾವಿ ಕನ್ನಡ ಪ್ರದೇಶವೆಂದು ಒಪ್ಪಿಕೊಂಡ ವಿಚಾರವನ್ನು ಎತ್ತಿತೋರಿಸಿ, ಈ ಗಡಿ ವಿವಾದವನ್ನು ಮರಳಿ ಕೆದಕಬಾರದೆಂದು ದೃಢನಿಲುವು ತಾಳಿತು. ಮತ್ತೆ ೧೯೬೦ರ ನವಂಬರ್ ೨೦ರಂದು ಕೇಂದ್ರದ ಗೃಹ ಸಚಿವರ ಸೂಚನೆಯಂತೆ ಆ ಕುರಿತು ನೇಮಕವಾದ ಚತುಸ್ಸದಸ್ಯ ಸಮಿತಿ ಐದಾರು ಸಲ ಉಭಯರಾಜ್ಯಗಳ ಮುಖ್ಯಸ್ಥರನ್ನು ಕರೆಸಿ ಮಾತನಾಡಿದರೂ ಯಾವುದೇ ಇತ್ಯರ್ಥಕ್ಕೆ ಬರಲಾಗದೆ ವಿವಾದ ಇದ್ದಂತೆಯೇ ಉಳಿಯಿತು. ಕಾಸರಗೋಡಿನ ಕುರಿತಾದ ಕರ್ನಾಟಕ ಕೇರಳ ಗಡಿವಿವಾದಕ್ಕೂ ಬೆಳಗಾವಿ ಕುರಿತಾದ ಮಹಾರಾಷ್ಟ್ರ ಕರ್ನಾಟಕ ಗಡಿ ವಿವಾದಕ್ಕೂ ಇರುವ ಪ್ರಮುಖ್ಯ ವ್ಯತ್ಯಾಸವೆಂದರೆ, ಕಾಸರಗೋಡಿನ ಕನ್ನಡಿಗರ ವಾದದಲ್ಲಿ ನ್ಯಾಯವಿದೆಯೆಂದು ಆಗಾಗ ಕೇರಳದ ಮುಖಂಡರು, ಕಾಂಗ್ರೆಸಿಗರು, ಕಮ್ಯುನಿಸ್ಟರು, ಹಲವು ಸಲ ಒಪ್ಪಿಕೊಂಡಿದ್ದಾರೆ, ಬೆಳಗಾವಿ ವಿವಾದದಲ್ಲಿ ಮಹಾರಾಷ್ಟ್ರದವರ ವಾದದಲ್ಲಿ ನ್ಯಾಯವಿದೆಯೆಂದು ಕರ್ನಾಟಕದ ಯಾವುದೇ ಪಕ್ಷಗಳ, ಯಾವನೇ ಮುಂದಾಳುವಾದರೂ ಇದುವರೆಗೂ ಒಪ್ಪಿಕೊಂಡಿಲ್ಲ. ಒಪ್ಪಿಕೊಳ್ಳದೇ ಇರದವರೂ ಮಹಾರಾಷ್ಟ್ರದವರು ಬಿಡದೆ ಚಳವಳಿ ನಡೆಸುತ್ತ ಬಂದರು. ಅಂದಿನ ಪ್ರಧಾನಿ ನೆಹರು ಒಮ್ಮೆ ಕರ್ನಾಟಕ-ಮಹಾರಾಷ್ಟ್ರ ಉಭಯ ರಾಜ್ಯಗಳ ಮುಖ್ಯ ಮಂತ್ರಿಗಳನ್ನು ಕರೆದು ಸರ್ವಸಮ್ಮತವಾದ ಒಂದು ತೀರ್ಮಾನಕ್ಕೆ ಬರಬೇಕೆಂದು ಸಲಹೆಯಿತ್ತರೂ ಎರಡೋ ಮೂರೋ ಸಲ ಸೌಹಾರ್ದಮಯ ವಾತಾವರಣದಲ್ಲಿ ಮುಖ್ಯಮಂತ್ರಿಗಳ ಭೇಟಿ ನಡೆದರೂ

ಆಶಾವಾದಕ್ಕೆ ಪರಿಹಾರೋಪಾಯ ಕಂಡುಬರಲೇ ಇಲ್ಲ.

ಮಹಾರಾಷ್ಟ್ರದವರು ಮತ್ತೂ ತಮ್ಮ ಹಠವನ್ನು ಬಿಡಲೇ ಇಲ್ಲ. ಮಹಾರಾಷ್ಟ್ರ ಮಂತ್ರಿಮಂಡಳ ರಾಜಿನಾಮೆ ನೀಡುವುದೆಂದು ಅಸಂದಿಗ್ಧವಾಗಿ ಕೇಂದ್ರಕ್ಕೆ ತಿಳಿಸಿತು. ಕೇಂದ್ರ ಸರಕಾರವೇ ಗಡಿವಿವಾದ ತೀರ್ಮಾನಕ್ಕೆ ಒಂದು ಆಯೋಗ ನೇಮಿಸುವುದಾಗಿ ತಿಳಿಸಿತು; ಅದುವರೆಗೆ ಯಥಾಸ್ಥಿತಿ ವಾದಕ್ಕೇ ಪ್ರಬಲವಾಗಿ ಅಂಟಿಕೊಂಡಿದ್ದ ಕರ್ನಾಟಕ ಸರಕಾರವಾದರೂ ಆ ಸಂದರ್ಭದಲ್ಲಿ ಕಾಸರಗೋಡು ಮುಂತಾದ ಪ್ರದೇಶಗಳು ಮರಳಿ ಬರಲಿ ಎಂದೋ-ಆಯೋಗದ ನೇಮಕಕ್ಕೆ ಒಪ್ಪಿಕೊಂಡಿತು. ೧೯೬೬ರ ಅಕ್ಟೋಬರ್ ೨೫ ರಂದು ಜಸ್ಟಿಸ್ ಮೆಹರ್‌ಚಂದ್ ಮಹಾಜನ್ ಇವರು ಏಕಾಂಗ ಕಮಿಶನ್ ಆಗಿರುವ ಆಯೋಗವೊಂದನ್ನು ಕೇಂದ್ರ ಸರಕಾರ, ಮಹಾರಾಷ್ಟ್ರ, ಕರ್ನಾಟಕ, ಕೇರಳ ಗಡಿ ವಿವಾದಗಳ ಇತ್ಯರ್ಥಕ್ಕಾಗಿ ನೇಮಿಸಿತು. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಈ ಮಹಾಜನ್ ಆಯೋಗದ ನೇಮಕವಾದದ್ದು ಮಹಾರಾಷ್ಟ್ರದ ಒತ್ತಾಯದಿಂದಲೇ; ಆದರೆ ನೇಮಕ ಶಿಫಾರಸು ಪ್ರಕಟವಾದಾಗ, ಆ ಶಿಫಾರಸ್ಸನ್ನು ಒಪ್ಪದೆ ಇನ್ನೂ ಅದರ ಜಾರಿಗೆ ತೊಂದರೆಯೊಡ್ಡುವುದು, ಹಾಗೆ ಮಾಡಿಯೂ ಮತ್ತೆ ಗಡಿ ವಿವಾದವನ್ನು ಕೆದಕುತ್ತಾ ಇರುವುದು ಮಹಾರಾಷ್ಟ್ರವೇ. ೧೯೬೬ ನವಂಬರ್ ೧೫ ರಿಂದ ಮಹಾಜನ ಆಯೋಗ ಕಾರ್ಯಾರಂಭ ಮಾಡಿ, ದೇಶದಾದ್ಯಂತ ಸಂಚರಿಸಿ ಸಂಬಂಧಪಟ್ಟ ಸರಕಾರಗಳ, ಪಾರ್ಲಿಮೆಂಟ್ ಸದಸ್ಯರ, ಶಾಸಕರ, ಸಾರ್ವಜನಿಕ ಸಂಘಸಂಸ್ಥೆಗಳ ಪ್ರಮುಖ ಮಹನೀಯರ ಅಭಿಪ್ರಾಯಗಳನ್ನು ಸಂಗ್ರಹಿಸಿದಂತೆ, ಒಟ್ಟು ೨೨೪೦ ಮನವಿಗಳನ್ನೂ ೭೫೭೨ ಮಂದಿಯಿಂದ ಸಾಂಘಿಕವಾಗಿಯೂ ವೈಯಕ್ತಿಕವಾಗಿಯೂ ಸಾಕ್ಷ್ಯಗಳನ್ನೂ ಪಡೆದು ೧೯೬೭ನೆಯ ಆಗಸ್ಟ್ ೨೫ ರಂದು ಕೇಂದ್ರದ ಗೃಹ ಮಂತ್ರಿಗಳಿಗೆ ಮಹಾಜನ ಆಯೋಜನ ಆಯೋಗ ತನ್ನ ಶಿಫಾರಸಿನಲ್ಲಿ ಸಮಾಳಿಸಿತು; ಹಾಗೆ ಸಮಾಳಿಸಿದ ಶಿಫಾರಸು ಕಳೆದ ಹದಿನಾಲ್ಕು ವರ್ಷಗಳಿಂದಲೂ ಯಾವುದೇ ಕೊನೆಯ ಇತ್ಯರ್ಥವಾಗದೆ ಪಾರ್ಲಿಮೆಂಟಿನ ಮುಂದೆ ಇದೆ.

ಮಹಾಜನ ವರದಿ ಗಡಿ ವಿವಾದದ ಕುರಿತು ಇಂತು ವರದಿ ಸಲ್ಲಿಸಿವೆ:

೧. ಈ ಕೆಳಗಿನ ಪ್ರದೇಶಗಳನ್ನು ಕರ್ನಾಟಕ ರಾಜ್ಯದಿಂದ ಮಹಾರಾಷ್ಟ್ರ

ರಾಜ್ಯಕ್ಕೆ ವರ್ಗಾಯಿಸುವುದು–ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ನಿಪ್ಪಾಣಿ ನಗರ ಸಹಿತವಾದ ೪೦ ಗ್ರಾಮಗಳು; ಅದೇ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ೯ ಗ್ರಾಮಗಳು; ಬೆಳಗಾವಿ ತಾಲೂಕಿನ ೬೨ ಗ್ರಾಮಗಳು; ಖಾನಾಪುರ ತಾಲೂಕಿನ ಖಾನಾಪುರನಂದಗಡಸಹಿತ ೧೫೨ ಗ್ರಾಮಗಳು; ಒಟ್ಟು ೮೧೪ ಗ್ರಾಮಗಳನ್ನು ಕರ್ನಾಟಕದಿಂದ ಮಹಾರಾಷ್ಟ್ರ ಕೇಳಿದುದರ ಪೈಕಿ ೨೬೪ ಗ್ರಾಮಗಳನ್ನು, ನಿಪ್ಪಾಣಿ ಖಾನಾಪುರ, ನಂದಗಡನಗರ ಸಮೇತ ಮಹಾರಾಷ್ಟ್ರಕ್ಕೆ ನೀಡಲು ಆಯೋಗ ಶಿಫಾರಸು ಮಾಡಿದೆ. ಬಿಟ್ಟುಕೊಡಲು ಹೇಳಿದ ಈ ಭಾಗಗಳ ಜುಮ್ಲಾ ವಿಸ್ತೀರ್ಣ ೬೫೬೩ ಚದರ ಮೈಲುಗಳು; ಜನ ಸಂಖ್ಯೆ ಮೊತ್ತ ೨,೮೧,೦೦೦. ಮಹಾರಾಷ್ಟ್ರದ ಕೋರಿಕೆಯಲ್ಲಿನ ಬೆಳಗಾವಿ ನಗರ, ಬೀದರ್ ಜಿಲ್ಲೆಯ ಗ್ರಾಮಗಳು, ಉತ್ತರ ಕರ್ನಾಟಕದ ತಾಲೂಕುಗಳು, ಅಥಣಿಯ ಒಂಬತ್ತು ಗ್ರಾಮಗಳು, ಹುಕ್ಕೇರಿಯ ಹದಿಮೂರು ಗ್ರಾಮಗಳು ಈ ಕುರಿತಾದ ಮಹಾರಾಷ್ಟ್ರದ ವಾದವನ್ನು ಆಯೋಗ ತಿರಸ್ಕರಿಸಿದೆ.

೨. ಮಹಾರಾಷ್ಟ್ರದಿಂದ ಈ ಕೆಳಗಿನ ಪ್ರದೇಶಗಳು ಕರ್ನಾಟಕಕ್ಕೆ ಬರ ಬೇಕೆಂದು ಆಯೋಗ ಹೇಳಿದೆ:

ಅಕ್ಕಲಕೋಟೆ ನಗರಸಮೇತ ಇಡೀ ಅಕ್ಕಲಕೋಟೆ ತಾಲೂಕು, ಜತ್ತ ತಾಲೂಕಿನ ೪೪ ಗ್ರಾಮಗಳು; ದಕ್ಷಿಣ ಸೊಲ್ಲಾಪುರದ ೬೫ ಗ್ರಾಮಗಳು, ಗಾಂಧಿಂಗ್ಲಾಜ್ ತಾಲೂಕಿನ ೧೫ ಗ್ರಾಮಗಳು, ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಬರಬೇಕೆಂದು ಕೇಳಿದ ಸೊಲ್ಲಾಪುರ ನಗರ, ಚಂದಗಡ ತಾಲೂಕು ಉತ್ತರ ಸೊಲ್ಲಾಪುರ ತಾಲೂಕುಗಳು ಈ ಕುರಿತಾದ ಕರ್ನಾಟಕದ ವಾದವನ್ನು ಆಯೋಗ ತಳ್ಳಿಹಾಕಿದೆ. ಇಡೀ ದಕ್ಷಿಣ ಸೊಲ್ಲಾಪುರ ತಾಲೂಕು ಕರ್ನಾಟಕಕ್ಕೆ ಸೇರಬೇಕೆಂಬ ವಾದವನ್ನೂ ಆಯೋಗ ಸಮರ್ಥಿಸಲಿಲ್ಲ. ಒಟ್ಟು ಮಹಾರಾಷ್ಟ್ರ ದಿಂದ ೧೩೬೮ ಚದರ ಮೈಲು ವಿಸ್ತೀರ್ಣದ ೨೨೭ ಗ್ರಾಮಗಳು ಕರ್ನಾಟಕಕ್ಕೆ ಬರತಕ್ಕದೆಂದು ಆಯೋಗದ ಶಿಫಾರಸು ತಿಳಿಸಿದೆ.

೩. ಕರ್ನಾಟಕ ಕೇರಳ ಗಡಿವಿವಾದಕ್ಕೆ ಸಂಬಂಧಿಸಿ ಚಂದ್ರಗಿರಿ ಪಯಸ್ವಿನಿ ನದಿಗಳ ಉತ್ತರಭಾಗವನ್ನು ಅಡೂರು ಪರ್ವತ ಪ್ರದೇಶದ ದಕ್ಷಿಣ

ಭಾಗ ಮತ್ತು ಕಾದಿರಿಸಿದ ಅರಣ್ಯ ಪ್ರದೇಶ ಕೂಡ ಕೇರಳದಿಂದ ಕರ್ನಾಟಕ್ಕೆ ವರ್ಗಾಯಿಸಲು ಆಯೋಗ ತಿಳಿಸಿದೆ. ಇಲ್ಲಿ ಕರ್ನಾಟಕದ ವಾದವನ್ನು ಆಯೋಗ ಸಂಪೂರ್ಣ ಒಪ್ಪಿದೆ.

ಆಯೋಗದ ಶಿಫಾರಸು, ತಮ್ಮ ಕೇಳಿಕೆಯಷ್ಟನ್ನು ನೀಡಲಿಲ್ಲವೆಂದು ತಿಳಿದ ಕೂಡಲೇ ಮಹಾರಾಷ್ಟ್ರ ತಿರಸ್ಕರಿಸಿತು; ಕರ್ನಾಟಕ ಸರಕಾರ ಹಿಂದೆ ಯಥಾಸ್ಥಿತಿ ವಾದವನ್ನೇ ಹೇಳುತ್ತಿದ್ದರೂ ಕರ್ನಾಟಕದ ಉನ್ನತ ಪರಂಪರೆಗೆ ತಕ್ಕಂತೆ ಮಹಾಜನ ಆಯೋಗದ ಶಿಫಾರ್ಸಿಗೆ ಬದ್ಧವೆಂದು ಸ್ಪಷ್ಟಪಡಿಸಿತು. ಆಯೋಗದ ಶಿಫಾರಸನ್ನು ಒಪ್ಪಿಕೊಂಡಲ್ಲಿ ಕರ್ನಾಟಕಕ್ಕೆ ಇದೇ ರೀತಿಯ ಹಲವು ನಷ್ಟಗಳಿದ್ದರೂ ಗೌರವ ಪ್ರಶ್ನೆಯಾದ ಬೆಳಗಾವಿ ಉಳಿಯುತ್ತದೆ, ಕಾಸರಗೋಡು ದಕ್ಷಿಣಕೊಲ್ಲಾಪುರ ಹಾಗೂ ಜತ್ ತಾಲ್ಲೂಕುಗಳ ಹಲವು ಗ್ರಾಮಗಳು ಬರುತ್ತವೆ ಎಂಬುದರಿಂದ ಕರ್ನಾಟಕ ಸಮಾಧಾನಪಟ್ಟುಕೊಂಡಿದೆ. ಆಯೋಗದ ಶಿಫಾರಸು ತಮಗೆ ಅನುಕೂಲವಾಗಿದ್ದರೆ ಮಹಾರಾಷ್ಟ್ರದವರು ಆಕಾಶ-ಪಾತಾಳ ಒಂದುಮಾಡಿ ಅದನ್ನು ಜಾರಿಗೊಳಿಸಲು ಸರ್ವಪ್ರಯತ್ನ ಮಾಡುತ್ತಿದ್ದಾರೆಂದೂ ಕರ್ನಾಟಕ ಆ ಮಟ್ಟದ ದಿಟ್ಟ ಹೆಜ್ಜೆ ಇನ್ನೂ ಇಡಲಿಲ್ಲವೆಂದೂ ಇಲ್ಲಿ ಸ್ಮರಣೀಯವಾಗಿದೆ. ಆದರೂ ಕರ್ನಾಟಕದ ಎಲ್ಲಾ ಮುಖ್ಯ ಮಂತ್ರಿಗಳೂ ಮಹಾಜನ ಆಯೋಗಕ್ಕೆ ಬದ್ಧರೆಂದು ಒಪ್ಪಿದುದೂ ಇಂದಿನ ಮುಖ್ಯಮಂತ್ರಿ ಶ್ರೀ ಗುಂಡೂರಾಯರು ಮಹಾಜನ ಆಯೋಗದ ಶಿಫಾರಸನ್ನು ಜಾರಿಗೊಳಿಸಲು ಪೂರ್ತಿ ಪ್ರಯತ್ನಿಸಿ ಕಾಸರಗೋಡನ್ನು ಮರಳಿ ಪಡೆಯಲು ಕಾರ್ಯಪ್ರವೃತ್ತನಾಗುತ್ತೇನೆಂದು ಘೋಷಿಸಿದ್ದು ಗಡಿನಾಡಿನ ಕನ್ನಡಿಗರಲ್ಲಿ ಹೆಚ್ಚಿನ ಭರವಸೆಯನ್ನು ಉಂಟುಮಾಡಿರುವುದು.

ಗಡಿಪ್ರದೇಶದ ಕನ್ನಡಿಗರು ಎಷ್ಟೊಂದು ಸಾಹಸಮಯವಾದ ಹೋರಾಟ ನಡೆಸುತ್ತಾ ಬಂದರೂ ಇಂದಿಗೆ ಬೇರೆ ರಾಜ್ಯಗಳಿಗೆ ಸೇರಿ ಕಾಲುಶತಮಾನ ಕಾಲವೇ ಸಂದುಹೋದುದರಿಂದ ಅವರ ಶಕ್ತಿ ಕ್ಷೀಣಿಸುತ್ತಾ ಇದೆ; ತನ್ನ ಭಾಷೆ ಸಂಸ್ಕೃತಿಗಳನ್ನು ಉಳಿಸಿಕೊಳ್ಳುವುದು ಅವರಿಗೆ ತೀರಾ ಅಸಾಧ್ಯವಾದ ಪರಿಸ್ಥಿತಿಗೆ ಬಂದಿದೆ. ಸಹಜವಾಗಿ, ಇತರ ಭಾಷಿತ ರಾಜ್ಯಗಳು ತಮ್ಮ ರಾಜ್ಯದ್ದಲ್ಲದ ಕನ್ನಡ ಭಾಷೆಗೆ ಪ್ರೋತ್ಸಾಹ ಕೊಡುವುದು ಕಡಿಮೆಯಾಗುತ್ತಾ ಬರುತ್ತಿದೆ; ಶಿಕ್ಷಣ

ದಲ್ಲಿ, ಉದ್ಯೋಗದಲ್ಲಿ, ಸರಕಾರಿ ವ್ಯವಹಾರಗಳಲ್ಲಿ ಬೇರೆ ರಾಜ್ಯಗಳಲ್ಲಿ ಸೇರಿ ಹೋದ ಗಡಿನಾಡಿನ ಕನ್ನಡಿಗರ ಸ್ಥಿತಿ ಇಂತು ತುಂಬಾ ಶೋಚನೀಯ; ಮರಳಿ ಕರ್ನಾಟಕದೊಂದಿಗೆ ತಮ್ಮ ತಾಯ್ನೆಲದೊಂದಿಗೆ ಸೇರಬೇಕೆಂಬ ಅವರ ಸಹಜ ವಾದ ಆಸೆಯೇ ಅವರಿಗೆ ಸಂಕಟವಾಗಿರುತ್ತದೆ. ಅವರದೇ ಹುಟ್ಟೂರಲ್ಲಿ ಇಂದು ಗಡಿನಾಡ ಕನ್ನಡಿಗರು ಪರದೇಶಿಗಳಾಗಿದ್ದಾರೆ; ಅನಾಥರಾಗಿದ್ದಾರೆ.

ಗಡಿನಾಡಿನ ಕನ್ನಡಿಗರ ಅವಸ್ಥೆ ಇದಾದರೆ, ಹೊರನಾಡ ಕನ್ನಡಿಗರ ಸ್ಥಿತಿ ಇದಕ್ಕಿಂತಲೂ ಶೋಚನೀಯ. ಕನ್ನಡಿಗರು ವಿವಿಧ ವೃತ್ತಿಪ್ರವೃತ್ತಿಗಳಲ್ಲಿ ಉದ್ಯುಕ್ತರಾಗಿ ಇಂದು ಬೇರೆ ಬೇರೆ ರಾಜ್ಯಗಳಲ್ಲಿ ವಿದೇಶಗಳಲ್ಲಿಯೂ ನೆಲೆಸಿ ದ್ದಾರೆ. ಅವರು, ಅಲ್ಲಿರಲಿ, ಇಲ್ಲಿರಲಿ, ಎಲ್ಲೇ ಇರಲಿ, ಒಬ್ಬಳೇ ಕನ್ನಡತಾಯಿಯ ಮಕ್ಕಳು, ಎಲ್ಲಿದ್ದರೂ ಅವರು ಕನ್ನಡಿಗರು. ಅಭಾವದಲ್ಲಿ ಆಸಕ್ತಿ ಮನುಷ್ಯನಿಗೆ ಹೆಚ್ಚು; ಅಂತೆ ತಾಯ್ನಾಡಿಗೆ ದೂರವಿರುವ ಕನ್ನಡಿಗರಿಗೆ ತಾಯ್ನಾಡು, ತಾಯ್ನಾಡಿಗಳ ಬಗ್ಗೆ ಮಮತೆ ತುಂಬಾ. ಅವರ ಮಕ್ಕಳಿಗೆ ಅಲ್ಲಿ ಕನ್ನಡದಲ್ಲಿ ಶಿಕ್ಷಣ ಕೊಡಿಸುವ ಬಗ್ಗೆ ತುಂಬಾ ಕಷ್ಟಪಡಬೇಕಾಗುವುದು; ಓದಲು ಕನ್ನಡ ಪತ್ರಿಕೆಗಳು, ಪುಸ್ತಕಗಳು ಅವರಿಗೆ ಒದಗುವಂತೆ ಆಗಬೇಕು. ಈ ಬಗ್ಗೆ ಹೊರನಾಡ ಕನ್ನಡಿಗರು ಎಂದರೆ, ಮದ್ರಾಸು, ಬೊಂಬಾಯಿ, ಡೆಲ್ಲಿ, ಕಲ್ಕತ್ತಾ, ಇಂಗ್ಲೆಂಡು, ಅಮೆರಿಕಾ ಇತ್ಯಾದಿ ಸ್ಥಳಗಳಲ್ಲಿರುವ ಕನ್ನಡಿಗರು ಕರ್ನಾಟಕದ ಜನತೆಯ ಹಾಗೂ ಸರಕಾರದ ಪೂರ್ಣ ಸಹಕಾರ ಬೆಂಬಲ ಪಡೆಯುವಂತೆ ಆಗಬೇಕು. ಸಹಕಾರ ಆ ಬಗ್ಗೆ ಅವರು ಅಲ್ಲಿ ಸಂಘಟಿತರಾಗಿ ಕನ್ನಡ ಸಂಘಗಳನ್ನು ಸ್ಥಾಪಿಸಿ ಬೆಳೆಸ ಬೇಕು. ಆ ಮೂಲಕ ತಮ್ಮ ತಾಯ್ನಾಡಿನ, ತಾಯ್ನಾಡಿಯ ಸಂಪರ್ಕ ಬೆಳೆಸಿ ಕೊಳ್ಳಬೇಕು. ಕನ್ನಡ ತಾಯಿ ಸರ್ವಥಾ ದರಿದ್ರಳಲ್ಲ; ಕನ್ನಡದ ನೆಲ ಜಲ ಶ್ರೀಮಂತವಾದುದು; ಆ ತಾಯಿಯ ಹೃದಯವೋ ಅತ್ಯಂತ ಶ್ರೀಮಂತ; ತನ್ನ ಮಕ್ಕಳು ಎಲ್ಲೇ ಇರಲಿ ಅವರನ್ನು ಆಶೀರ್ವದಿಸುವ ಉದಾರತೆ ಆಕೆಯದು. ನಾವು ಕನ್ನಡಿಗರೆಂದು ಹೆಮ್ಮೆಪಡುವಂತೆ ಉತ್ತಮ ಜೀವನ ನಡೆಸಲು ಅವಳು ಸದಾ ವರದ ಹಸ್ತವನ್ನು ಎತ್ತಿ ಹಿಡಿದಿದ್ದಾಳೆ.

ಗಡಿನಾಡಿನವರು ಇಂದೋ ನಾಳೆಯೋ ಮರಳಿ ಕರ್ನಾಟಕಕ್ಕೆ ಬರಲೇ ಬೇಕಾದವರು; ಮಹಾಜನ ವರದಿಯನ್ನು ಪಾರ್ಲಿಮೆಂಟು ಅಂಗೀಕರಿಸಿದ ದಿನ

ಕಾಸರಗೋಡಿನ, ದಕ್ಷಿಣ ಶೊಲ್ಲಾಪುರದ ಜತ್ತಾ ತಾಲೂಕಿನ ಕನ್ನಡಿಗರು ಕರ್ನಾಟಕದ ಪ್ರಜೆಗಳೇ ಆಗುತ್ತಾರೆ. ಹೊರನಾಡಿನವರು ಕೂಡಾ ಇಂದು ಉದ್ಯೋಗದಲ್ಲಿ, ವ್ಯವಹಾರದಲ್ಲಿ ಇಂದು ಬೇರೆ ಕಡೆ ಹೋಗಿ ನೆಲಸಿದರೂ ಮತ್ತೆ ತಾಯ್ನಾಡಿಗೆ ತಮ್ಮ ಬಂಧು ಬಾಂಧವರ ಜತೆ ಸೇರಲೇಬೇಕಾದವರು. ಇವರೆಲ್ಲರ ಸಮಸ್ಯೆ ಕರ್ನಾಟಕದ್ದೇ ಸಮಸ್ಯೆ. ಕರ್ನಾಟಕ ಸರಕಾರ, ಕನ್ನಡದ ಧುರೀಣರು ಈ ಕುರಿತು ಹೆಚ್ಚಿನ ಆಸಕ್ತಿ ವಹಿಸಿಕೊಳ್ಳುವುದು ತೀರಾ ಅವಶ್ಯ.

ಕರ್ನಾಟಕ ಸರಕಾರ ಹಿಂದೆ ಗಡಿ ಸಲಹಾಸಮಿತಿಯೆಂಬ ಒಂದು ಇಲಾಖೆಯನ್ನು ತೆರೆದಿತ್ತು; ನಿವೃತ್ತ ನ್ಯಾಯಾಧೀಶರೊಬ್ಬರು ಆ ಸಮಿತಿಯ ಅಧ್ಯಕ್ಷರಾಗಿ, ಉನ್ನತ ಸರಕಾರೀ ಉದ್ಯೋಗಸ್ಥರು ಕಾರ್ಯದರ್ಶಿಗಳಾಗಿ, ಬೇರೆ ಬೇರೆ ಗಡಿಭಾಗಗಳ ಪ್ರತಿನಿಧಿಗಳ ಸದಸ್ಯರಾಗಿ ಆ ಸಮಿತಿ ಉತ್ತಮ ಕೆಲಸ ಮಾಡಿದೆ. ಮಹಾಜನ ಆಯೋಗದ ಮುಂದೆ ಅಂಕೆಸಂಖ್ಯೆಗಳ ರುಜುವಾತುಗಳನ್ನು ಮಂಡಿಸಿ, ಬೆಳಗಾವಿ ಉಳಿವಂತೆ, ಕಾಸರಗೋಡು ದಕ್ಷಿಣಶೊಲ್ಲಾಪುರ, ಜತ್ ಬರುವಂತೆ ಶಿಫಾರಸು ಆಗಲು ಮಹಾಸಾಧನೆ ಮಾಡಿದೆ. ಇಂದು ಅಂತಹ ಸಮಿತಿ ಇಲ್ಲವಾಗಿದೆ. ಗಡಿನಾಡಿನ ಹೊರನಾಡಿನ ಕನ್ನಡಿಗರ ಸಮಸ್ಯೆಗಳು ಎಷ್ಟೋ ಇವೆ. ಅಸಂಖ್ಯವಾಗಿವೆ. ಅವುಗಳನ್ನು ಸರಿಯಾದ ರೀತಿಯಲ್ಲಿ ಕರ್ನಾಟಕ ಸರಕಾರದ ಮುಂದೆ ನಿವೇದಿಸಿಕೊಳ್ಳಲು ಇಂತಹ ಒಂದು ಸಮಿತಿಯನ್ನು ಕರ್ನಾಟಕ ಸರಕಾರ ಪುನಃ ನೇಮಿಸುವುದೇ ಅವಶ್ಯ; ಆ ಸಮಿತಿ ಆಗಾಗ ಸಭೆ ಸೇರಿ ಕಳುಹಿಸಿದ ಸೂಚನೆಗಳನ್ನು ಪರಿಶೀಲಿಸಿ ಕರ್ನಾಟಕ ಸರಕಾರ ಗಡಿನಾಡಿನ ಹಾಗೂ ಹೊರನಾಡಿನ ಕನ್ನಡಿಗರ ವಿವಿಧ ಸಮಸ್ಯೆಗಳ ಯೋಗ್ಯವಾದ ಹಾಗೂ ಘಟನಾಬದ್ಧವಾದ ಪರಿಹಾರಕ್ಕೆ ಪ್ರಯತ್ನ ಮಾಡಬಹುದು. ಈ ಕುರಿತು ಈಗಾಗಲೇ ಕರ್ನಾಟಕ ಸರಕಾರದ ಮುಖ್ಯಮಂತ್ರಿಗಳಲ್ಲಿ ಮನವಿ ಮಂಡಿಸಲಾಗಿದೆ.

ಈ ಪ್ರಾರ್ಥನೆ ಫಲಕಾರಿಯಾಗಲೆಂದು ಹಾರೈಸುತ್ತಾ ವಿಶ್ವಕನ್ನಡ ಸಮ್ಮೇಳನದ ಈ ಮಹೋತ್ಸವಕ್ಕೆ ಗಡಿನಾಡಿನ ಹಾಗೂ ಹೊರನಾಡಿನ ಕನ್ನಡಿಗರ ಶುಭಾಶಯಗಳನ್ನು ತಿಳಿಸಲು ಅಭಿಮಾನಪಡುತ್ತೇನೆ.

ಪ್ರಾಚೀನ ಕರ್ಣಾಟಕ ಮತ್ತು ಹೊರನಾಡುಗಳ ಸಂಬಂಧ

— ಡಾ|| ಎ. ವಿ. ನರಸಿಂಹಮೂರ್ತಿ

ಸಾವಿರಾರು ವರ್ಷಗಳ ಕಾಲದಿಂದಲೂ ಕರ್ನಾಟಕವು ಭಾರತ ದೇಶದ ಹೊರಗಿರುವ ನಾಡುಗಳೊಡನೆಯೂ ಮತ್ತು ಭಾರತದಲ್ಲೇ ಇರುವ ಇತರ ನಾಡುಗಳೊಡನೆಯೂ ಸಂಬಂಧಗಳನ್ನು ಬೆಳೆಸಿಕೊಂಡು ಬಂದಿದೆ. ಈ ಸಂಬಂಧಗಳಿಂದಾಗಿ ರಾಜಕೀಯ, ಆರ್ಥಿಕ, ಧಾರ್ಮಿಕ, ಕಲಾತ್ಮಕ ಮತ್ತು ಸಾಂಸ್ಕೃತಿಕ ಜೀವನವು ವಿಶೇಷವಾಗಿ ಪ್ರಭಾವಿತಗೊಂಡಿದೆ. ಈ ಮಧುರ ಬಾಂಧವ್ಯದ ಇತಿಹಾಸ ರಮ್ಯವಾದುದು. ಇದರಿಂದಾಗಿ ಕರ್ನಾಟಕ ಭಾರತದ ಹೊರಗಡೆಯೂ ಮತ್ತು ಒಳಗಡೆಯೂ ವಿಶೇಷ ಖ್ಯಾತಿಯನ್ನು ಪಡೆಯಿತು, ಈ ರೀತಿಯ ಸಂಬಂಧಗಳು ಇಂದಿಗೂ ಮುಂದುವರಿದು ಕರ್ನಾಟಕಕ್ಕೆ ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿಕೊಟ್ಟಿರುವುದು ಎಲ್ಲರಿಗೂ ತಿಳಿದ ವಿಷಯವೇ ಸರಿ. ಈ ಸಂಬಂಧ ಇಂದಿನದಲ್ಲ; ನೆನ್ನೆಯದಲ್ಲ; ಸಾವಿರಾರು ವರ್ಷಗಳದ್ದು ಎಂದು ತಿಳಿಯುವುದೇ ಈ ಲೇಖನದ ಮುಖ್ಯ ಉದ್ದೇಶ.

ಸಾವಿರಾರು ವರ್ಷಗಳ ಹಿಂದೆ, ಅಂದರೆ ಮಾನವನು ಇನ್ನೂ ಹಳೆಯ ಶಿಲಾಯುಗದ ಸ್ಥಿತಿಯಲ್ಲಿದ್ದಾಗ, ಕರ್ನಾಟಕದಲ್ಲಿ ಕಲ್ಲಿನ ಕೈಗೊಡಲಿಗಳು ಬಳಕೆಯಲ್ಲಿದ್ದವು. ಈ ರೀತಿಯ ಕೊಡಲಿಗಳು ವಿಶೇಷವಾಗಿ ಆಫ್ರಿಕದಲ್ಲಿ ಬಳಕೆಯಲ್ಲಿದ್ದವು. ಆದುದರಿಂದ ಕರ್ನಾಟಕವೂ ಸೇರಿದಂತೆ ದಕ್ಷಿಣ ಭಾರತಕ್ಕೂ ಆಫ್ರಿಕ ದೇಶಕ್ಕೂ ಯಾವುದೋ ಒಂದು ರೀತಿಯ ಸಂಬಂಧವಿದ್ದಿರಬೇಕೆಂದು ಊಹಿಸಲಾಗಿದೆ. ಈ ಊಹೆಯನ್ನು ಸಮರ್ಥಿಸುವ ನಾಲ್ಕಾರು ಸಾಕ್ಷ್ಯಗಳು ಇತ್ತೀಚಿಗೆ ದೊರಕಿವೆ. ತೆಕ್ಕಲಕೋಟೆಯಲ್ಲಿ ನಡೆದ ಅಗೆತದಲ್ಲಿ, ನವಶಿಲಾಯುಗಕ್ಕೆ ಸಂಬಂಧಿಸಿದ ಸ್ಥಳದಲ್ಲಿ ರಾಗಿಯ ಕಾಳುಗಳು ದೊರಕಿವೆ. ಈ ರಾಗಿಯು ಮೂಲತಃ ಆಫ್ರಿಕದ. ಬೆಳೆ. ಇದು ನವಶಿಲಾಯುಗದ ಸಮಯದಲ್ಲಿಯೇ ಕರ್ನಾಟಕದಲ್ಲಿ ದೊರೆತಿರಬೇಕಾದರೆ, ಕರ್ನಾಟಕಕ್ಕೂ ಆಫ್ರಿಕಕ್ಕೂ ಯಾವುದೋ ಸಂಬಂಧಗಳಿದ್ದಿರಬೇಕು ಎನ್ನುವುದು ಖಚಿತವಾಗುತ್ತದೆ. ಇದೇ ರೀತಿ ಸಿಂಧೂ ಸಂಸ್ಕೃತಿಯ ನೆಲೆಗಳಾದ ಹರಪ್ಪ, ಮೊಹೆಂಜೊದಾರೊ ಮತ್ತು ಇತರ ಕಡೆಗಳಲ್ಲಿ

ದೊರಕಿರುವ ಚಿನ್ನವು, ಕರ್ನಾಟಕದ ಕೋಲಾರದ ಚಿನ್ನದ ಗಣಿಗಳಿಂದ ಅಲ್ಲಿಗೆ ಹೋಗಿರಬೇಕೆಂದು ವಿದ್ವಾಂಸರು ಸಮರ್ಥಿಸಿದ್ದಾರೆ. ಭಾರತದ ಅನೇಕ ಇತರ ಪ್ರಾಂತ್ಯಗಳು ಇನ್ನೂ ನಾಗರಿಕತೆಯ ಹೊಸ್ತಿಲಲ್ಲಿ ಇದ್ದಾಗ ಕರ್ನಾಟಕವು ಚಿನ್ನವನ್ನು ಶುದ್ಧಿಮಾಡಿ ಸಿಂಧೂ ಸಂಸ್ಕೃತಿಯ ಜನಗಳಿಗೆ ಒದಗಿಸುತ್ತಿದ್ದರೆಂದರೆ, ಕರ್ನಾಟಕಕ್ಕೆ ಹೆಮ್ಮೆ ಮಾತ್ರವಲ್ಲ; ಅದು ನಮ್ಮ ಪ್ರಾಚೀನ ಜನಗಳ ಲೋಹಜ್ಞಾನಕ್ಕೆ ಉತ್ತಮ ಉದಾಹರಣೆ. ಮೈಸೂರಿಗೆ ಸಮೀಪದಲ್ಲಿರುವ ತಿರುಮಕೂಡಲು ನರಸೀಪುರದಲ್ಲಿ ನಡೆದ ಉತ್ಖನನದಲ್ಲಿ ತಲೆಗೆ ಊರೆಯಾಗಿ ಕೊಡುವ, ಮಣ್ಣಿನಿಂದ ಮಾಡಿದ ತಲೆಊರೆಗಳು ದೊರಕಿವೆ. ಈ ರೀತಿಯ ಊರೆಗಳು ಆಫ್ರಿಕದ ನೈಲ್‌ತೀರದ ಸಂಸ್ಕೃತಿಯಲ್ಲಿ ವಿಶೇಷವಾಗಿ ಬಳಕೆಯಲ್ಲಿದ್ದವು. ಆದುದರಿಂದ ನೈಲ್‌ತೀರಕ್ಕೂ ಕರ್ನಾಟಕಕ್ಕೂ ಸಾಂಸ್ಕೃತಿಕ ಸಂಬಂಧಗಳು ಇದ್ದವೆಂದು ಊಹಿಸಬಹುದಾಗಿದೆ. ಅದೇ ರೀತಿಯಲ್ಲಿ ಬೃಹತ್‌ಶಿಲಾ ಸಮಾಧಿಗಳು ಕರ್ನಾಟಕದಲ್ಲಿ ಸಾವಿರಾರು ದೊರಕಿವೆ. ಈ ರೀತಿಯ ಶಿಲಾ ಸಮಾಧಿಗಳು ಮೆಡಿಟರೇನಿಯನ್ ಮತ್ತು ಯೂರೋಪಿನ ಅನೇಕ ಭಾಗಗಳಲ್ಲಿ ದೊರಕಿವೆ. ಕರ್ನಾಟಕದ ಶಿಲಾ ಸಮಾಧಿಗಳಿಗೂ ಯೂರೋಪಿನ ಶಿಲಾ ಸಮಾಧಿಗಳಿಗೂ ವಿಶೇಷವಾದ ಹೋಲಿಕೆಗಳಿರುವುದರಿಂದ, ಆಗಿನ ಕಾಲದಲ್ಲಿ ಕರ್ನಾಟಕವು ಈ ದೇಶಗಳೊಡನೆ ಸಂಬಂಧವಿಟ್ಟುಕೊಂಡಿದ್ದಿತೆಂಬುದು ತಿಳಿಯ ಬರುತ್ತದೆ. ಆದರೆ ಈ ಸಂಬಂಧಗಳ ವಿವರಗಳು ನಮಗೆ ಇನ್ನೂ ತಿಳಿದುಬಂದಿಲ್ಲ. ಹೆಚ್ಚಿನ ಸಂಶೋಧನೆಗಳು ನಡೆದಲ್ಲಿ ಈ ಬಾಂಧವ್ಯದ ವಿವರಗಳು ತಿಳಿದು ಬರುವಲ್ಲಿ ಸಂದೇಹವಿಲ್ಲ.

ಇವೆಲ್ಲವೂ ಇತಿಹಾಸಪೂರ್ವ ಕಾಲದ ಸಂಬಂಧಗಳಾದವು. ಇನ್ನು ಇತಿಹಾಸ ಕಾಲಕ್ಕೆ ಬಂದರೆ ಈ ರೀತಿಯ ಸಂಬಂಧಗಳು ಹೆಚ್ಚಾಗುತ್ತವೆ. ಕರ್ನಾಟಕದ ರಾಜ ಮಹಾರಾಜರು, ಮಂತ್ರಿಗಳು, ವರ್ತಕರು ಮತ್ತು ಸಾಮಾನ್ಯ ಜನಗಳೂ ಕೂಡ ಇತರ ರಾಜ್ಯಗಳೊಡನೆ ಸಂಬಂಧಗಳನ್ನು ಬೆಳೆಸಿ, ನಮ್ಮ ಇತಿಹಾಸವನ್ನು ಶ್ರೀಮಂತಗೊಳಿಸಿದ್ದಾರೆ.

ಕ್ರಿಸ್ತಶಕದ ಆದಿಯಲ್ಲಿ ಕರ್ನಾಟಕವು ಗ್ರೀಸ್ ಮತ್ತು ರೋಂ ದೇಶಗಳೊಡನೆ ಸಂಬಂಧ ಹೊಂದಿದ್ದಿತೆಂದು ಅನೇಕ ಆಧಾರಗಳಿಂದ ತಿಳಿಯುತ್ತದೆ. ಆಕ್ಸಿರಿಂಕಸ್ ಪೆಪಿರೈ ಎಂಬ ಗ್ರಂಥದಲ್ಲಿ, ಗ್ರೀಕ್ ಭಾಷೆಯ ಪ್ರಹಸನ ಒಂದರಲ್ಲಿ,

ಅನೇಕ ಕನ್ನಡ ಭಾಷೆಯ ಮಾತುಗಳಿವೆ ಎಂದು ಕೆಲವು ವಿದ್ವಾಂಸರು ವಾದಿಸಿದ್ದಾರೆ. ಆದರೆ ಇದು ಕನ್ನಡವೇ ಎನ್ನುವ ವಿಷಯ ಇನ್ನೂ ತೀರ್ಮಾನವಾಗಬೇಕಾಗಿದೆ. ಟಾಲೆಮಿ ಎನ್ನುವ ಗ್ರೀಕ್ ಚರಿತ್ರಕಾರನು, ಕ್ರಿಸ್ತಶಕದ ಆದಿಯಲ್ಲಿ ಬರೆದ ಗ್ರಂಥದಲ್ಲಿ ಕರ್ನಾಟಕದ ಹತ್ತಾರು ಪಟ್ಟಣಗಳನ್ನು ಹೆಸರಿಸಿದ್ದಾನೆ. ಅವುಗಳಲ್ಲಿ ಮುಖ್ಯವಾದವು ನಾಗರೂರು, ತಪಸಿ, ಇಂಡಿ, ಸವಡಿ, ಬಿಮ್ಮಲಗಿ, ಮುದ್ಗಲ, ಕಲ್ಕೇರಿ ಮುಂತಾದವು. ಆದರೆ ರೋಮಿನೊಡನೆ ಕರ್ನಾಟಕ ಹೊಂದಿದ್ದ ಸಂಪರ್ಕದ ವಿಷಯದಲ್ಲಿ ಯಾವ ಅನುಮಾನಕ್ಕೂ ಆಸ್ಪದವಿಲ್ಲ. ಕರ್ನಾಟಕದಲ್ಲಿ ಹೇರಳವಾಗಿ ದೊರೆಯುತ್ತಿದ್ದ ಸಂಬಾರ ಪದಾರ್ಥಗಳು ಮತ್ತು ಆಭರಣಗಳನ್ನು ತಯಾರಿಸಲು ಬೇಕಾದ ಪಚ್ಚೆ ಮುಂತಾದವು ರೋಮಿನ ಜನಗಳಿಗೆ ವಿಶೇಷವಾಗಿ ಬೇಕಾಗಿದ್ದುದರಿಂದ, ಅವರು ಕರ್ನಾಟಕಕ್ಕೆ ಬಂದು, ಇಲ್ಲಿನ ಜನಗಳಿಗೆ ರೋಮಿನ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳನ್ನು ಕೊಟ್ಟು ಪದಾರ್ಥಗಳನ್ನು ಕೊಂಡ, ಕೊಳ್ಳುತ್ತಿದ್ದರೆಂಬುದಕ್ಕೆ ಹತ್ತಾರು ಉದಾಹರಣೆಗಳು ದೊರಕಿವೆ. ಸುಮಾರು ಎರಡು ಶತಮಾನಗಳ ಕಾಲ ಈ ವ್ಯಾಪಾರ ಸಂಬಂಧ ಅವ್ಯಾಹತವಾಗಿ ನಡೆಯಿತು. ಕರಿಮೆಣಸಿನಕಾಳು ಮಲೇರಿಯ ರೋಗಕ್ಕೆ ಮದ್ದು ಎಂದು ಖ್ಯಾತವಾಗಿದ್ದುದರಿಂದ, ರೋಮಿನ ಜನಗಳು ಚಿನ್ನದ ನಾಣ್ಯಗಳನ್ನು ಕೊಟ್ಟು, ಮೆಣಸನ್ನು ಕರ್ನಾಟಕದಿಂದ ಕೊಳ್ಳುತ್ತಿದ್ದರು. ಈ ರೀತಿ ಹಡಗಿನಲ್ಲಿ ಬರುತ್ತಿದ್ದ ರೋಮಿನ ವ್ಯಾಪಾರಿಗಳು ಕರ್ನಾಟಕದಲ್ಲಿ ಅಲ್ಲಲ್ಲಿ ತಮ್ಮ ಪಾಳೆಯಗಳನ್ನು ಸ್ಥಾಪಿಸಿಕೊಂಡಿದ್ದರು. ಬೆಂಗಳೂರಿನ ಯಶವಂತಪುರ, ಎಚ್.ಎ.ಎಲ್. ವಿಮಾನ ನಿಲ್ದಾಣ, ಚಿತ್ರದುರ್ಗದ ಚಂದ್ರವಳ್ಳಿ, ಬನವಾಸಿ, ದಕ್ಷಿಣ ಕನ್ನಡ ಜಿಲ್ಲೆಯ ಬಾರಕೂರು ಮುಂತಾದ ಕಡೆಗಳಲ್ಲಿ ರೋಮನ್ ನಾಣ್ಯಗಳೂ ಮತ್ತು ರೋಮನ್ನರು ಬಳಸುತ್ತಿದ್ದ ಕಾಲಿಟಿಪ್ ರೀತಿಯ ಮಡಕೆ ಕುಡಿಕೆಗಳೂ ದೊರಕಿವೆ. ರೋಮನ್ ದೊರೆಗಳಾದ ಅಗಸ್ಟಸ್. ಟೈಬೀರಿಯಸ್, ಕ್ಯಾಲಿಗುಲ ಮುಂತಾದವರ ಚಿನ್ನದ ನಾಣ್ಯಗಳು ವಿಶೇಷವಾಗಿ ದೊರಕಿವೆ. ಈ ಎಲ್ಲ ಅಂಶಗಳನ್ನೂ ಪರಿಶೀಲಿಸಿದರೆ, ಕರ್ನಾಟಕಕ್ಕೂ ರೋಂ ದೇಶಕ್ಕೂ ಇದ್ದ ವ್ಯಾಪಾರ ಸಂಬಂಧ ಚೆನ್ನಾಗಿ ಗೊತ್ತಾಗುತ್ತದೆ.

ಕರ್ನಾಟಕಕ್ಕೂ ದೂರ ಪ್ರಾಚ್ಯದೇಶಗಳಿಗೂ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳಿದ್ದುವು ಎಂಬುದು ಇತ್ತೀಚಿನ ಸಂಶೋಧನೆಗಳಿಂದ

ತಿಳಿದುಬಂದಿದೆ. ಬಾದಾಮಿ ಚಾಲುಕ್ಯ ರಾಜರುಗಳ ಶಾಸನಗಳಲ್ಲಿ ಅವರು ಖ್ಮರ್‌ದೇಶ, ಅಂದರೆ ಈಗಿನ ಕಾಂಬೋಡಿಯ ದೇಶದವರೆಗೂ ಹೋಗಿ ಅಲ್ಲಿನ ರಾಜಕೀಯದಲ್ಲಿ ಭಾಗವಹಿಸಿದ್ದರೆಂದು ಹೇಳಲಾಗಿದೆ. ಚಾಲುಕ್ಯ ವಿಕ್ರಮಾದಿತ್ಯ, ವಿನಯಾದಿತ್ಯ ಮುಂತಾದ ರಾಜರು ಕಾಂಬೋಡಿಯ ರಾಜ್ಯಕ್ಕೆ ಹೋಗಿ ಅಲ್ಲಿನ ರಾಜರುಗಳಿಂದ ಕಪ್ಪಕಾಣಿಕೆಗಳನ್ನು ವಸೂಲು ಮಾಡಿಕೊಂಡು ಬರುತ್ತಿದ್ದರು. ದೂರಪ್ರಾಚ್ಯದ ಅನೇಕ ರಾಜ್ಯಗಳಲ್ಲಿ ದೊರಕಿರುವ ಶಾಸನಗಳಲ್ಲಿ ಕಂಡುಬರುವ ಲಿಪಿಯನ್ನು ಗಮನಿಸಿದರೆ, ಆ ಲಿಪಿಯು ಚಾಲುಕ್ಯ ಕಾಲದ ಕರ್ನಾಟಕ ಲಿಪಿಯನ್ನು ಹೋಲುತ್ತದೆ. ಚಾಲುಕ್ಯರ ಕೆಲವು ನಾಣ್ಯಗಳೂ ಅಲ್ಲಿ ದೊರಕಿರುವುದು ಗಮನಾರ್ಹವಾದ ಸಂಗತಿ. ಜಾವದ್ವೀಪದಲ್ಲಿರುವ ಪ್ರಾಚೀನ ದೇವಾಲಯಗಳಾದ ಚಂಡಿ ಕಲಶನ್, ಚಂಡಿ ಜಾಗೊ ಮುಂತಾದವು ಚಾಲುಕ್ಯದೇವಾಲಯಗಳನ್ನು ವಿಶೇಷವಾಗಿ ಹೋಲುತ್ತವೆ. ಅಲ್ಲಿನ ಶಿಲ್ಪಗಳೂ ಚಾಲುಕ್ಯ ಶಿಲ್ಪಗಳಿಗೆ ಬಲು ಸಮೀಪವಾಗಿವೆ. ಜಾವದಲ್ಲಿ ಆಳಿದ ರಾಜರುಗಳ ಹೆಸರುಗಳಾದ ಉತ್ತುಂಗ, ವಿಷ್ಣುವರ್ಧನ, ತ್ರಿಭುವನ ಮುಂತಾದವು ಕರ್ನಾಟಕದಲ್ಲಿ ಆಳಿದ ರಾಜರುಗಳ ಹೆಸರು ಇಲ್ಲ ಬಿರುದುಗಳೇ. ಇಷ್ಟೇ ಅಲ್ಲದೆ ಮಲಯ ಭಾಷೆಯ ಕೆಲವು ಪದಗಳು ಕನ್ನಡ ಭಾಷೆಯ ಕೆಲವು ಪದಗಳಿಗೆ ಸಮಾನವಾಗಿ ಕಾಣುತ್ತವೆ. ಈ ಎಲ್ಲ ಅಂಶಗಳನ್ನೂ ಗಮನಿಸಿದಾಗ, ಕರ್ನಾಟಕಕ್ಕೂ ಮಲಯ, ಜಾವ, ಕಾಂಬೋಡಿಯ ಮುಂತಾದ ದೂರ ಪ್ರಾಚ್ಯದ ದೇಶಗಳಿಗೂ ಇದ್ದ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧ ವ್ಯಕ್ತವಾಗುತ್ತದೆ.

ಕರ್ನಾಟಕದ ರಾಜರು ಶೂರರೂ ಧೀರರೂ ಮಾತ್ರವಲ್ಲದೆ ತಮ್ಮ ರಾಜಕೀಯ ಮತ್ತು ಸಾಂಸ್ಕೃತಿಕ ಪ್ರಭಾವಗಳನ್ನು ಭಾರತದ ಇತರ ಪ್ರಾಂತಗಳ ಮೇಲೆ ಬೀರಲು ಉತ್ಸಾಹ ತೋರಿದರು. ಇದರಿಂದಾಗಿ ಭಾರತದ ಎಲ್ಲ ಪ್ರಾಂತಗಳ ಮೇಲೂ ಕರ್ನಾಟಕ ಸಂಬಂಧಗಳನ್ನು ಹೊಂದಲು ಅವಕಾಶವಾಯಿತು. ಹಿಮಾಲಯದ ಮಡಿಲಿನಲ್ಲಿರುವ ಪ್ರಾಚೀನ ಮಿಥಿಲಾನಗರ ಕರ್ನಾಟಕದೊಂದಿಗೆ ಸುಮಾರು ಹನ್ನೊಂದನೆಯ ಶತಮಾನದಲ್ಲಿ ರಾಜಕೀಯ ಸಂಬಂಧವನ್ನು ಹೊಂದಿತ್ತು. ನಾನ್ಯದೇವ ಎಂಬ ರಾಜನು ಕರ್ನಾಟಕದಿಂದ ೧೦೯೭ರಲ್ಲಿ ಹೊರಟು ಈಗಿನ ತಿರಹತ್‌ನಲ್ಲಿ, ಅಂದರೆ ಪ್ರಾಚೀನ ಮಿಥಿಲೆಯಲ್ಲಿ ರಾಜ್ಯ ಸ್ಥಾಪಿಸಿದನು. ಈಗಿನ ಚಂಪಾರಣ್ ಜಿಲ್ಲೆಯ ಸಿಮರಾಮಪುರ ಅವನ

ರಾಜಧಾನಿಯಾಗಿತ್ತು. ಇವನು ನೇಪಾಳವನ್ನೂ ತನ್ನ ವಶಮಾಡಿಕೊಂಡನು. ಇವನ ಅನಂತರ ಗಂಗದೇವ, ನೃಸಿಂಹ, ರಾಮಸಿಂಹ, ಶಕ್ತಿಸಿಂಹ, ಭೂಪಾಲಸಿಂಹ ಮತ್ತು ಹರಿಸಿಂಹ ಎಂಬ ರಾಜರು ಆಳಿದರು. ಗಂಗದೇವನ ತಮ್ಮನಾದ ಮಲ್ಲದೇವನು ನೇಪಾಳವನ್ನು ಗೆದ್ದುಕೊಂಡು ಮಲ್ಲರಾಜಮನೆತನವನ್ನು ಅಲ್ಲಿ ಸ್ಥಾಪಿಸಿದನು. ಆದರಿಂದ ನೇಪಾಳದಲ್ಲಿಯೂ ಕರ್ನಾಟಕ ರಾಜ್ಯಸ್ಥಾಪನೆಯಾದಂತೆ ಆಯಿತು. ಈ ರಾಜಕೀಯ ಸಂಬಂಧವೇ, ನೇಪಾಳದ ದೇವಾಲಯಗಳೂ ದಕ್ಷಿಣ ಕನ್ನಡ ಜಿಲ್ಲೆಯ ದೇವಾಲಯಗಳೂ ಒಂದೇ ಶೈಲಿಯಲ್ಲಿ ಇರಲು ಕಾರಣ ಎಂಬುದು ಕೆಲವು ವಿದ್ವಾಂಸರ ವಾದ.

ಕರ್ನಾಟಕದ ರಾಜರು ಈಗಿನ ಮಧ್ಯಪ್ರದೇಶದೊಡನೆಯೂ ರಾಜಕೀಯ ಸಂಬಂಧಗಳನ್ನು ಬೆಳೆಸಿಕೊಂಡಿದ್ದರು. ಇಂದಿನ ಬಸ್ತರ್ ಜಿಲ್ಲೆಯನ್ನು ಒಳಗೊಂಡಂತೆ ವಿಶೇಷವಾಗಿ, ಸಿಂದ ವಂಶದ ಅರಸರು ಚಿತ್ರಕೂಟದಲ್ಲಿ ರಾಜ್ಯಸ್ಥಾಪನೆ ಮಾಡಿದರು. ಇವರನ್ನು ಛಿಂದಕನಾಗರೂ ಎಂದು ಕರೆಯಬಹುದು. ಕರ್ನಾಟಕದಲ್ಲಿ ಆಳಿದ ಸಿಂದವಂಶದ ರಾಜರ ಸಂಬಂಧಿಗಳೇ ಆದ ಈ ಬಸ್ತರ್ ಜಿಲ್ಲೆಯ ಸಿಂದರಾಜರ ಹೆಸರುಗಳೂ ಗಮನಾರ್ಹ. ಜಗದೇಕಭೂಷಣ, ಸೋಮೇಶ್ವರ, ಕನ್ನರ, ನರಸಿಂಹ, ಜಯಸಿಂಹ ಮುಂತಾದ ಈ ರಾಜರುಗಳ ಹೆಸರುಗಳು ಕರ್ನಾಟಕ ಇತಿಹಾಸಕ್ಕೆ ಪರಿಚಯವಾದವುಗಳೇ ಆಗಿವೆ. ಕರ್ನಾಟಕದಿಂದ ಮಧ್ಯಪ್ರದೇಶಕ್ಕೆ ವಲಸೆ ಹೋದ ಈ ರಾಜರುಗಳು ಸುಮಾರು ಹದಿನಾಲ್ಕನೆಯ ಶತಮಾನದವರೆಗೆ ಅಲ್ಲಿ ಆಳಿ ಕರ್ನಾಟಕದ ಪತಾಕೆಯನ್ನು ಮಧ್ಯಪ್ರದೇಶದಲ್ಲಿ ಹಾರಿಸಿದರು.

ಕರ್ನಾಟಕಕ್ಕೂ ಒರಿಸ್ಸ ರಾಜ್ಯಕ್ಕೂ ವಿಶೇಷ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳಿವೆ. ಈಗಿನ ಸಂಭಲ್‌ಪುರ ಜಿಲ್ಲೆಯಲ್ಲಿ ಕರ್ನಾಟಕದವರಾದ ರಾಷ್ಟ್ರಕೂಟರು ಆಳುತ್ತಿದ್ದರು. ಇವಕ್ಕೆ ರಾಜಧಾನಿ ಈಗಿನ ಚಿರಘಡ. ಸುಮಾರು ಹನ್ನೆರಡನೆಯ ಶತಮಾನದಲ್ಲಿ ಈ ರಾಜರು ಅಲ್ಲಿ ಆಳಿದರು. ಗಂಜಾಂ ಜಿಲ್ಲೆಯ ಪರ್ಲಾಕಮಿಡಿ ಎಂಬಲ್ಲಿ ಕರ್ನಾಟಕದ ತೈಲಪವಂಶೀಯರು ರಾಜ್ಯಭಾರ ಮಾಡುತ್ತಿದ್ದರು. ಇದರಲ್ಲಿ ರಾಣಕ ರಾಮದೇವನು ಪ್ರಮುಖನಾದವನು. ಇವನು ತೈಲಪ ರಾಜನ ಸೋದರ ಸಂಬಂಧಿ ಇರಬಹುದೆಂದು ಊಹಿಸಲಾಗಿದೆ. ಗಂಜಾಂ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಕದಂಬ ವಂಶದ ರಾಜರು

ಆಳುತ್ತಿದ್ದರು. ಬನವಾಸಿಯ ಕದಂಬರಂತೆ ಇವರೂ ತಮ್ಮ ಈ ಪ್ರದೇಶವನ್ನು ಜಯಂತೀಪುರ ಎಂದೇ ಕರೆದರು. ಈ ಮನೆತನದ ಮೂಲಪುರುಷ ರಾಣಕ ನಿಯಾರ್ಣವ. ಇವನ ಅನಂತರ ನಾಲ್ಕು ಜನ ರಾಜರುಗಳು ಆಳಿದರು.

ಇಂದಿನ ಬಂಗಾಲದ ಪ್ರದೇಶದಲ್ಲಿಯೂ ಕರ್ನಾಟಕ ವಂಶಕ್ಕೆ ಸೇರಿದ ರಾಜರು ಹನ್ನೊಂದನೆಯ ಶತಮಾನದಲ್ಲಿ ರಾಜ್ಯ ಸ್ಥಾಪನೆ ಮಾಡಿದ್ದರು. ಇವರು ಸೇನರು ಎಂದು ಪ್ರಸಿದ್ಧರಾಗಿದ್ದರೂ ಇವರು ಕರ್ನಾಟಕದವರೆಂದು ತಮ್ಮ ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಇವರು ಮೂಲತಃ ಧಾರವಾಡ ಜಿಲ್ಲೆಯವರು. ಯಾವುದೋ ದಂಡಯಾತ್ರೆಯ ಸಮಯದಲ್ಲಿ ಬಂಗಾಲಕ್ಕೆ ಹೋಗಿ, ಅಲ್ಲಿ ಅನುಕೂಲವಾದ ವಾತಾವರಣ ದೊರಕಿದಾಗ, ರಾಢಾ ಎಂಬ ಪ್ರಾಂತದಲ್ಲಿ ಪ್ರಬಲರಾಗಿ ತಮ್ಮ ಆಳ್ವಿಕೆಯನ್ನು ಸ್ಥಾಪಿಸಿದರು. ಈ ಸೇನ ರಾಜರು ಕರ್ನಾಟಕದ ರಾಜರುಗಳಂತೆ ಪರಮೇಶ್ವರ, ಪರಮಭಟ್ಟಾರಕ, ಶರಣಾಗತ ವಜ್ರಪಂಜರ ಮುಂತಾದ ಬಿರುದುಗಳನ್ನು ಧರಿಸಿದ್ದರು. ಹನ್ನೊಂದನೆಯ ಶತಮಾನದಿಂದ ಹದಿಮೂರನೆಯ ಶತಮಾನದವರೆಗೆ ಆಳಿದ ಈ ರಾಜರಲ್ಲಿ ಸಾಮಂತಸೇನ, ಬಲ್ಲಾಳಸೇನ, ಲಕ್ಷ್ಮಣಸೇನ ಮುಖ್ಯರಾದವರು. ಒಟ್ಟಿನಲ್ಲಿ ಕರ್ನಾಟಕದಿಂದ ಹೊರಗೆ ಹೋದ ಇವರು ತಮ್ಮ ಶೌರ್ಯ, ಪರಾಕ್ರಮ ಮತ್ತು ಸಾಂಸ್ಕೃತಿಕ ಸಾಧನೆಗಳಿಂದ ಬಂಗಾಲದ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಇತಿಹಾಸದಲ್ಲೇ ಖ್ಯಾತರಾಗಿದ್ದಾರೆ.

ಬಂಗಾಲದಲ್ಲಿ ಆಳಿದ ಪಾಲ ವಂಶದ ರಾಜರು ಕರ್ನಾಟಕದೊಡನೆ ನಿಕಟ ಬಾಂಧವ್ಯ ಹೊಂದಿದ್ದರು. ಬಾದಾಮಿ ಚಾಲುಕ್ಯರ ಅನಂತರ ರಾಷ್ಟ್ರಕೂಟರು ಕರ್ನಾಟಕ ಬಲವನ್ನು ಅಭಿವೃದ್ಧಿಗೊಳಿಸಿದರು. ಆಗಿನ ಕಾಲದಲ್ಲಿ ಕರ್ನಾಟಕ ಬಲ ಎಂದರೆ ಶತ್ರುಗಳು ಹೆದರಿ ನಡುಗುತ್ತಿದ್ದರೆಂದು ತಿಳಿದು ಬರುತ್ತದೆ. ಅಂದರೆ ಕರ್ನಾಟಕದ ಜನಗಳ ಶೌರ್ಯ, ಧೈರ್ಯ, ಮತ್ತು ಸಾಹಸ ಮೇಲ್ಮಟ್ಟದ್ದಾಗಿ ಇದ್ದಿತು. ಇದನ್ನು ಗಮನಿಸಿದ ಪಾಲರು ಅನೇಕ ಕರ್ನಾಟಕ ಸಾಮಂತರನ್ನು ತಮ್ಮ ಸೈನ್ಯದಲ್ಲಿ ಸೇರಿಸಿಕೊಂಡದ್ದು ಮಾತ್ರವಲ್ಲದೆ ರಾಷ್ಟ್ರಕೂಟರೊಡನೆ ವಿವಾಹ ಸಂಬಂಧಗಳನ್ನು ಬೆಳೆಸಿದರು. ಪಾಲರಲ್ಲಿ ಖ್ಯಾತನಾದ ದೊರೆ ಧರ್ಮ ಪಾಲನು ರಾಷ್ಟ್ರಕೂಟ ದೊರೆ ಪರಬಲನ ಮಗಳಾದ ರಣ್ಣಾದೇವಿಯನ್ನು ವಿವಾಹವಾಗಿದ್ದನು. ಇವರ ಮಗನಾದ ದೇವಪಾಲನು ರಾಷ್ಟ್ರಕೂಟರ ಸಹಾಯ

ದಿಂದ ರಾಜ್ಯ ವಿಸ್ತಾರ ಮಾಡಿದನು. ಅನಂತರವೂ ರಾಷ್ಟ್ರಕೂಟ ಸಾಮಂತರು ಬಂಗಾಲದಲ್ಲಿ ತಮ್ಮ ರಾಜಕೀಯ ಪ್ರಭಾವವನ್ನು ಬೆಳೆಸಿಕೊಂಡರು.

ಕನ್ನಡದ ರಾಜರುಗಳು ಉತ್ತರಭಾರತದವರೆಗೆ ಅನೇಕ ಸಾರಿ ದಂಡಯಾತ್ರೆಗಳನ್ನು ನಡೆಸಿದುದು ಪ್ರಖ್ಯಾತವಾದ ವಿಷಯ. ಚಾಲುಕ್ಯ ಇಮ್ಮಡಿ ಪುಲಿಕೇಶಿಯು ಕನೂಜಿನ ಹರ್ಷನನ್ನು ಸೋಲಿಸಿ, ಆಗಿನ ಇತಿಹಾಸದಲ್ಲಿ ಕರ್ನಾಟಕಕ್ಕೆ ಒಂದು ಹೊಸ ಆಯಾಮವನ್ನು ತಂದುಕೊಟ್ಟ ವಿಚಾರ, ಸುಪ್ರಸಿದ್ಧವಾಗಿದೆ. ಇದೇ ರೀತಿ ಅನೇಕ ರಾಷ್ಟ್ರಕೂಟ ಚಕ್ರವರ್ತಿಗಳು ಗಂಗಾನದಿಯವರೆಗೂ ದಂಡಯಾತ್ರೆಯನ್ನು ಕೈಗೊಂಡು ಬಂದು ಉತ್ತರಭಾರತದ ರಾಜರುಗಳಿಗೆ ಕರ್ನಾಟಕದ ಶೌರ್ಯ, ಪರಾಕ್ರಮಗಳ ಪರಿಚಯ ಮಾಡಿಕೊಟ್ಟರು. ಆದರೆ ಕನೂಜಿನಲ್ಲಿ ರಾಷ್ಟ್ರಕೂಟ ಅರಸರು ರಾಜ್ಯಭಾರ ಮಾಡಿದ್ದು ಅಷ್ಟಾಗಿ ತಿಳಿಯದ ವಿಷಯ. ಹನ್ನೊಂದನೆಯ ಶತಮಾನದಿಂದ ಆರಂಭವಾಗಿ ಸುಮಾರು ಇನ್ನೂರು ವರ್ಷಕಾಲ ಈ ರಾಷ್ಟ್ರಕೂಟರು ಕನೂಜಿನಲ್ಲಿ ಆಳಿದರು. ಇವರ ಮೂಲಪುರುಷ ರಾಷ್ಟ್ರಕೂಟ ಚಂದ್ರ. ಇವನ ಅನಂತರ ವಿಗ್ರಹಪಾಲ, ಭುವನಪಾಲ, ಗೋಪಾಲ ಮುಂತಾದ ರಾಜರುಗಳು ಆಳಿ ಕನೂಜಿನಲ್ಲಿ ಖ್ಯಾತರಾದರು.

ಗುಜರಾತಿಗೂ ಕರ್ನಾಟಕಕ್ಕೂ ನಿಕಟ ಸಂಬಂಧಗಳಿದ್ದುದು ಎಲ್ಲರಿಗೂ ತಿಳಿದಿರುವ ವಿಷಯ. ರಾಷ್ಟ್ರಕೂಟ ದೊರೆ ಧ್ರುವನ ಮಗನಾದ ಇಂದ್ರನು ಸುಮಾರು ೮೦೦ರಲ್ಲಿ ಗುಜರಾತಿಗೆ ಹೋಗಿ ಆಳಲು ಪ್ರಾರಂಭಿಸಿದನು. ಗುಜರಾತಿನ ರಾಷ್ಟ್ರಕೂಟ ವಂಶ ಮತ್ತು ಕರ್ನಾಟಕದ ವಂಶ ಪರಸ್ಪರ ರಾಜಕೀಯ ಸಂಬಂಧಗಳನ್ನು ಇಟ್ಟುಕೊಂಡಿದ್ದರು. ಹಾಗೆ ನೋಡುವುದಾದರೆ ಆಗಿನ ಕಾಲದಲ್ಲಿ ಗುಜರಾತು ಕರ್ನಾಟಕದ ಒಂದು ಭಾಗವೇ ಆಗಿದ್ದಂತೆ ತೋರುತ್ತದೆ. ಇಂದ್ರನ ಅನಂತರ ಗೋವಿಂದ, ಧ್ರುವ, ಅಕಾಲವರ್ಷ ಮುಂತಾದ ರಾಜರು ರಾಜ್ಯಭಾರ ಮಾಡಿದರು. ಇದೇ ರೀತಿಯಲ್ಲಿ ಗುಜರಾತಿನ ಲಾಟಮಂಡಲದಲ್ಲಿ ಚಾಲುಕ್ಯರು ಕರ್ನಾಟಕದಿಂದ ಹೋಗಿ ಸ್ವಲ್ಪ ಕಾಲ ರಾಜ್ಯಭಾರ ಮಾಡಿದುದೂ ತಿಳಿದುಬಂದಿದೆ. ಚಾಲುಕ್ಯ ಮಹಾರಾಜ ತೈಲಪನು ತನ್ನ ಸೇನಾಧಿಪತಿಯಾದ ಬಾರಪನನ್ನು ಗುಜರಾತಿನ ಲಾಟಮಂಡಲಕ್ಕೆ ಕಳುಹಿಸಿದನು. ಅವನು ಸ್ವಲ್ಪ ಕಾಲ ಸ್ವತಂತ್ರವಾಗಿ ಆಳಿದನು. ನಂತರ ಅವನ

ಮಗನಾದ ಗೊಗ್ಗಿಯು ಚಾಲುಕ್ಯ ಸತ್ಯಾಶ್ರಯನ ಸಹಾಯದಿಂದ ರಾಜ್ಯ ವಿಸ್ತರಣೆ ಮಾಡಿದನು. ಗೊಗ್ಗಿಯ ನಂತರ ಕೀರ್ತಿರಾಜ, ವತ್ಸ ಮತ್ತು ತ್ರಿಲೋಚನ ರಾಜರು ಆಳಿದರು. ಸುಮಾರು ಹನ್ನೊಂದನೆಯ ಶತಮಾನದ ಮಧ್ಯಭಾಗದಲ್ಲಿ ಈ ಚಾಲುಕ್ಯರು ಗುಜರಾತಿನ ಚಾಳುಕ್ಯರಿಂದ ಸೋಲಿಸಲ್ಪಟ್ಟರು. ಒಟ್ಟಿನಲ್ಲಿ ಈ ರಾಷ್ಟ್ರಕೂಟ ಮತ್ತು ಚಾಲುಕ್ಯ ಮನೆತನಗಳು ಕರ್ನಾಟಕಕ್ಕೂ ಗುಜರಾತಿಗೂ ಸಂಬಂಧಗಳನ್ನು ಏರ್ಪಡಿಸಿದರು. ಸೌರಾಷ್ಟ್ರದಲ್ಲಿಯೂ ಚಾಲುಕ್ಯರ ಶಾಖೆಯೊಂದು ರಾಜ್ಯಭಾರ ಮಾಡಿದುದು ಈಚೆಗೆ ತಿಳಿದು ಬಂದಿದೆ. ಎಂಟನೆಯ ಶತಮಾನದಿಂದ ಹತ್ತನೆಯ ಶತಮಾನದವರೆಗೆ ಆಳಿದ ಈ ಸೌರಾಷ್ಟ್ರದ ಚಾಲುಕ್ಯರಲ್ಲಿ ಮುಖ್ಯನಾದವನು ಅವನಿವರ್ಮ, ಬಲವರ್ಮ ಮತ್ತು ಯೋಗವರ್ಮ.

ಈಗಿನ ಮಹಾರಾಷ್ಟ್ರ ಪ್ರಾಚೀನ ಕಾಲದಲ್ಲಿ ಕರ್ನಾಟಕದ ಒಂದು ಅವಿಭಾಜ್ಯ ಅಂಗವಾಗಿದ್ದಿತೆಂದರೆ ಅತಿಶಯೋಕ್ತಿಯಲ್ಲ. ಕವಿರಾಜಮಾರ್ಗದ ಕರ್ತೃ ಹೇಳಿರುವಂತೆ ಕಾವೇರಿಯಿಂದ ಗೋದಾವರೀ ತೀರದವರೆಗಿನ ಪ್ರದೇಶಗಳೆಲ್ಲವೂ ಕನ್ನಡನಾಡಿಗೆ ಸೇರಿದ್ದವು. ಬಾದಾಮಿ ಚಾಲುಕ್ಯ ಚಕ್ರವರ್ತಿ ಇಮ್ಮಡಿ ಪುಲಿಕೇಶಿಯ ರಾಜ್ಯದಲ್ಲಿ ಮಹಾರಾಷ್ಟ್ರದ ಅನೇಕ ಭಾಗಗಳು ಸೇರಿದ್ದವು. ಆನಂತರ ಕಾಲದಲ್ಲಿ ಸೇವುಣರು ಅಥವಾ ಯಾದವರು ಮಹಾರಾಷ್ಟ್ರದ ಬಹುಭಾಗಗಳನ್ನು ತಮ್ಮ ಆಧಿಪತ್ಯಕ್ಕೆ ಒಳಪಡಿಸಿಕೊಂಡು ದೇವಗಿರಿಯನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಹದಿನಾಲ್ಕನೆಯ ಶತಮಾನದ ಮಧ್ಯಭಾಗದವರೆಗೆ ಆಳಿದರು. ಭಿಲ್ಲಮ, ಸಿಂಘಣ, ಮಹಾದೇವ, ರಾಮಚಂದ್ರ ಮುಂತಾದ ಸೇವುಣ ಮಹಾರಾಜರು ನೂರಾರು ಕನ್ನಡ ಶಾಸನಗಳನ್ನು ಬರೆಯಿಸಿ ಮಹಾರಾಷ್ಟ್ರದ ಅನೇಕ ಭಾಗ ಗಳಲ್ಲಿ ನೆಡಿಸಿದರು. ಇಂದಿಗೂ ಈ ಕನ್ನಡ ಶಾಸನಗಳು, ಕನ್ನಡಿಗರ ಶೌರ್ಯವನ್ನು ಸಾರಿ ಹೇಳುತ್ತ ಮೂಕ ಸಾಕ್ಷಿಗಳಾಗಿ ನಿಂತಿವೆ.

ತಮಿಳುನಾಡು ಮತ್ತು ಕರ್ನಾಟಕ ಬಲು ಪ್ರಾಚೀನ ಕಾಲದಿಂದ ಸಂಬಂಧಗಳನ್ನು ಹೊಂದಿದ್ದವು. ಶಿಲಾಯುಗದ ಕಾಲದಿಂದ ಈ ಸಂಬಂಧಗಳನ್ನು ನಾವು ಗಮನಿಸಬಹುದು. ಚಾಲುಕ್ಯರು, ಪಲ್ಲವರು, ಚೋಳರು, ಹೊಯ್ಸಳರು ಪರಸ್ಪರ ರಾಜಕೀಯ ಸಂಬಂಧಗಳನ್ನು ಹೊಂದಿದ್ದರು. ಹತ್ತಾರು

ಚೋಳ ದೇವಾಲಯಗಳು ಕರ್ನಾಟಕದಲ್ಲಿ ಕಂಡುಬಂದರೆ, ಚಾಲುಕ್ಯ ವಾಸ್ತು ಶೈಲಿಯ ಪ್ರಭಾವ ತಮಿಳುನಾಡಿನ ದೇವಾಲಯಗಳಲ್ಲಿ ಕಾಣಬರುತ್ತದೆ. ಬಾದಾಮಿ ಚಾಲುಕ್ಯರಿಗೂ ಪಲ್ಲವರಿಗೂ ನಡೆದ ಯುದ್ಧಗಳಿಂದ ವಾಸ್ತುಶಿಲ್ಪದಲ್ಲಿ ವಿಶೇಷ ಪ್ರಭಾವ ಉಂಟಾಯಿತು. ವಿಜಯನಗರ ಕಾಲದಲ್ಲಂತೂ ಕರ್ನಾಟಕವೇ ದಕ್ಷಿಣಭಾರತವಾಗಿ ಪರಿಣಮಿಸಿತು.

ಆಂಧ್ರ ಮತ್ತು ಕರ್ನಾಟಕಗಳ ಸಂಬಂಧ ಇತಿಹಾಸ ಕಾಲದಿಂದ ಕಾಣಬರುತ್ತದೆ. ಸಾತವಾಹನ ರಾಜರು ಬಳ್ಳಾರಿಯ ಪ್ರದೇಶದಿಂದ ಕೃಷ್ಣಾನದಿಯ ಕಡೆಗೆ ವಲಸೆ ಹೋಗಿ, ಕರ್ನಾಟಕದ ಇತಿಹಾಸದ ಕಾಲದ ಸಂಸ್ಕೃತಿಗೆ ನಾಂದಿಯಾದರು. ಚಾಲುಕ್ಯ ಇಮ್ಮಡಿ ಪುಲಿಕೇಶಿಯು ಆಂಧ್ರದ ವೆಂಗಿಯನ್ನು ತನ್ನ ವಶಕ್ಕೆ ತೆಗೆದುಕೊಂಡುದಲ್ಲದೆ ತನ್ನ ಸೋದರ ವಿಷ್ಣುವರ್ಧನನ್ನು ಪ್ರಾಂತಾಧಿಕಾರಿಯಾಗಿ ನೇಮಿಸಿದನು. ಅನಂತರ ಈ ವಂಶವು ವೆಂಗಿಯ ಚಾಲುಕ್ಯರು ಎಂದು ಖ್ಯಾತವಾಯಿತು. ಬಾದಾಮಿ ಚಾಲುಕ್ಯ ಮತ್ತು ಕಲ್ಯಾಣದ ಚಾಲುಕ್ಯರ ಅಧಿಪತ್ಯಕ್ಕೆ ಆಂಧ್ರ ದೇಶದ ಅನೇಕ ಭಾಗಗಳು ಒಳಗೊಂಡಿದ್ದವು. ಇಂದಿಗೂ ನೂರಾರು ಕನ್ನಡ ಶಾಸನಗಳು ಇಲ್ಲಿ ದೊರಕಿವೆ. ಚಾಲುಕ್ಯ ಶೈಲಿಯ ಹತ್ತಾರು ದೇವಾಲಯಗಳು ಇಂದಿಗೂ ಆಂಧ್ರದೇಶದಲ್ಲಿ ಕಂಗೊಳಿಸುತ್ತಿದ್ದು ಒಂದಾನೊಂದು ಕಾಲದಲ್ಲಿ ಕರ್ನಾಟಕದ ರಾಜರು ಈ ಪ್ರದೇಶಗಳನ್ನು ಆಳಿದುದಕ್ಕೆ ಸಾಕ್ಷಿ ಹೇಳುತ್ತಿವೆ. ಹೊಯ್ಸಳ ವಾಸ್ತುಶಿಲ್ಪದ ಪ್ರಭಾವವನ್ನು ಆಂಧ್ರದ ಕಾಕತೀಯ ವಾಸ್ತುಶಿಲ್ಪವನ್ನು ಸುಲಭವಾಗಿ ಗುರುತಿಸಬಹುದು. ವಿಜಯನಗರದ ಕಾಲದಲ್ಲಿ ಆಂಧ್ರ ಮತ್ತು ಕರ್ನಾಟಕ ಎಂಬ ವ್ಯತ್ಯಾಸವೇ ಮಾಯವಾಗಿ ಕರ್ನಾಟಕ ರಾಜ್ಯವಾಗಿದ್ದಿತು.

ವಿಜಯನಗರದ ಕಾಲದಲ್ಲಿ ಕರ್ನಾಟಕ ದಕ್ಷಿಣಭಾರತವೇ ಆಗಿ ಬದಲಾವಣೆ ಹೊಂದಿದ್ದು ಮಾತ್ರವಲ್ಲದೆ, ಇತರ ಎಲ್ಲ ರಾಜ್ಯಗಳೊಂದಿಗೂ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿದ್ದಿತು. ವಿಜಯನಗರದ ಅರಸರು ಭಾರತದ ಹೊರಗೂ ತಮ್ಮ ಸಂಬಂಧಗಳನ್ನು ಹೊಂದಿದ್ದರು. ನಾಲ್ಕಾರು ಜನ ವಿದೇಶೀಯ ಯಾತ್ರಿಕರು ವಿಜಯನಗರವನ್ನು ಸಂದರ್ಶಿಸಿ ತಮ್ಮ ಮೆಚ್ಚುಗೆಯನ್ನು ಸೂಚಿಸಿದ್ದಾರೆ. ನೂನಿಜ್, ಪೇಜ್, ಅಬ್ದುಲ್‌ರಜಾಕ್ ಮುಂತಾದವರ ಬರವಣಿಗೆಯಿಂದ ವಿಜಯನಗರದ ರಾಜರು ಭಾರತದ ಹೊರಗಡೆ ದೇಶ

ಗಳೊಡನೆ ಹೊಂದಿದ್ದ ವ್ಯಾಪಾರ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳು ತಿಳಿಯುತ್ತವೆ.

ಅನಂತರದ ಕಾಲದಲ್ಲಿ ಕರ್ನಾಟಕದ ದಕ್ಷಿಣಭಾಗವು ಮೈಸೂರು ಸಂಸ್ಥಾನವೆಂದು ಖ್ಯಾತವಾಗಿ ಅಕ್ಕಪಕ್ಕದ ರಾಜ್ಯಗಳೊಡನೆ ಸಂಬಂಧಗಳನ್ನು ಹೊಂದಿದ್ದು, ಮಾದರಿ ಮೈಸೂರು ಎಂಬ ಹೆಸರಿನಿಂದ ಖ್ಯಾತಿ ಗಳಿಸಿದ್ದಿತು. ಭಾರತವು ಸ್ವತಂತ್ರವಾದ ಸ್ವಲ್ಪ ಕಾಲಾನಂತರ, ಮೈಸೂರು ರಾಜ್ಯ ಎಂಬ ಹೆಸರಿನಲ್ಲಿ ಇತರ ಕನ್ನಡ ಭಾಷಾ ಪ್ರದೇಶಗಳನ್ನೆಲ್ಲ ಒಳಗೊಂಡಿತು. ಅನಂತರ ಆ ಹೆಸರು ಹೋಗಿ ಕರ್ನಾಟಕ ಎಂಬ ಪ್ರಸಿದ್ಧವಾದ ಹೆಸರನ್ನು ಮತ್ತೆ ಪಡೆದು, ಇತರ ರಾಜ್ಯಗಳೊಂದಿಗೆ ವಿಶೇಷವಾಗಿ ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿದ್ದು, ಭಾರತೀಯ ಸಂಸ್ಕೃತಿಗೆ ತನ್ನ ಕಾಣಿಕೆಯನ್ನು ಸಮರ್ಪಿಸುತ್ತಿದೆ. ಕರ್ನಾಟಕದ ಶ್ರೀಗಂಧ, ದಂತದ ಕೆತ್ತನೆಯ ಕೆಲಸ, ಬೇಲೂರು, ಹಳೇಬೀಡು, ಹಂಪೆ, ಮೇಲುಕೋಟೆ, ಶೃಂಗೇರಿ, ಉಡುಪಿ, ಶ್ರವಣಬೆಳಗೊಳ, ಗೋಳಗುಮ್ಮಟ ಇರುವವರೆಗೂ ಕರ್ನಾಟಕವು ಭಾರತದ ಇತರ ಪ್ರಾಂತ್ಯ ಮತ್ತು ಭಾರತದ ಹೊರಗಿನ ದೇಶಗಳೊಂದಿಗೆ ಸಾಂಸ್ಕೃತಿಕ ಸಂಬಂಧಗಳನ್ನು ಹೊಂದಿರುತ್ತದೆ. ಇದೇ ಮಾನವರ ಸಹಬಾಳ್ವೆಗೆ ಸುಗಮವಾದ ದಾರಿ.



ಯಾರ ಮನಸ್ಸು ಶುದ್ಧವೋ ಅವನು ಪರಿಶುದ್ಧನು ಮತ್ತು ಯುಕ್ತಾಯುಕ್ತ ವಿವೇಕವುಳ್ಳವನೇ ಪಂಡಿತನು.

—ಶಂಕರಾಚಾರ್ಯ

ಸತ್ಪಾತ್ರದಲ್ಲಿ ಶ್ರದ್ಧೆಯಿಂದ ದಾನಮಾಡುವುದರಿಂದ ಸಕಲ ಪ್ರಯೋಜನಗಳು ಲಭಿಸುತ್ತವೆ.

—ವಾಲ್ಮೀಕಿ

ಪುಸ್ತಕ ವಿಮರ್ಶೆ

ವರ್ಷ (ಕಥಾಸಂಕಲನ)—ಸಂಪಾದಕರು: ಮೋಹನ್ ವೆರ್ಣೇಕರ್; ಪ್ರಕಾಶಕರು: ಜೈಸು ಪ್ರಕಾಶನ, ಚಂಪಾ ಕಟ್ಟಡ, ಶಿಕಾರಿಪುರ-೫೭೭೪೨೭, ಶಿವಮೊಗ್ಗ ಜಿಲ್ಲೆ; ಪ್ರಥಮ ಮುದ್ರಣ; ಏಪ್ರಿಲ್, ೧೯೮೩; ಬೆಲೆ; ೮ ರೂ.; ಪುಟಗಳು: viii+೧೩೬.

ಇದು ಹನ್ನೆರಡು ಮಂದಿ ಉದಯೋನ್ಮುಖ ಬರಹಗಾರರ ಕಥಾ ಸಂಕಲನ. ನಮ್ಮ ಅನೇಕ ಪ್ರಕಾಶಕರ ವ್ಯಾಪಾರೀ ಮನೋಭಾವದಿಂದಾಗಿ ಕೇವಲ ಕಾದಂಬರಿಗಳಷ್ಟೇ ಪ್ರಕಟಣೆಯ ಮೋಕ್ಷ ಕಾಣುತ್ತಿರುವ ಈ ದಿನಗಳಲ್ಲಿ, ಸಾಹಿತ್ಯದ ಬಗ್ಗೆ ಗಂಭೀರ ಆಸಕ್ತಿಯುಳ್ಳ ಹೆಚ್ಚು ಹೆಸರು ಮಾಡಿರದ ವ್ಯಕ್ತಿಗಳು—ಹೀಗೆ ಒಟ್ಟುಗೂಡಿ ತಮ್ಮ ಕಥಾ ರೂಪದ ಬರವಣಿಗೆಯನ್ನು ತಾನೇ ಪ್ರಕಟಿಸಲು ಮುಂದಾಗಿರುವುದು ನಿಜಕ್ಕೂ ಅನುಕರಣೀಯ.

ಕಥೆಗಳನ್ನು ನೀಡಿದ್ದಲ್ಲದೆ, ಹಣಕಾಸಿನ ನೆರವಿನ ಜೊತೆಗೆ ಶೇಕಡಾ ೬೦ರಷ್ಟು ಪ್ರತಿಗಳ ಮಾರಾಟದ ಹೊಣೆಯನ್ನೂ ವಹಿಸಿಕೊಂಡಿರುವ ಇಲ್ಲಿನ ಲೇಖಕ, ಲೇಖಕಿಯರು "ಸಂಘಟನೆ"ಯಿಂದ ಹೆಚ್ಚಿನದನ್ನು ಸಾಧಿಸಬಹುದೆಂದು ತೋರಿಸಿಕೊಟ್ಟಿದ್ದಾರೆ.

ಇಲ್ಲಿನ ಕಥೆಗಳಲ್ಲಿ ಸಾಮಾನ್ಯವಾಗಿ ಕಂಡು ಬರುವುದು—ಪ್ರೇಮಿಗಳ ನೋವು-ನಲಿವು; ಅಸಹಾಯಕತೆಯಿಂದ, ಸನ್ನಿವೇಶಗಳ ಕೈವಾಡದಿಂದ ಮಾನವೀಯ ಮೌಲ್ಯಗಳು ಅನುಭವಿಸುವ ಸೋಲು; ಇತ್ಯಾದಿ ವಿಷಯಗಳೇ. ಇರುವ ಹನ್ನೆರಡು ಕಥೆಗಳಲ್ಲಿ ವಸ್ತು–ವಿನ್ಯಾಸ–ತಂತ್ರ–ಧೋರಣೆ ಈ ಎಲ್ಲ ದೃಷ್ಟಿಯಿಂದ ಗಮನ ಸೆಳೆಯುವುದು ಶ್ರೀ ಟಿ. ಆರ್. ವರದರಾಜನ್ ಅವರ "ತರಂಗಗಳು", ಶ್ರೀಮತಿ ಪಿ. ಸುಚರಿತ ಅವರ "ಅರ್ಧಾಂಗಿ", ಶ್ರೀ ವೈ.ಎನ್. ಗುಂಡೂರಾವ್ ಅವರ "ಸೆಳೆತ" ಮತ್ತು ಶ್ರೀ ಮೋಹನ್ ವೆರ್ಣೇಕರ್ ಅವರ "ಮೋಸ".

ವಿದೇಶಿ ವಿದ್ಯಾರ್ಥಿಗಳ ತಂಡವೊಂದನ್ನು ಉದ್ಯಾನವನದಲ್ಲಿ ಆಕಸ್ಮಿಕವಾಗಿ ಭೇಟಿ ಮಾಡುವ "ತರಂಗಗಳು" ವಿನ ಕಥೆಗಾರರು, ಅನಿವಾರ್ಯವಾಗಿ ಒಂದು ರಾತ್ರಿಯ ಮಟ್ಟಿಗೆ ತಮ್ಮ ಮನೆಯಲ್ಲೇ ಉಳಿಯಬೇಕಾಗಿ ಬಂದಾಗ ಅವರುಗಳಿಗೆ ಆತಿಥ್ಯ ನೀಡಲು ಆ ಪ್ರವಾಸಿಗಳ ಸ್ವಚ್ಛಂದ ಪ್ರವೃತ್ತಿಯಿಂದಾಗಿ ವಿಫಲರಾಗುತ್ತಾರೆ. ಉಭಯ ಸಂಸ್ಕೃತಿಗಳ ಸೂಕ್ಷ್ಮ ಚಿತ್ರಣ ಈ ಕಥೆಯ ಬೆನ್ನೆಲುಬು.

ದಿನ ಬಳಕೆಯ ಸೀರೆಯನ್ನು ೨೫ ರೂ.ಗೆ ಕೊಂಡ ತನ್ನ "ಹೆಂಡತಿ"ಯನ್ನು

ಮೂದಲಿಸುವ "ಗಂಡ"ನಿಗೆ ತಾನು ಮತ್ತು ತನ್ನ ಕ್ರಿಯೆಗಳು ಅವನ ಆಗು ಹೋಗುಗಳಿಗೆ ಅನಿವಾರ್ಯ, ಅರ್ಥಪೂರ್ಣ ಮತ್ತುಪೂರಕ-ಎಂದು ನಯವಾಗಿಯೇ ತೋರಿಸಿಕೊಡುವುದರ ಚಿತ್ರಣ "ಅರ್ಧಾಂಗಿ"ಯಲ್ಲಿದೆ.

"ಸೆಳೆತ"ದಲ್ಲಿ ತನ್ನ ಹೆಂಡತಿಯನ್ನೇ ಮರೆತು, ಅನ್ಯ ಹೆಣ್ಣುಗಳೊಂದೊಂದರಲ್ಲೂ ಆಕರ್ಷಕ ಗುಣಗಳನ್ನು ಕಾಣುವ ನಾಯಕ ಕೊನೆಗೆ ತಾನು ಕೈಹಿಡಿದಿದ್ದ ಅವಳಲ್ಲೇ ಆ ಎಲ್ಲ ಆಕರ್ಷಣೆ ಅಡಗಿರುವುದನ್ನು ಅರಿಯುತ್ತಾನೆ.

"ನ್ಯಾಯ ಪಕ್ಷಪಾತಿ, ಉದಾರ ಹೃದಯ, ಆಪಧ್ಬಾಂಧವ" ಎನಿಸಿಕೊಂಡ ಹಳ್ಳಿಯ "ದೊಡ್ಡಕುಳ"ವೊಂದು ದೇವರ ಹೆಸರಲ್ಲಿ ನಡೆಸುವ ಅಕ್ರಮಗಳ ದಟ್ಟ ನಿರೂಪಣೆ "ಮೋಸ"ದಲ್ಲಿದೆ.

ಮಿಕ್ಕ ಕಥೆಗಳ ಪೈಕಿ ಆರು ಸಾಮಾನ್ಯ ಮಟ್ಟದ್ದಾದರೆ, ಉಳಿದೆರಡು ತೀರಾ ನಿರಾಶೆಗೊಳಿಸುತ್ತದೆ.

"ಇಲ್ಲಿನ ಕತೆಗಳ ಹೂರಣದಲ್ಲಿ ಬದುಕಿನ ಎಳೆಗಳನ್ನು ಹಿಡಿದು ನೋಡುವ ದಿಟ್ಟತನವಿದೆ; ಕತೆಗಾರಿಕೆಯಲ್ಲಿ ಬೆಳೆಯುತ್ತಿರುವ ಅನುಭವದ ಹಂಬಲವಿದೆ" ಎಂಬ ಪ್ರಕಾಶಕರ ಅಭಿಪ್ರಾಯ ಈ ಸಂಕಲನದ ಕೆಲವು ಕೃತಿಗಳ ಕುರಿತಾಗಿ ಸತ್ಯವೆನಿಸುತ್ತದೆ.

ಆಕರ್ಷಕ ರಕ್ಷಾಪುಟ, ಸಂಕಲನದ ಬರಹಗಾರರ ಹೊಸ ಬಗೆಯ ಪರಿಚಯ, ಹಿತವಾದ ಮುದ್ರಣ—"ವರ್ಷ"ದ ಕುರಿತಾಗಿ ಆಡಬಹುದಾದ ಇನ್ನಿತರ ಮೆಚ್ಚುಗೆಯ ಮಾತುಗಳು.

ವೆಂ. ವೆಂಕಟಸುಬ್ಬಯ್ಯ



ಜಿಪುಣನಿಗಿಂತ ದೊಡ್ಡ ದಾನಿ ಯಾರೂ ಇಲ್ಲ. ಕೈಯಲ್ಲಿ ಮುಟ್ಟದೆ, ಏನೂ ಪರಿಶ್ರಮ ತೆಗೆದುಕೊಳ್ಳಲಾರದೇ ತನ್ನ ಎಲ್ಲ ಧನವನ್ನು ಇತರರಿಗೆ ಬಿಟ್ಟು ಹೋಗುತ್ತಾನೆ.

—ವ್ಯಾಸ

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ : ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು.

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯದರ್ಶಿ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಕೃಷ್ಣಮೂರ್ತಿಪುರಂ : : ಮೈಸೂರು-೪

Reg. No. KRNN. 29 / WPP 6 | LICENSE No. 21
LICENSED TO POST WITHOUT PREPAYMEN

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ವಿದ್ಯಾಪೀಠಗಳು

ಶ್ರೀ ಶಂಕರಾಚಾರ್ಯ

ಆಂಡರ್‌ಸನ್ ಮತ್ತು ಇತರ ಕತೆಗಳು

ನಳಚರಿತ್ರೆಯ ಸಂಗ್ರಹ

ಗ್ರಂಟ್ವಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು

ತರಿಸಿ ಓದಿರಿ

Edited by R. Boraiah, Printed by H. G. Ramaswamy Iyenga Manager Karnataka State Adult Education Council Pres and Published by Karnataka State Adult Education Counc Mysore city (India)